ಕಲಾತತ್ತ್ವಮಹರ್ಷಿ

ಆನಂದ ಕುಮಾರಸ್ವಾಮಿ

ಸಾ.ಕೃ.ರಾಮಚಂದ್ರ ರಾವ್



ಕಲಾತತ್ತ್ವಮಹರ್ಷಿ

ಆನಂದ ಕುಮಾರಸ್ವಾಮಿ

ಸಾ. ಕೃ. ರಾಮಚಂದ್ರರಾವ್

ಅಭಿಜ್ಞಾನ

ನಂ. 49, 'ಮಾಸ್ತಿ ಮನೆ' (ಮಹಡಿ),
ಡಾ. ಮಾಸ್ತಿ ವೆಂಕಟೇಶ ಅಯ್ಯಂಗಾರ್ ರಸ್ತೆ, 2ನೇ ಅಡ್ಡರಸ್ತೆ
ಗವಿಪುರಂ ವಿಸ್ತರಣ, ಬೆಂಗಳೂರು-560 019
☎: 2242 14 14, 94484 94949

Kalātattvamaharṣi Ananda Coomaraswamy (A Biography)
by Prof. S. K. Ramachandra Rao & Published by Abhijñāna
No. 141/8, 37th Cross, 26th Main, 9th Block, Jayanagar
Bangalore 560 069 ✆ 665 6814
Pages : viii + 44; Price : Rs. 25/-; Year 2000

ಹಕ್ಕುಗಳನ್ನು ಕಾದಿರಿಸಲಾಗಿದೆ

ಪ್ರತಿಗಳು : 2000

ಬೆಲೆ : ರೂ. 25/-

ರೇಖಾಚಿತ್ರಗಳು : ಲೇಖಕರವು
ಮುಖಪುಟವಿನ್ಯಾಸ : ಶ್ರೀ ಶ್ರೀಪಾದ್

ಮುದ್ರಕರು :
ಬಿ. ಎನ್. ನಟರಾಜ್
ಶ್ರೀ ನಿತ್ಯಾನಂದ ಪ್ರಿಂಟರ್ಸ್
ಅಶೋಕನಗರ, ಬೆಂಗಳೂರು-560 050
ದೂರವಾಣಿ: 652 60 27

ಅಭಿಜ್ಞಾನದ ಮಾತು

ಜ್ಯೋತಿಸ್ತಮೋಹರಮಲೋಚನಗೋಚರಂ ತ-
ಜ್ಜಿಹ್ವಾದುರಾಸದರಸಂ ಮಧುನಃ ಪ್ರವಾಹಮ್।
ದೂರೇ ತ್ವಚಃ ಪುಲಕಬಂಧಿ ಪರಂ ಪ್ರಪದ್ಯೇ
ಸಾರಸ್ವತಂ ಕಿಮಪಿ ಕಾಮದುಘಂ ರಹಸ್ಯಮ್॥

ಕಣ್ಣಿಗೆ ಕಾಣದ ಆದರೆ ಕತ್ತಲೆಯನ್ನು ಕಳೆಯುವ ಕಾಂತಿ, ನಾಲಗೆಗೆ ಎಟುಕದ ಜೇನಿನ ಲಹರಿ, ಮೈಸೋಂಕದೆಯೇ ರೋಮಾಂಚನವನ್ನೀಯುವ ಸುಖಸ್ಪರ್ಶ—ಇದುವೆ ಸಕಲ ಕಾಮಧೇನುವೆನಿಸಿದ ಸರಸ್ವತಿಪ್ರಪಂಚದ ರಹಸ್ಯ. ಇದೇ ನಮಗೆ ಶರಣ್ಯ.

ಭಾರತದ ಹಿರಿಮೆಯನ್ನೂ ಹೃದಯವನ್ನೂ ಅರಿತುಕೊಂಡು ಮಹಾಪುರುಷ ಪಂಕ್ತಿಯ ಎತ್ತರದ ಪೀಠದಲ್ಲಿ ವಿರಾಜಮಾನರಾಗಿರುವವರಲ್ಲಿ ಪ್ರಮುಖರಾದವರು ಆನಂದ ಕೆ. ಕುಮಾರಸ್ವಾಮಿಯವರು. ಆಧುನಿಕಕಾಲದ ಋಷಿಯೆಂದೇ ಕೀರ್ತಿತ ರಾಗಿರುವ ಈ ಮಹಾತಪಸ್ವಿಯನ್ನು ಕುರಿತಾದ ಜೀವನಚರಿತ್ರೆಯೊಂದರ ಕೊರತೆ ಕೇವಲ ಕನ್ನಡಭಾಷೆಯಲ್ಲಷ್ಟೇ ಅಲ್ಲ, ಇಂಗ್ಲಿಷ್‌ಭಾಷೆಯಲ್ಲೂ ಇದೆ. ಕನ್ನಡದ ಮಟ್ಟಿಗೆ ಈ ಕೊರತೆಯನ್ನು ಪ್ರಕೃತ ಕೃತಿಯ ಮೂಲಕ ತುಂಬಿಸಿರುವವರು—ಆನಂದ ಕುಮಾರಸ್ವಾಮಿಯವರಂತೆಯೇ ತಮ್ಮ ಜೀವನವನ್ನೂ ಭಾರತೀಯಧರ್ಮ, ಸಂಸ್ಕೃತಿ, ಕಲೆಗಳಿಗಾಗಿಯೇ ಮುಡುಪಿಟ್ಟಿರುವಂಥ ಪ್ರೊ॥ ಸಾ. ಕೃ. ರಾಮಚಂದ್ರರಾಯರು. ಕುಮಾರಸ್ವಾಮಿಯವರಂಥ ಮಹಾಪ್ರತಿಭೆಯ ಕಾರ್ಯೋನ್ನತಿಯನ್ನೂ, ಅವರ ದಾರ್ಶನಿಕತೆಯ ಕಾಣ್ಕೆಯನ್ನೂ ಅವಗತಮಾಡಿಕೊಳ್ಳಬಲ್ಲಂಥ ಕ್ರತುಶಕ್ತಿಯು ಮತ್ತೊಬ್ಬ ಕುಮಾರಸ್ವಾಮಿಯಂಥವರಿಗೇ ಲಭಿಸಬಲ್ಲದು. ಇಂಥ ಸಾಧಕರ ವಿರಳಸಾಲಿನ ಅಗ್ರಸ್ಥಾನವನ್ನು ಅಲಂಕರಿಸಿರುವ ವಿದ್ಯಾಲಂಕಾರ, ಶಾಸ್ತ್ರಚೂಡಾಮಣಿ, ಸಂಗೀತ ಕಲಾರತ್ನ, ಪ್ರಾಚಾರ್ಯ ರಾಮಚಂದ್ರರಾಯರು ಈ ಕೃತಿಯನ್ನು ಸಿದ್ಧಪಡಿಸಿಕೊಟ್ಟು ಕನ್ನಡಿಗರಿಗೆ ಮಹೋಪಕಾರವನ್ನು ಮಾಡಿದ್ದಾರೆ. ಈ ಪುಸ್ತಕದಲ್ಲಿ ಅಳವಡಿಸಿರುವ ರೇಖಾಚಿತ್ರಗಳನ್ನೂ ರಾಯರೇ ಬರೆದುಕೊಟ್ಟಿದ್ದಾರೆ. 'ಕಲಾತತ್ತ್ವಮಹರ್ಷಿ ಆನಂದ ಕುಮಾರಸ್ವಾಮಿ'ಯಂಥ ವಿಶೇಷಕೃತಿಯನ್ನು ಪ್ರಕಟಿಸುವಂಥ ಅವಕಾಶ ಒದಗಿದುದಕ್ಕಾಗಿ 'ಅಭಿಜ್ಞಾನ'ವು ಹರ್ಷಿಸುತ್ತಿದೆ. ಈ ಆನಂದಕ್ಕೆ ಕಾರಣಕರ್ತರಾದ ಪೂಜ್ಯ ರಾಮಚಂದ್ರರಾಯರಿಗೆ 'ಅಭಿಜ್ಞಾನ'ದ ಅನಂತ ನಮನಗಳು. ರಾಯರ ಆಶೀರ್ವಾದವು ಸದಾ 'ಅಭಿಜ್ಞಾನ'ದ ಮೇಲಿರಲಿ ಎಂಬುದಷ್ಟೆ ನಮ್ಮ ನಿತ್ಯಪ್ರಾರ್ಥನೆ.

ರಾಮಚಂದ್ರರಾಯರ ಇನ್ನೂ ಕೆಲವು ಕೃತಿಗಳು ಸದ್ಯದಲ್ಲೇ ನಿಮ್ಮನ್ನು ತಲಪಲಿವೆ. ಈಗ ಮಾರುಕಟ್ಟೆಯಲ್ಲಿ ಅಲಭ್ಯವಾಗಿರುವ ಅವರ ಎಲ್ಲ ಕೃತಿಗಳನ್ನೂ ನಿಮಗೆ ಮುಟ್ಟಿಸಬೇಕೆಂಬುದು 'ಅಭಿಜ್ಞಾನ'ದ ಮಹದಾಶೆ. ಇದನ್ನು ಕಾರ್ಯಗತಗೊಳಿಸುವ

ಶಕ್ತಿ ಓದುಗರ ಕೈಯಲ್ಲೇ ಇದೆ. 'ಅಭಿಜ್ಞಾನ'ದ ಪ್ರಕಟನೆಗಳನ್ನು ಆದರದಿಂದ ಬರಮಾಡಿಕೊಳ್ಳುವಿರೆಂಬ ವಿಶ್ವಾಸವೂ ನಮಗಿದೆ. **ತಿರುಪತಿ ತಿಮ್ಮಪ್ಪ, ಈಶಾವಾಸ್ಯೋಪನಿಷತ್ತು, ಬುದ್ಧನ ಬೆಳಕು**—ಇವು ಮುದ್ರಣದ ಹಂತದಲ್ಲಿರುವ ರಾಯರ ಕೆಲವು ಕೃತಿಗಳು.

ಆನಂದ ಕುಮಾರಸ್ವಾಮಿಯವರನ್ನು ಕುರಿತಾದ ಪ್ರಕೃತ ಈ ಕೃತಿ ಹೆಚ್ಚಾಗಿ ಅವರ ಬದುಕಿನ ವಿವರಗಳನ್ನು ಅನಾವರಣಗೊಳಿಸುವಂಥದು. ಅವರ ಕೃತಿಗಳನ್ನೂ ಚಿಂತನೆಯನ್ನೂ ವಿವರಿಸುವಂಥ ವಿಸ್ತಾರಗ್ರಂಥವೊಂದನ್ನು ಹೊರತರುವ ಆಶಯವೂ ನಮಗಿದೆ. ಈ ದಿಶೆಯಲ್ಲಿ ನಮಗೆ ಪ್ರೇರಕರಾದವರು ನಮ್ಮ ಆತ್ಮೀಯರೂ ವಿದ್ವಾಂಸರೂ ಕಲಾಚಿಂತಕರೂ ಆದ ಶ್ರೀ ಸುಧೀರ್ ಕೃಷ್ಣಸ್ವಾಮಿಯವರು. ನಮ್ಮ ಕೋರಿಕೆಗೆ ಓಗೊಟ್ಟು ಆನಂದ ಕುಮಾರಸ್ವಾಮಿಯವರ ವಿಚಾರಸರಣಿಯನ್ನು ನಿರೂಪಿಸುವ ಕೃತಿಯೊಂದನ್ನು ರಚಿಸಿಕೊಡಲು ಒಪ್ಪಿರುವವರು ಬಹುಶ್ರುತವಿದ್ವಾಂಸರಾದ ಶ್ರೀಯುತ ಕೆ. ಎಸ್. ಕಣ್ಣನ್ ಅವರು. ಇವರ ಸಾರಸ್ವತಸಿದ್ಧಿಯೂ ವಿದ್ವತ್ತೆಯೂ ಈಗಾಗಲೇ ಲೋಕವಿಶ್ರುತ ವಾಗಿದೆ. ಈ ಇಬ್ಬರು ಮಹನೀಯರಿಗೂ 'ಅಭಿಜ್ಞಾನ'ದ ನಮನಗಳು.

ಆನಂದ ಕುಮಾರಸ್ವಾಮಿಯವರ ಭಾವಚಿತ್ರವನ್ನು ಒದಗಿಸಿ ಮುಖಪುಟದ ಮೌಲ್ಯವನ್ನು ಹೆಚ್ಚಿಸಿದವರು 'ಸೆಲೆಕ್ಟ್ ಬುಕ್ ಹೌಸ್'ನ ಶ್ರೀ ಕೆ. ಕೆ. ಎಸ್. ಮೂರ್ತಿಯವರು. ಅವರಿಗೂ ನಮ್ಮ ಧನ್ಯವಾದಗಳು. ಮುಖಪುಟವಿನ್ಯಾಸವನ್ನು ಸುಂದರವಾಗಿ ರಚಿಸಿಕೊಟ್ಟ ಮಿತ್ರ ಶ್ರೀ ಶ್ರೀಪಾದ್ ಅವರಿಗೂ ಧನ್ಯವಾದಗಳು. ಈ ಪುಸ್ತಕವನ್ನು ಮುದ್ದಾಗಿ ಮುದ್ರಿಸಿಕೊಟ್ಟ ಶ್ರೀ ನಿತ್ಯಾನಂದ ಪ್ರಿಂಟರ್ಸ್‌ನ ಶ್ರೀ ಬಿ. ಎನ್. ನಟರಾಜ್ ಅವರಿಗೂ, ಅವರ ಸಿಬ್ಬಂದಿವರ್ಗಕ್ಕೂ ನಮ್ಮ ನಮಸ್ಕಾರಗಳು. ಅಭಿಜ್ಞಾನ ಬಳಗದ ಗುರುಸ್ಥಾನದಲ್ಲಿ ನಿಂತು ನಮಗೆ ಮಾರ್ಗದರ್ಶನ ನೀಡುತ್ತಿರುವ ಶತಾವಧಾನಿ ಡಾ॥ ಆರ್. ಗಣೇಶ್ ಅವರಿಗೆ ನಮನಗಳನ್ನು ಅರ್ಪಿಸುವುದು ನಮ್ಮ ನಿತ್ಯಕರ್ತವ್ಯವೇ ಹೌದು. ಓದುಗ ಮಹಾಶಯರೇ, 'ಅಭಿಜ್ಞಾನ'ದ ಪ್ರಕಟನೆಗಳನ್ನು ಕೊಂಡು ಓದಿ, ನಿಮ್ಮ ಸಲಹೆ-ಸೂಚನೆಗಳನ್ನು ನೀಡಿ, ನಮಗೆ ಇನ್ನಷ್ಟು ಬಲವನ್ನು ತುಂಬಿರೆಂದು ನಿಮ್ಮಲ್ಲಿ ಪ್ರಾರ್ಥಿಸುತ್ತಿದ್ದೇವೆ.

'ಅಭಿಜ್ಞಾನ'ಕ್ಕೆ ಶ್ರೀರಕ್ಷೆಯಾಗಿರುವ ಎಲ್ಲ ಪ್ರತ್ಯಕ್ಷ-ಪರೋಕ್ಷಶಕ್ತಿಗಳಿಗೂ ನಾವು ತಲೆಬಾಗಿ ನಮಿಸುತ್ತಿದ್ದೇವೆ.

ಶ್ರೀ ವಿಕ್ರಮಸಂವತ್ಸರ, ಶ್ರಾವಣಪೌರ್ಣಮಾ
೧೫-೮-೨೦೦೦

ಅಭಿಜ್ಞಾನದ ಪರವಾಗಿ
ಎಸ್. ಸೂರ್ಯಪ್ರಕಾಶ ಪಂಡಿತ್

ಸಂಪಾದಕರ ಮಾತು

ಜಾಗತಿಕಕಲಾಮೀಮಾಂಸೆಯ ಸಂದರ್ಭದಲ್ಲಿ ಆನಂದಕುಮಾರಸ್ವಾಮಿಯವರ ಹೆಸರು ಅಜರಾಮರವಾದುದು. ವಿಶೇಷತಃ ಭಾರತೀಯ ಕಲಾಸಂಸ್ಕೃತಿಯ ಪ್ರತ್ಯಭಿಜ್ಞಾನಕ್ಕಂತೂ ಅವರದು ಅನ್ಯಾದೃಶ ಯೋಗದಾನ. ಕಲೆಯ ನೆಲೆ, ಕಲಾತತ್ತ್ವದ ಮೌಲ್ಯ, ಕಲೆಯ ದರ್ಶನ ಹಾಗೂ ಕಲಾಭಿವ್ಯಕ್ತಿ ಮುಂತಾದ ಸೌಂದರ್ಯಸಂಹಿತಾಸಂಬದ್ಧಸಕಲ ವಿಚಾರಗಳನ್ನೂ ಅಳವಿಗೆ ಮೀರಿದ ಹಾಸು-ಬೀಸುಗಳಿಂದ ಪರಿಶೀಲಿಸಿ ಪ್ರತಿಪಾದಿಸಿ ಪ್ರತಿಸ್ಪಂದಿಸಿಕೊಟ್ಟ ಪಂಕ್ತಿಪಾವನರಲ್ಲಿ ಕುಮಾರಸ್ವಾಮಿಯವರು ಬಹುಮಾನನೀಯರು.

ಕಲಾಮೀಮಾಂಸೆಗೊಂದು ಸಮಗ್ರವೂ ಸರ್ವಗ್ರಾಸಿಯೂ ಆದ ವೈಶ್ವಿಕಸಂಸ್ಕೃತಿ ಮೌಲ್ಯವುಳ್ಳ ದರ್ಶನವನ್ನು ದೃಢವಾಗಿ ಪರಿಕಲ್ಪಿಸಿಕೊಟ್ಟ ದಾರ್ಶನಿಕರವರೆನ್ನಬಹುದು. ಅಂತೆಯೇ ಅನಂತಮುಖವೂ ಆಪಾತತಃ ವಿರೋಧಿಯೂ ಎನ್ನಬಹುದಾದ ಜಾಗತಿಕ ಕಲಾಪ್ರೇರಕಸ್ರೋತಸ್ಸುಗಳಿಗೆ ಸಚ್ಚಿದಾನಂದದ ಸರಸೋದಾರನಿರ್ಭರಸಾಗರಾಶ್ರಯವನ್ನು ರೂಪಿಸಿದ ಪ್ರಖರಸಂಶೋಧಕರವರೆನ್ನಬಹುದು. ಅಷ್ಟೇ ಅಲ್ಲ, ಭಾರತೀಯಕಲೆಯು ವಿಶ್ವದಲ್ಲಿ ಪರಿಹಾಸಾಸ್ಪದವಾಗುತ್ತಿರುವ ವಿಷಮಸಮಯದಲ್ಲಿ ಅದಕ್ಕೆ ಉಚ್ಚವೂ ಅತ್ಯುಚ್ಚವೂ ಆದ ಸ್ಥಾನವು ನ್ಯಾಯವಾಗಿಯೇ ಸಲ್ಲಬೇಕೆಂದು ಪ್ರತಿಪಾದಿಸಿ ಸಾಧಿಸಿ ತೋರಿಸಿದ ಉಜ್ಜ್ವಲಭಾರತೀಯವಿದ್ಯಾಧುರಂಧರರಿವರೆನ್ನಬಹುದು. ಪ್ರಾಯಶಃ ಅವರಂತೆ ಮತ್ತಾವ ಕಲಾದಾರ್ಶನಿಕನೂ ವಿಶ್ವಸಂಸ್ಕೃತಿಸಮುದ್ರವನ್ನು ನಿಶ್ಶೇಷವಾಗಿ ಆಪೋಶಿಸಿರಲಿಲ್ಲವೆಂಬ ವಾಸ್ತವವೊಂದೇ ಸಾಕು ಆನಂದ ಕುಮಾರಸ್ವಾಮಿಯವರ ಎತ್ತರ-ಬಿತ್ತರಗಳನ್ನೂ ಅನನ್ಯತೆ-ಧನ್ಯತೆಗಳನ್ನೂ ಬಿಂಬಿಸುತ್ತದೆ. ಹೆಚ್ಚೇನು; ಇಂದಿಗೂ ಅವರ ಸುಮಾರು ಐದುಸಾವಿರ ಪುಟಗಳಷ್ಟು ವ್ಯಾಪ್ತಿಯುಳ್ಳ ನಾನಾ ಕಲಾ-ಶಾಸ್ತ್ರ-ತತ್ತ್ವ-ಕೌಶಲ-ಸಂಸ್ಕೃತಿಸಂಬಂಧಿತವೂ ಬಹುಭಾಷೀಯವೂ ಬಹುದೇಶೀಯವೂ ಆದ ಲೇಖನಸಂಪದವು ವಿದ್ವತ್ತೆಗೂ ಅಂತರ್ವೀಕ್ಷಣೆಗೂ ಒರೆಗಲ್ಲಾಗಿದೆ, ಮಸೆಗಲ್ಲೂ ಆಗಿದೆ. ಮಾತ್ರವಲ್ಲ, ಆನಂದ ಕುಮಾರಸ್ವಾಮಿಯವರನ್ನರಿಯದೆ ಭಾರತೀಯಕಲಾಹೃದಯವನ್ನು ತಿಳಿಯಬಲ್ಲೆನೆಂಬುದು ಸಾಹಸದ ಮಾತಾಗಿಯೂ ಪರಿಣಮಿಸಿದೆ. ಇಂಥ ಕಲಾತತ್ತ್ವಮಹರ್ಷಿಯ ಬದುಕಿನ ಬಗೆಗೆ ಇನಿದಾಗಿ ಬರೆದು ಸಹೃದಯರಿಗೆ ಉಪಕರಿಸಿರುವವರು ಆದರಣೀಯ ಪ್ರಾಚಾರ್ಯ ಎಸ್. ಕೆ. ರಾಮಚಂದ್ರರಾಯರು. ಇವರ ಪ್ರಕೃತ ಕಿರುಹೊತ್ತಿಗೆಯು ಸಂಕ್ಷೇಪವಾಗಿದೆಯಾದರೂ ಸರ್ವಾಂಗಸುಂದರವಾಗಿ ಕುಮಾರಸ್ವಾಮಿಯವರ ಹಿರಿಮೆ-ಗರಿಮೆಗಳ ಗುಂಗನ್ನು ನಮ್ಮಲ್ಲಿ ಉಂಟುಮಾಡದಿರದು. ಇದಕ್ಕೆ ಮುಖ್ಯಕಾರಣ ಪ್ರೊ॥ ರಾಮಚಂದ್ರ ರಾಯರೂ ಆನಂದ ಕುಮಾರಸ್ವಾಮಿಯವರ ಜಾಡಿನಲ್ಲೇ ನಡೆದ ಮತ್ತೊಬ್ಬ ಸರ್ವತೋ ಮುಖಪ್ರಜ್ಞಾಶಾಲಿ.

ಆಚಾರ್ಯ ರಾಮಚಂದ್ರರಾಯರ ಬಗ್ಗೆ ಹೇಳುವುದಾದರೂ ಹೇಗೆ? ಹೇಳದಿರುವುದಾದರೂ ಹೇಗೆ? ಅವರದು ಬರಿಯ ಪ್ರಸಿದ್ಧಿಯಲ್ಲ, ಸಿದ್ಧಿ; ಸಕಲವಿದ್ಯಾಸಮೃದ್ಧಿ, ಸಾರಸ್ವತಸುಧಾಬ್ಧಿ; ಇಂಥವರೊಬ್ಬಿಬ್ಬರನ್ನಾದರೂ ಪಡೆದರೆ ಸಾಕು ಆ ನಾಡು-ನುಡಿಗಳಿಗೆ

ಧನ್ಯತೆ ದೊರೆಯುವುದು; ಇಂಥವರೊಬ್ಬರಿದ್ದರೆ ಸಾಕು ಒಂದು ಸಂಸ್ಕೃತಿಗೆ ಹೆಮ್ಮೆ ಸಲ್ಲುವುದು. ಶ್ರೀ ರಾಮಚಂದ್ರರಾಯರನ್ನು ಏನೆಂದು ಹೇಳೋಣ? ಅವರ ಮೂವತ್ತು ಸಂಪುಟಗಳ ಋಗ್ವೇದಭಾಷ್ಯವನ್ನು ಗಮನಿಸಿ ಅವರನ್ನು ವೇದನಿಧಿಯೆನ್ನೋಣವೇ? ಆಯುರ್ವೇದವನ್ನೂ ಬಲ್ಲವರವರು. ಅವರ ಹತ್ತಾರು ಸಂಪುಟಗಳ ಆಗಮಕೋಶ-ದೈವತಕೋಶ-ಪ್ರತಿಮಾಕೋಶಾದಿಗಳನ್ನು ಕಂಡು ಅವರನ್ನು ವಿವಿಧಾಗಮಶಾಸ್ತ್ರಪಾರೀಣರು ಎನ್ನೋಣವೇ? ಸಂಗೀತಾದಿ ವಿವಿಧ ಲಲಿತಕಲಾರಹಸ್ಯವನ್ನೂ ಬಲ್ಲ ಸಂಗೀತಕಲಾರತ್ನ ರವರು. ವೇದಾಂತ, ಪೂರ್ವಮೀಮಾಂಸೆ, ಪಾಣಿನಿದರ್ಶನಗಳಂಥ ತತ್ತ್ವವಿದ್ಯೆಗಳ ಅಳವನ್ನರಿತ ಶಾಸ್ತ್ರಚೂಡಾಮಣಿಗಳೆನ್ನೋಣವೇ? ಜೈನ-ಬೌದ್ಧಾದಿ ಅವೈದಿಕದರ್ಶನಗಳ ಮೂಲಚೂಲಗಳನ್ನೂ ಅರಿತು ನುರಿತ ವಿಶ್ವಕುತೂಹಲಿ ಅವರು. ಶಿಲ್ಪವೇ ಸ್ಥಾಪತ್ಯವೇ ಚಿತ್ರವೇ ಸಾಹಿತ್ಯವೇ, ಯಾವುದುಂಟು ಯಾವುದಿಲ್ಲ? ಮನಶ್ಶಾಸ್ತ್ರದ ಪೂರ್ವಾಪರಗಳನ್ನು ಆಪೋಷಿಸಿದ ಪ್ರೊ॥ ರಾಯರು ಮ್ಯಾನೇಜ್‌ಮೆಂಟಿನ ಅಂತರಂಗವನ್ನೂ ಅನುವಾದಿಸ ಬಲ್ಲಂಥವರು. ಇನ್ನವರ ಬರೆವಣಿಗೆಯೋ ಬಂಗಾರದ ಬೆರಗೇ ಸರಿ. ಅಂಥ ಹದ-ಪಾಕ, ನವುರು-ನಾಜೂಕು, ಇನಿ-ಬನಿ, ಕುಸುರಿ-ಕೌಶಲ, ಮಾರ್ದವ-ಮಾಧುರ್ಯಗಳ ಪ್ರಸನ್ನ ಗಂಭೀರಗದ್ಯಶೈಲಿ ಅದೆಷ್ಟು ತಪಸ್ಸಿನ ಫಲವೋ?

ಕಥೆ-ಕಾದಂಬರಿ, ವಿಮರ್ಶೆ-ವ್ಯಕ್ತಿಚಿತ್ರ, ವಿವೃತಿ-ವಿಶ್ಲೇಷಣೆ, ಜೀವನಚರಿತ್ರೆ-ಕಲಾಮೀಮಾಂಸೆ, ಶಾಸ್ತ್ರ-ಸಂಶೋಧನೆ, ಅನುವಾದ-ಸಂವಾದ ಮುಂತಾದ ಎಲ್ಲಕ್ಕೂ ಬಾಗಿ ಬರುವ, ಬಳಸಿದಷ್ಟೂ ಬೆಳೆದು ಬೆಳಗುವ ಅವರ ಭಾಷಾಶಿಲ್ಪ ನಿಜಕ್ಕೂ ನಮ್ಮ ನುಡಿಯೊಡಲಿನ ರಸವಿಸ್ಮಯ. ವಿವಿಧ ಕಲೆಗಳಲ್ಲಿ ಪ್ರಯೋಗಪರಿಣತಿ, ಬಹುಶಾಸ್ತ್ರಗಳಲ್ಲಿ ಅಪಾರದೀಧಿತಿ, ಹತ್ತಾರು ಭಾಷೆಗಳಲ್ಲಿ ಅನರ್ಗಳ ಪಾಂಡಿತಿ, ವಿವಿಧ ಸಾಂಸ್ಕೃತಿಕ ಸಂದರ್ಭಗಳಲ್ಲಿ ಅಸಮಾನಸಾಧನಸಂಪದ.... ಎಲ್ಲಿಂದೆಲ್ಲಿಗೆ ಈ ವ್ಯಾಪ್ತಿ! ಎಂಥ ಗಹನತತ್ತ್ವದ ಸಂಕೀರ್ಣಸ್ತರವನ್ನೂ ಅರಿಯಬಲ್ಲ ಬುದ್ಧಿ, ಆ ಅರಿವನ್ನೆಲ್ಲ ಅಡಕವಾಗಿ ಪ್ರಸಂಗೋಚಿತಪರಿಪಾಕದಿಂದ ಪ್ರಯೋಗಿಸಬಲ್ಲ ಚಿತ್ತ, ಆ ಪ್ರಮೇಯನಿರೂಪಣೆಯಲ್ಲಿ ಎಣೆಯಿಲ್ಲದ ತಿಳಿತನ, ತುಂಬುತನ ಹಾಗೂ ನಳನಳಿಸುವ ಬೆಳಗಿನ ಬೆಡಗುಗಳನ್ನು ಬಗೆಗಾಣಿಸಬಲ್ಲ ಮನಸ್ಸು—ಈ ಒಂದೊಂದೂ ರಾಯರ ವಿದ್ಯಾಲಂಕಾರಗಳೇ. ದಿಟವಾಗಿ ಅವರು ನಮ್ಮೊಡನಿರುವ ಎಲ್ಲ ಕಾಲದ ಸಂಚಾರಿಸಂಸ್ಕೃತಿಸರ್ವಸ್ವರು, ಸರ್ವತಂತ್ರ ಸ್ವತಂತ್ರರು.

ಅವರಿಗೆ ಸಂದ ಪ್ರಶಸ್ತಿಗಳಿಗಾಗಲಿ ಬಂದ ಪುರಸ್ಕಾರಗಳಿಗಾಗಲಿ ಸಮರ್ಪಿತಸಂಮಾನ ಗಳಿಗಾಗಲಿ ನಿವೇದಿತನೀರಾಜನಗಳಿಗಾಗಲಿ ಅವರು ಬಗೆತೆತ್ತದ್ದಿಲ್ಲ, ನಗೆಮುರಿದದ್ದಿಲ್ಲ. ಅದೊಂದು ಸ್ವಾಂತಃಸುಖಾಯ ಸಾಗುವ ಲೀಲಾಖೇಲನ. ನಮ್ಮ ಹಿರಿದಾದ ಪರಂಪರೆಯ ತಂತುಗಳನ್ನು ಕೂಡಿದಮಟ್ಟಿಗೂ ಅಖಂಡವಾಗಿ ರಕ್ಷಿಸಿ, ವ್ಯಾಖ್ಯಾನಿಸಿ, ವಿಶ್ಲೇಷಿಸಿ ಬಾಳುವುದರಲ್ಲಿ ಜೀವನಸಾರ್ಥಕ್ಯ ಕಾಣುತ್ತಿರುವ ಪ್ರೊ॥ ರಾಮಚಂದ್ರರಾಯರ ಈ ಸಾರಸ್ವತಸವನಕ್ಕೆ ಮತ್ತೇನು ದವನ ಸಲ್ಲಿಸುವುದು? ಅವರು ಅನುಗ್ರಹಿಸುತ್ತಿರುವ ಎಲ್ಲ ಬಗೆಯ ವಿದ್ಯಾಸಮಾರಾಧನೆಗಳಿಗೂ ನಾವು ಋಣಿಗಳೆಂದು ಕೈಮುಗಿಯುವುದೊಂದೇ ನಮ್ಮಿಂದಾಗುವುದು.

ಶತಾವಧಾನಿ ರಾ. ಗಣೇಶ್

ಲೇಖಕರ ಮಾತು

ನಾಡಿನ ಧೀಮಂತರಲ್ಲಿ ಅಗ್ರಗಣ್ಯರೆನಿಸಿದವರು ಡಾ॥ ಆನಂದ ಕೆಂಟಿಷ್ ಕುಮಾರಸ್ವಾಮಿಯವರು. ಪ್ರಪಂಚದಲ್ಲೆಲ್ಲ ಕಲೆಯನ್ನು ಕುರಿತ ಚಿಂತನೆಗೆ ಇವರು ಪ್ರಸಿದ್ಧರಾದರೂ, ಭಾರತೀಯ ಸಂಸ್ಕೃತಿಯ ಸ್ವಾರಸ್ಯವನ್ನು ಲೋಕಕ್ಕೆ ಪರಿಚಯಮಾಡಿಸಿ ಕೊಡುವುದರಲ್ಲಿ ಅವರದ್ದು ಎತ್ತಿದ ಕೈ. ನಮ್ಮ ನಾಡಿನ ಕರಕುಶಲಕಲೆಗಳಿಂದ ಹಿಡಿದು ವೈದಿಕಸಂಪ್ರದಾಯದವರೆಗೆ ಇರುವ ಧಾರ್ಮಿಕನೆಲೆಯನ್ನೂ ಆಧ್ಯಾತ್ಮಿಕ ಸಂಪತ್ತನ್ನೂ ಮನವರಿಕೆಮಾಡಿಕೊಂಡರು; ಜಿಜ್ಞಾಸುಗಳಿಗೂ ಆಸಕ್ತರಿಗೂ ಇದನ್ನು ಮನದಟ್ಟು ಮಾಡಿಕೊಡಲೆಂದು ತಮ್ಮ ಬದುಕನ್ನೇ ಮುಡಿಪಾಗಿಟ್ಟರು. ಮೇಧಾವಿ, ಸಹೃದಯ, ರಸಿಕ ಮಾತ್ರವಲ್ಲದೆ ಶ್ರದ್ಧಾಳು, ಸಂಪ್ರದಾಯನಿಷ್ಠ, ಪರಮಪ್ರಾಮಾಣಿಕ. ವಿಶ್ವದ ಪ್ರಾಚೀನಮೌಲ್ಯಗಳಿಗೆ ಒಲಿದವರು, ಅಧ್ಯಾತ್ಮದ ಅಗತ್ಯವನ್ನು ನಂಬಿಕೊಂಡವರು. ಅವರ ಅನೇಕ ಗ್ರಂಥಗಳು ಅವರ ಹಿರಿಯ ಚೇತನಕ್ಕೆ ಅನುಪಮಸಾಕ್ಷಿಗಳಾಗಿ ನಿಂತಿವೆ.

ಋಷಿಸದೃಶರಾದ, ಕಲಾತಪಸ್ವಿಗಳಾದ, ಭಾರತಸಂಸ್ಕೃತಿಯ ಅತ್ಯುತ್ತಮ ಪ್ರತಿನಿಧಿಯಾದ ಇವರು ಬಾಳನ್ನೆಲ್ಲ ದೇಶದಿಂದ ಹೊರಗೇ ಕಳೆದರಾಗಿ, ಭಾರತದೇಶಕ್ಕೆ ಮರಳಿ ಇಲ್ಲಿನ ಪಂಚಭೂತಗಳೊಂದಿಗೆ ಬೆರೆಯಬೇಕೆಂಬ ಅವರ ಕಡೆಗಾಲದ ಹಂಬಲ ಕೈಗೂಡಲಿಲ್ಲವಾಗಿ, ನಮ್ಮ ಜನರಿಗೆ ಅವರ ಬದುಕಿನ ಪರಿಚಯವಾಗಲಿ ಅವರ ಬರಹಗಳ ಅರಿವಾಗಲಿ ಅಷ್ಟಾಗಿ ಒದಗಿಬರಲಿಲ್ಲ. ಅದೂ ಈಗಿನ ತಲೆಮಾರಿನವರಿಗೆ ಅವರದ್ದೊಂದು ದೊಡ್ಡ ಹೆಸರು ಅಷ್ಟೆ; ಅವರ ಬಾಳಿನ ವಿವರ ತಿಳಿಯದು; ಕಿರಿಯಜನಾಂಗಕ್ಕಂತೂ ತೀರ ಅಪರಿಚಿತವೇ. ಆದರೆ ಎಲ್ಲ ಕಾಲಕ್ಕೂ ಅವರ ಆದರ್ಶ ಪ್ರಸ್ತುತವಾದುದೇ, ಅಗತ್ಯವಾದುದೇ, ಪ್ರೇರಕವಾದುದೇ. ಹೀಗೆಂದುಕೊಂಡು ಅವರನ್ನು ಕುರಿತಂತೆ ಇದೊಂದು ಸಣ್ಣಪುಸ್ತಕವನ್ನು ಬಹು ಹಿಂದೆಯೇ ಸಿದ್ಧಪಡಿಸಿದ್ದೆ. ಮಕ್ಕಳಿಗಾಗಿಯೇ ಬರೆದ ಇದನ್ನು ನನ್ನ ಮಿತ್ರರಾದ ಶ್ರೀ ಕ. ರಾ. ಕೃ. ಅವರು ತಮ್ಮ ಜನಪದ ಅಕ್ಯಾಡಮಿಯಿಂದ ೧೯೮೦ರಲ್ಲಿ ಪ್ರಕಟಿಸಿದರು. ಈ ಬರಹವನ್ನು ಪರಿಷ್ಕರಿಸಿ, ವಿಸ್ತರಿಸಿ, ಮಾರ್ಪಡಿಸಿ, ನನ್ನದೇ ರೇಖಾಚಿತ್ರಗಳನ್ನು ಸೇರಿಸಿ ಈಗ ಮತ್ತೆ ಸಿದ್ಧಪಡಿಸಿದುದನ್ನು ನನ್ನ ಇನ್ನೊಬ್ಬ ಮಿತ್ರರು ಶ್ರೀ ಸೂರ್ಯಪ್ರಕಾಶ ಪಂಡಿತರು ತಮ್ಮ ಅಭಿಜ್ಞಾನ ಪ್ರಕಾಶನದಿಂದ ಹೊರತರುತ್ತಿದ್ದಾರೆ. ಅವರಿಗೆ ನನ್ನ ವಂದನೆಗಳು ಸಲ್ಲುತ್ತವೆ.

ನಮ್ಮ ಜನರಿಗೆ ಇಂದು, ಎಂದಿಗಿಂತ ಹೆಚ್ಚಾಗಿ, ಬೇಕಾಗಿರುವುದು ಹಿರಿಯ ಚೇತನಗಳ ಆದರ್ಶ. ಇಂದು ಹಾಗೆ ಇರುವವರನ್ನು ಸರಿಯಾಗಿ ಗುರುತಿಸುವುದು ಕಷ್ಟ; ಅವರ ಓರೆಕೋರೆಗಳೇ ಎದ್ದುಕಾಣುತ್ತವೆ, ತೀರ ಹತ್ತಿರದಿಂದ ವಿವರಗಳನ್ನು ನಿಖರವಾಗಿ ಕಾಣುವುದೂ ಆಗದು. ತೀರ ಹಿಂದಿನವರಾದರೆ, ಊಹಾಪೋಹಗಳೂ ದಂತಕತೆಗಳೂ ಪವಾಡಗಳೂ ಪ್ರಧಾನವಾಗಿಬಿಡುತ್ತವೆ; ಆದರ್ಶದ ಸ್ವಾರಸ್ಯವೇ

ಮರೆಯಾದರೂ ಆದೀತು. ಎರಡೂ ಅತಿಗಳನ್ನು ಮೀರಿ, ನಮ್ಮ ಹಿಂದಿನ ತಲೆಮಾರಿನವರೇ ಆದ ಮಹನೀಯರ ಆದರ್ಶವೆಂದರೆ ನಮ್ಮ ಅನುಕರಣೆಯೂ ಸಾಧ್ಯವಾದೀತು; ಯುಗಧರ್ಮದಲ್ಲಿ ಅಷ್ಟೇನು ವೈವಿಧ್ಯವಿರಲಾರದು. ಎಳೆಯ ಮಂದಿಗೆ ಆನಂದ ಕುಮಾರಸ್ವಾಮಿಯಂಥವರ ಆದರ್ಶ ಒದಗಿಬಂದರೆ ಅವರಿಗೆ ಪ್ರೇರಣೆಯೂ ಸ್ಫೂರ್ತಿಯೂ ಮಾರ್ಗದರ್ಶನವೂ ದೊರಕಬಹುದೆಂದು ನನ್ನ ನಂಬಿಕೆ. ಅಂಥ ವಿದ್ವಾಂಸರ ವ್ಯಾಸಂಗತತ್ಪರತೆ, ಪ್ರಾಮಾಣಿಕಜೀವನ, ಉದಾತ್ತಚಿಂತನೆ, ಸಮಗ್ರ ಪರಾಮರ್ಶೆಯ ದೃಷ್ಟಿ, ಬರಹದಲ್ಲಿ ಓರಣ ಮತ್ತು ಪ್ರೌಢಿಮೆ—ಇವೆಲ್ಲ ಇಂದು ವಿರಳವಾಗುತ್ತಿವೆಯೇ ಎಂಬ ಶಂಕೆ ಹಲವರನ್ನು ಕಾಡುತ್ತಿದೆ. ಈ ಸಂದರ್ಭದಲ್ಲಿ ಇದೊಂದು ನನ್ನ ಬರಹ ಕೆಲವರಿಗಾದರೂ ಆನಂದ ಕುಮಾರಸ್ವಾಮಿಯವರ ಬದುಕನ್ನು, ಬರಹವನ್ನು ಕುರಿತಂತೆ ಆಸಕ್ತಿಯನ್ನು ಮೂಡಿಸಿದರೆ ನನ್ನ ಯತ್ನ ಸಾರ್ಥಕವಾಯಿತು ಎಂದುಕೊಳ್ಳುತ್ತೇನೆ.

ಪ್ರಕಾಶಕರ ಪರವಾಗಿ, ಬಹುಶ್ರುತರೂ ಮೇಧಾವಿಗಳೂ ಶತಾವಧಾನ ಪ್ರಸಿದ್ಧರೂ ನನ್ನ ಪರಮಮಿತ್ರರೂ ಆದ ಡಾ॥ ರಾ. ಗಣೇಶರವರು ಬರೆದಿರುವ ಮೊದಲಮಾತುಗಳಲ್ಲಿ ನನ್ನನ್ನು ಕುರಿತಂತೆ ತಮ್ಮ ಹೃದಯದ ಔದಾರ್ಯದಿಂದ ಹೊರಹೊಮ್ಮಿದ ಮೆಚ್ಚುಗೆಯ ಮಾತುಗಳನ್ನಾಡಿರುವುದಕ್ಕೆ ವಿನಯಪೂರ್ವಕವಾದ ನನ್ನ ಕೃತಜ್ಞತೆಯನ್ನು ಸೂಚಿಸಿ, ಅವರ ಮೆಚ್ಚುಗೆಗೆ ದಿಟವಾಗಿ ಪಾತ್ರನಾಗುವ ಯೋಗವನ್ನು ಭಗವಂತನು ನನಗೆ ಕರುಣಿಸಲೆಂದು ಪ್ರಾರ್ಥಿಸಿ ಈ ಮಾತುಗಳನ್ನು ಮುಗಿಸುತ್ತೇನೆ.

ಸಾ. ಕೃ. ರಾಮಚಂದ್ರರಾವ್

ಈ ಕಾಲದ ಒಬ್ಬ ಋಷಿ

ಈ ಕಾಲದಲ್ಲೂ ಋಷಿಗಳು ಇರುವರೆ?—ಎಂದು ಯಾರಾದರೂ ಕೇಳಿಯಾರು; ಆದರೆ ಋಷಿಗಳೇನು ಯಾವ ಕಾಲದಲ್ಲೂ ಇರುವರಷ್ಟೆ. 'ಇಂಥ ಕಾಲದಲ್ಲಿ ಇರಬೇಕು', 'ಇಂಥ ಕಾಲದಲ್ಲಿ ಇರಬಾರದು' ಎಂದು ಅವರಿಗೆ ನೇಮವೇನಾದರೂ ಇದೆಯೇ?

ಇಷ್ಟಾಗಿ, ಋಷಿಗಳೆಂದರೆ ಯಾರು? ಎಲ್ಲಕ್ಕೂ ಮೂಲವಾದ, ಎಲ್ಲಕ್ಕೂ ಮಿಗಿಲಾದ ಯಾವುದೋ ತತ್ತ್ವವನ್ನು ಎಡೆಬಿಡದೆ ಅರಸಿ, ಅದಕ್ಕಾಗಿ ತಪಸ್ಸುಮಾಡಿ, ಕಡೆಗೆ ಅದನ್ನು ತಮ್ಮ ಅನುಭವದಲ್ಲಿ ಅರಿತುಕೊಂಡವರೇ; ಅದರ ಬೆಳಕಿನಲ್ಲಿ ಬಾಳನ್ನು ನಡೆಸುವವರು; ಅದನ್ನು ನಿಖರವಾಗಿ ಬೇರೆಯವರಿಗೆ ತಿಳಿಸಿಕೊಡಬಲ್ಲವರು. ಅವರು ಪಡೆದುಕೊಂಡದ್ದಕ್ಕೆ 'ಕಾಣ್ಕೆ' (ದರ್ಶನ) ಎಂದು ಹೆಸರು. ಅದು ಬರಿಯ ಓದಿನಿಂದ ಬಂದದ್ದಲ್ಲ, ಬುದ್ಧಿಶಕ್ತಿಯನ್ನು ಬಳಸಿ ಗಳಿಸಿದ್ದಲ್ಲ. ಇಡೀ ಬದುಕಿನ ಒಟ್ಟಾರೆ ಅನುಭವದ ಮಾತು ಅದು. ಅದನ್ನು ಪಡೆದುಕೊಳ್ಳುವುದು ತಪಸ್ಸಿನಿಂದ.

ತಪಸ್ಸೆಂದರೆ ಏನು? ಬದುಕಿನಲ್ಲಿ ಒದಗುವ ಒಂದು ಕಾವು ಅದು; ಇಡೀ ಬಾಳುವೆ ಒಂದು ಪಾಕಕ್ಕೆ ಬಂದಂತೆ, ಸಾಮಾನ್ಯಜನರಿಗೆ ದಿನದಿನ ಬಯಕೆ, ಬವಣೆ; ಅದಕ್ಕಾಗಿ ಬಿಡುವಿಲ್ಲದ ಓಟ; ಆಸೆ-ಅನಿಸಿಕೆಗಳ ಬಲೆಯಲ್ಲಿ ಸಿಕ್ಕುಬಿದ್ದ ಮೀನುಗಳಂತೆ ಒದ್ದಾಟ. ನೆಮ್ಮದಿಯೆಲ್ಲಿ ಬಂತು? ಸುಖದ ಬೆನ್ನಟ್ಟಿ ಓಡುವುದಷ್ಟೇ ಸುಖ! ಓಡಿ ಓಡಿ ದಣಿದರೆ ಬದುಕು ಮುಗಿಯಿತು! ಇದು ಸಾಮಾನ್ಯಜನರ ರೀತಿಯಾದರೆ, ಋಷಿಗಳು ಹಿಡಿಯುವ ದಾರಿ ಬೇರೆ. ಲೋಕದ ಆಸೆಗಳನ್ನೆಲ್ಲ ಬದಿಗೊತ್ತಿ, ಬೇರೆ ಯಾವುದಕ್ಕೂ ಮನಸೋಲದೆ, ತಮ್ಮ ಎದೆಯಾಳದಲ್ಲಿ ನಂಬಿಕೊಂಡಿರುವ ಒಂದೇ ವಿಚಾರದಲ್ಲಿ ಹಗಲಿರುಳೂ ಕ್ಷಣಕ್ಷಣವೂ ಎಡೆಬಿಡದೆ ಮನಸ್ಸನ್ನು ತೊಡಗಿಸುವರು. ಇದೇ ತಪಸ್ಸು.

ಈ ಕಾಲದಲ್ಲಿ ಋಷಿಗಳ ಸಂಖ್ಯೆ ತೀರ ಕಡಮೆಯೇ, ದಿಟ; ತಪಸ್ಸು ಮಾಡುವ ಅವಕಾಶವೂ ಕಡಮೆಯೇ, ಕಾರಣಗಳೂ ಇಲ್ಲದೆ ಇಲ್ಲ. ಬರುಬರುತ್ತ ಮನುಷ್ಯನ

ಸಂಸ್ಕೃತಿಯಲ್ಲಿ ಮೂಲಭೂತವಾದ ಮೌಲ್ಯಗಳೇ ಮರೆಯಾಗಿ ಒಳಗಿನ ಭಾವನೆಗಳು ಕೃತಕ, ಹೊರಗಿನ ಜಗತ್ತು ಯಾಂತ್ರಿಕ ಎಂಬಂತಾಗಿದೆ. ವಿಜ್ಞಾನ, ಅದರ ನೆರಳಿನಲ್ಲಿ ಬೆಳೆದ ತಂತ್ರ (ಎಂದರೆ ವೈಜ್ಞಾನಿಕ ಸಂವಿಧಾನಗಳ ಬಳಕೆ, ಉಪಕರಣಗಳ ಸಿದ್ಧತೆ, ಉದ್ಯಮಗಳಿಗೆ ಅನ್ವಯ, ಸುಖಸಾಧನೆಗಳ ತಯಾರಿಕೆ ಇತ್ಯಾದಿ) ಎರಡೂ ಮನುಷ್ಯನ ಮಾನವೀಯತೆಯನ್ನು ಕಸಿದುಕೊಳ್ಳುತ್ತಿವೆ. ಜನರು ಐಶ್ವರ್ಯ, ಅಭ್ಯುದಯ, ಉದ್ಯೋಗ, ಆರಾಮ, ಸಂಚಾರ, ಸಂಪತ್ತು, ಸೌಲಭ್ಯ, ಸಾಮರ್ಥ್ಯ ಎಂದು ಬಾಯಿ ಬಾಯಿ ಬಿಡುತ್ತಿರುವಾಗ ಋಷಿಗಳಾಗುವವರು ಯಾರು? ಜನಜೀವನದಲ್ಲಿ ಜಟಿಲತೆ ಇರುವಾಗ, ಸಮಾಜದಲ್ಲಿ ರಾಜಕಾರಣ ಭೂತಾಕಾರವಾಗಿ ಬೆಳೆದಿರುವಾಗ, ವ್ಯಕ್ತಿಯ ಬದುಕು ನಿಸರ್ಗದಿಂದ ದೂರ ಸರಿದು ನಿಂತಿರುವಾಗ ತಪಸ್ಸು ಮಾಡಲು ಅವಕಾಶವೆಲ್ಲಿ?



ಕೇವಲಚಂದ್ರಶೇಖರ
(ಪಂಚಲೋಹಶಿಲ್ಪ)

ದಿಟ, ಪರಿಸ್ಥಿತಿ ಹೀಗೆ ಪ್ರತಿಕೂಲವಾಗಿರುವಾಗ ಋಷಿಗಳಿಗೆ ಎಡೆಯಿಲ್ಲ, ತಪಸ್ಸಿಗೆ ಬೆಲೆಯಿಲ್ಲ. ಆದರೂ ಕೆಲವರು ಎಷ್ಟೇ ಎಡರು ತೊಡರುಗಳಿರಲಿ, ಎಂಥ ಅಡ್ಡಿ-ಆತಂಕಗಳೇ ಇರಲಿ, ಒಂದೇ ನಿಷ್ಠೆಯಿಂದ ಬಾಳನ್ನು ಕಳೆಯುತ್ತಾರೆ; ಎಲ್ಲ ಕಷ್ಟ-ನಿಷ್ಠುರಗಳನ್ನೂ ತಾಳಿಕೊಂಡು ತಪಸ್ಸಿನಲ್ಲಿ ತೊಡಗುತ್ತಾರೆ. ಸಾಮಾನ್ಯಜನರಂತೆ ಹಣಕ್ಕೆ ಆಸೆಪಡದೆ, ಸುಖಕ್ಕೆ ಹಾತೊರೆಯದೆ, ಇತರರ ಅನುಕೂಲಕ್ಕೆ ಕರುಬದೆ, ತಾವು ಮನಸಾರೆ ಮೆಚ್ಚಿಕೊಂಡ ತತ್ತ್ವವನ್ನೇ ಹಿಡಿದು, ತಾವು ನಂಬಿಕೊಂಡ ನೀತಿಯಿಂದ ಇಷ್ಟೂ ಕದಲದೆ, ಲೋಕದ ಹಿತವನ್ನೇ ಬಯಸಿ ಬದುಕುವ ಜನ ಕೆಲವರಾದರೂ ಇದ್ದೇ ಇರುತ್ತಾರೆ.

ಇಂಥವರನ್ನು ನಾವು ಋಷಿಗಳೆಂದು ಗುರುತಿಸಬೇಕು. ಅವರು ಕಂಡ ಕಾಣ್ಕೆಯನ್ನು ನಮ್ಮೆದುರು ತಂದುಕೊಳ್ಳಬೇಕು. ಅವರ ಬಾಳ ಬೆಳಕನ್ನು ನಮ್ಮೊಡಲಲ್ಲಿ ತುಂಬಿಕೊಳ್ಳಬೇಕು. ಅವರು ಹಾಕಿದ ಹೆಜ್ಜೆಯಲ್ಲಿ ನಮಗೆ ಸಾಧ್ಯವಾದಷ್ಟು ನಾವೂ ಅಡಿಯಿಡಬೇಕು. ಹಾಗಾದರೆ ನಮ್ಮ ಬದುಕೂ ಹಸನಾದೀತು, ಹಿತವೆನಿಸೀತು, ಸಾರ್ಥಕವಾದೀತು.

ನಮ್ಮ ಕಾಲದ ಇಂಥ ಋಷಿಗಳಲ್ಲಿ ಒಬ್ಬರು ಡಾ॥ ಆನಂದ ಕುಮಾರಸ್ವಾಮಿಯವರು. 'ಋಷಿ' ಎಂದರೆ ಅವರೇನು ಜಟೆ ಕಟ್ಟಿಕೊಂಡಿರಲಿಲ್ಲ, ಕಾವಿಬಟ್ಟೆ ಉಟ್ಟಿರಲಿಲ್ಲ, ಕಾಡಿಗೆ ಓಡಿಹೋಗಿರಲಿಲ್ಲ, ಅನ್ನ ನೀರು ಬಿಟ್ಟು ಒಂಟಿಕಾಲಮೇಲೆ ನಿಂತು ತಪಸ್ಸು ಮಾಡಿರಲಿಲ್ಲ. ಆದರೆ ಬದುಕನ್ನು ಒಂದು ವ್ರತದಂತೆ ನಡೆಸಿದವರು, ಅಧ್ಯಾತ್ಮದ ಬೆಳಕಿನಲ್ಲೇ ನಡೆದವರು, ಸಾಮಾನ್ಯವಾದ ಸಂಸಾರದ ಧೋರಣೆಯಿಂದ ದೂರವಾಗಿದ್ದವರು, ಎಲ್ಲರ ಒಳಿತನ್ನು ಎಲ್ಲ ಕಾಲದಲ್ಲೂ ಬಯಸಿದ್ದವರು. ಅವರನ್ನು ಬಲ್ಲವರೆಲ್ಲ ಅವರಲ್ಲಿ ಗೌರವವನ್ನು ತಳೆದಿದ್ದರು. ಅವರದ್ದು ಎತ್ತರದ ಬದುಕೆಂದು ಗುರುತಿಸಿದ್ದರು. ಅವರ ಬರಹಗಳನ್ನು ಓದಿದವರೆಲ್ಲ ಅವರ ಕಾಣ್ಕೆಯಲ್ಲಿ ಪಾಲ್ಗೊಂಡಂತೆ ಅನುಭವವನ್ನು ಪಡೆಯುವರು. ಋಷಿಯಲ್ಲದೆ ಮತ್ತೇನು?

ಅವರದ್ದೊಂದು ಸೋಜಿಗದ ಜೀವನ. ಮನೆತನದಲ್ಲಿ ತಮಿಳರಾದರೂ ಹುಟ್ಟಿದ್ದು ಸಿಂಹಳದಲ್ಲಿ (ಎಂದರೆ ಈಗಿನ ಶ್ರೀಲಂಕದಲ್ಲಿ), ಬೆಳೆದದ್ದು ಇಂಗ್ಲೆಂಡಿನಲ್ಲಿ, ನೆಲೆಸಿದ್ದು ಅಮೆರಿಕದಲ್ಲಿ, ದೇಹವಿಡಬೇಕೆಂದು ಬಯಸಿದ್ದುದು ಹಿಮಾಲಯದಲ್ಲಿ. ತಂದೆ ಸಿಂಹಳದ ತಮಿಳರು, ತಾಯಿ ಇಂಗ್ಲೆಂಡಿನ ಕೆಂಟಿನವರು; ಹೆಂಡತಿ ಅರ್ಜೆಂಟೀನಾದವರು; ಒಡನಾಡಿಗಳೆಲ್ಲ ಅಮೆರಿಕದವರು; ದಿನನಿತ್ಯದ ಬದುಕು ಪಾಶ್ಚಾತ್ಯ ಪದ್ಧತಿಯಲ್ಲೇ. ಆದರೆ ಆತನ ನಾಡಿನಾಡಿಗಳಲ್ಲಿ ಮಿಡಿಯುತ್ತಿದ್ದುದು ಭಾರತದೇಶದ ಸಂಸ್ಕೃತಿಯ ಹಿರಿಮೆ. ನಮ್ಮ ಸಂಪ್ರದಾಯದ ಧರ್ಮ, ಕಲೆ, ರೀತಿ, ನೀತಿಗಳನ್ನು ಅವರು ಮನಸಾರೆ ಮೆಚ್ಚಿಕೊಂಡಂತೆ ಯಾವ ಭಾರತೀಯನೂ ಮೆಚ್ಚಿಕೊಳ್ಳಲಿಲ್ಲ. ವೇದದ ಸಂದೇಶವನ್ನು ಅವರು ಎದೆಯಾಳದಲ್ಲಿ ನಂಬಿಕೊಂಡಂತೆ ಯಾವ ಹಿಂದುವೂ ನಂಬಿಕೊಳ್ಳಲಿಲ್ಲ. ಮತ್ತು ಭಾರತದ ಕಲೆಯಾಗಲಿ, ಧರ್ಮವಾಗಲಿ ತನ್ನ ಗುಟ್ಟನ್ನು ಅವರಿಗೆ ಬಿಟ್ಟುಕೊಟ್ಟಂತೆ ಬೇರೆ ಯಾರಿಗೂ ಬಿಟ್ಟುಕೊಡಲಿಲ್ಲ.

ಭಾರತೀಯತೆಯೆನ್ನುವುದು ಅವರ ಪಾಲಿಗೆ ಒಂದು ವ್ರತವಾಗಿದ್ದಿತು. ಅದನ್ನು ಅವರು ಕಟ್ಟುನಿಟ್ಟಾಗಿ ತೊಟ್ಟು, ಕಡೆಯ ಉಸಿರೆಳೆಯುವವರೆಗೂ ನಡೆಸಿದರು. ಎಚ್ಚರದ ಒಂದೊಂದು ಗಳಿಗೆಯನ್ನೂ ಅದರಲ್ಲೇ ಕಳೆದರು; ದೇಹದ ಬಲವನ್ನೂ, ಮನಸ್ಸಿನ ಶಕ್ತಿಯನ್ನೂ ಅದರಲ್ಲೇ ಸವೆಸಿದರು. 'ಸ್ವದೇಶೀ' ಮಂತ್ರದ ಸಾಕ್ಷಾತ್ಕಾರಕ್ಕಾಗಿ ಅವರು ಹಗಲಿರುಳೂ ಹೆಣಗಾಡಿದರು. ಭಾರತದೇಶದಲ್ಲಿ ಸಾಂಸ್ಕೃತಿಕ ಪುನರುಜ್ಜೀವನಪರ್ವ ಮೊದಲಾಗುವಾಗ ಹಿರಿಯರ ಸಾಲಿನಲ್ಲಿ ಅವರ ಹಿರಿಮೆಯಿದ್ದಿತು. ರವೀಂದ್ರನಾಥ ಠಾಕೂರರು, ಮಹಾತ್ಮಾ ಗಾಂಧಿ, ಡಾ॥ ರಾಧಾಕೃಷ್ಣನ್ ಮೊದಲಾದವರೆಲ್ಲ ಒಕ್ಕೊರಲಿನಿಂದ ಅವರನ್ನು ಆಧುನಿಕಋಷಿಯೆಂದು, ಕಲಾಯೋಗಿಯೆಂದು ಕರೆದು ಗೌರವಿಸಿದರು.

ಅವರ ಬರಹಗಳ ಸಂಖ್ಯೆ ಒಂದು ಸಾವಿರವನ್ನೂ ಮೀರುತ್ತದೆ. ಅವರಿಗೆ ಇಂಗ್ಲಿಷ್, ಸಂಸ್ಕೃತ, ಪಾಳಿ, ಹಿಂದೀಭಾಷೆಗಳಲ್ಲದೆ ಫ್ರೆಂಚ್, ಲ್ಯಾಟಿನ್, ಗ್ರೀಕ್, ಇಟಾಲಿಯನ್, ಸ್ಪಾನಿಶ್, ಡಚ್, ಐಸ್‌ಲ್ಯಾಂಡಿಕ್, ಪರ್ಶಿಯನ್‌ಭಾಷೆಗಳ ಪರಿಚಯವಿದ್ದಿತು; ಸಿಂಹಳೀಭಾಷೆ, ತಮಿಳುಭಾಷೆಗಳಂತೂ ಮನೆಮಾತುಗಳೇ. ಅವರು

ಫ್ರಾನ್ಸ್, ಬೆಲ್ಜಿಯಂ, ಹಾಲೆಂಡ್, ಡೆನ್ಮಾರ್ಕ್, ಜರ್ಮನಿ, ಬರ್ಮಾ, ತೈಲ್ಯಾಂಡ್, ಕಂಬೋಡಿಯ, ಕೊರಿಯ, ಜಪಾನ್, ಜಾವಾ, ಬಾಲಿದೇಶಗಳಲ್ಲಿ ಪ್ರವಾಸ ಮಾಡಿದ್ದರು. ಭಾರತ ಮತ್ತು ಸಿಂಹಳದ್ವೀಪ—ಇವೆರಡದ್ದಂತೂ ನಿಕಟಪರಿಚಯವೇ.

ಅವರ ಸಮಕಾಲಿಕರಲ್ಲಿ ಸೋದರಿ ನಿವೇದಿತಾ (1867-1911), ರೊಮೆ ರೊಲಾಂ (1866-1944), ರವೀಂದ್ರನಾಥ ಠಾಕೂರರು (1861-1941), ಅವನೀಂದ್ರ ಠಾಕೂರರು (1871-1951) ಮತ್ತು ಓಕಕೂರ ಕಕುಜೊ (1862-1913)—ಇವರು ಸೇರಿದ್ದರು. ಓಕಕೂರ ಜಪಾನೀಯರು; ಪಂಡಿತ, ದಾರ್ಶನಿಕ, ಕಲಾವಿದ, ಪ್ರವಾಸಿ. ಜಪಾನೀ ಸಾಂಪ್ರದಾಯಿಕ ಕಲೆಯ ಪುನರುಜ್ಜೀವನಕ್ಕೆ ಕಾರಣರಾದವರು. ಬೊಸ್ಟನ್ ಮ್ಯೂಸಿಯಂನಲ್ಲಿ ಚೀಣೀ ಮತ್ತು ಜಪಾನೀ ಕಲಾವಿಭಾಗದ 'ಕೀಪರ್' ಮತ್ತು ಸಲಹೆಗಾರರಾಗಿ ಕೆಲಸ ಮಾಡುತ್ತಿದ್ದರು. ಈ ಕಲಾವಿಭಾಗವು 1890 ರಲ್ಲಿಯೇ ಸ್ಥಾಪಿತವಾಗಿದ್ದಿತು. ಇವರು ರವೀಂದ್ರನಾಥರ ಸ್ನೇಹಿತರಾಗಿದ್ದು ಭಾರತದ ಸ್ವದೇಶೀ ಆಂದೋಲನದಲ್ಲಿ ಪಾಲ್ಗೊಂಡಿದ್ದರು. ಏಶಿಯಖಂಡವೆಲ್ಲ ಒಂದು ಸಾಂಸ್ಕೃತಿಕ ನೆಲೆಯಲ್ಲಿದೆ ಎಂಬುದು ಅವರ ಎಣಿಕೆ. ಆನಂದ ಕುಮಾರಸ್ವಾಮಿಯವರು ಮತ್ತು ಇವರ ನಡುವೆ ಪತ್ರವ್ಯವಹಾರವಿದ್ದಿತಾದರೂ ಅವರಿಬ್ಬರೂ ಭೇಟಿಯಾಗುವ ಸಂದರ್ಭ ಬರಲೇ ಇಲ್ಲ.

ಕುಮಾರಸ್ವಾಮಿಯವರು ಭಾರತೀಯ ದೀಕ್ಷೆಯನ್ನು ತಳೆದಿದ್ದರೂ, ಅವರಲ್ಲಿ ಸಂಕುಚಿತ ಭಾವನೆಯಿರಲಿಲ್ಲ. ವಿಶ್ವಮಾನವಸಂಸ್ಕೃತಿಗೆ ಭಾರತದೇಶ ಸಲ್ಲಿಸುವ ಕೊಡುಗೆ ಹೆಚ್ಚಿನದೆಂಬ ವಿಶ್ವಾಸವೇನೋ ಅವರಲ್ಲಿದ್ದಿತು. ಅವರು ವೇದ-ಉಪನಿಷತ್ತುಗಳ ನೆಲೆಯನ್ನೇ ನಂಬಿದ್ದವರಾದರೂ ಅವರ ಹೃದಯದಲ್ಲಿ ಔದಾರ್ಯ ಎದ್ದು ಕಾಣುತ್ತಲಿತ್ತು. ಅವರ ತಂದೆ ಹಿಂದುವಾಗಿದ್ದರೂ ಬೌದ್ಧಧರ್ಮಕ್ಕೆ ಒಲಿದಿದ್ದವರು; ತಾಯಿ ಕ್ರೈಸ್ತರಾಗಿದ್ದರೂ ಹಿಂದೂಧರ್ಮವನ್ನು ಮೆಚ್ಚಿಕೊಂಡಿದ್ದವರು; ಎಳೆತನದಲ್ಲಿ ಮಗ ಕ್ರೈಸ್ತಪ್ರಭಾವದ ಪರಿಸರದಲ್ಲೇ ಬೆಳೆದದ್ದು. ಇನ್ನು ಧಾರ್ಮಿಕ ವಿಚಾರದಲ್ಲಿ ಸಂಕುಚಿತಭಾವನೆ ಬರುವುದು ಹೇಗೆ?

ಆದರೂ ಭಾರತದ ಧರ್ಮ, ಸಂಸ್ಕೃತಿ, ಕಲೆ, ಅಧ್ಯಾತ್ಮ—ಈ ಪ್ರಕಾರಗಳ ವೈಶಿಷ್ಟ್ಯವು ಪಾಶ್ಚಾತ್ಯಪ್ರಪಂಚದ ಪರಿಚಯಕ್ಕೆ ಬರಬೇಕೆಂದು ಬದುಕಿನುದ್ದಕ್ಕೂ ಎಡೆ ಬಿಡದೆ ಶ್ರಮಿಸಿದವರು ಅವರು. ಪ್ರಾಚೀನ ಭಾರತೀಯಸಂಸ್ಕೃತಿಗೇ ಅವರು ಮಾರುಹೋಗಿದ್ದುದು. ಅದರ ಆದರ್ಶವನ್ನು ಮರಳಿಸಲೆಂದು ಅವರು ತಪಸ್ಸು ಮಾಡಿದರು.

ಮನೆತನ, ಪೂರ್ವಸಿದ್ಧತೆ

ಆನಂದ ಕುಮಾರಸ್ವಾಮಿ ಹುಟ್ಟಿದ್ದು 1877 ರ ಆಗಸ್ಟ್ 22 ನೆಯ ದಿನದಂದು, ಸಿಂಹಳದ್ವೀಪದ ಕೊಲೊಂಬೋ ನಗರದಲ್ಲಿ. ತಂದೆ ಸರ್ ಮುತ್ತು ಕುಮಾರಸ್ವಾಮಿ; ತಾಯಿ ಎಲಿಜಬೆತ್ ಕ್ಲೇ ಬೀಬಿ. ಮಗು ಹುಟ್ಟಿದ ಗಳಿಗೆಯಲ್ಲಿ ನಕ್ಷತ್ರಗಳ ಗತಿಯನ್ನು ಎಣಿಕೆಮಾಡಿ ಜೋಯಿಸರು 'ಆನಂದ' ಎಂದು ಹೆಸರಿಡುವಂತೆ ಸೂಚಿಸಿದರು. ತಾಯಿ ಇಂಗ್ಲೆಂಡ್‌ದೇಶದ ಕೆಂಟ್ ಎಂಬ ಕಡೆಯವರು. ಅವರು ತನ್ನ ತೌರೂರಿನ ನೆನಪಿಗಾಗಿ ಮಗುವಿಗೆ 'ಕೆಂಟಿಷ್' ಎನ್ನುವ ಹೆಸರನ್ನೂ ಸೇರಿಸಿದರು. ತಂದೆಯ ಮನೆದೇವರು ಕುಮಾರಸ್ವಾಮಿ; ಕತರಗಾಮದಲ್ಲಿ ಈ ದೇವರ ಗುಡಿಯಿದೆ; ತಂದೆಯ ಹೆಸರಿನಲ್ಲೂ ಈ ದೇವರ ಹೆಸರಿದ್ದಿತು. ಹೀಗಾಗಿ ಮಗುವಿನ ಪೂರಾ ಹೆಸರು 'ಆನಂದ ಕೆಂಟಿಷ್ ಕುಮಾರಸ್ವಾಮಿ'.

ಮನೆತನ ದಕ್ಷಿಣಭಾರತದ ತಮಿಳರದ್ದು; ಮುದಲಿಯಾರರು. ಸಿಂಹಳದ್ವೀಪದಲ್ಲಿ ಒಂದೆರಡು ತಲೆಮಾರುಗಳಿಂದ ನೆಲೆಸಿದ್ದವರು. ಈಗ ಶ್ರೀಲಂಕಾ ಎಂದು ಕರೆಯುವ ಸಿಂಹಳದ್ವೀಪಕ್ಕೆ ಕ್ರಿಸ್ತಪೂರ್ವ 550 ವರ್ಷಗಳ ಸುಮಾರಿಗೆ ಭಾರತದೇಶದಿಂದಲೇ ಹಲವಾರು ಪ್ರದೇಶಗಳಿಂದ ಜನ ಹೋಗಿ ಅಲ್ಲಿ ನೆಲೆಸಿದ್ದರು; ಇವರು ಸಿಂಹಳೀಯರೇ ಆಗಿಬಿಟ್ಟರು, ಸಿಂಹಳಭಾಷೆಯನ್ನೇ ಬಳಸತೊಡಗಿದರು. ಮುಂದೆ ಸುಮಾರು ನಾನ್ನೂರು ವರ್ಷಗಳ ನಂತರ ದಕ್ಷಿಣಭಾರತದಿಂದ ತಮಿಳು ಮಾತನಾಡುವ ಮಂದಿ ಉದ್ಯೋಗ, ವ್ಯವಹಾರಗಳ ನೆಪದಿಂದ ಬಹು ಸಂಖ್ಯೆಯಲ್ಲಿ ಹೋಗಿ ಸಿಂಹಳದ್ವೀಪದ ಉತ್ತರಭಾಗದಲ್ಲಿ, ಎಂದರೆ ಜಾಫ್ನಾ ಕಡೆ, ನೆಲೆಸತೊಡಗಿದ್ದರು.

ಹೀಗೆ ತಮಿಳುನಾಡಿನಿಂದ ವಲಸೆ ಬಂದು ಸಿಂಹಳದಲ್ಲಿ ನೆಲೆಸಿದ ಕುಟುಂಬಗಳಲ್ಲಿ ಒಂದು ಚಿದಂಬರದ ಕಡೆಯ ಆರುಮುಗಂ ಮುದಲಿಯಾರೆಂಬ ವೆಲ್ಲಾಳ ಜಾತಿಯ ಉದ್ಯಮಿಯೊಬ್ಬರದ್ದು. ಅವರು ಬಂದು ಜಾಫ್ನಾದ ಬಳಿ ಮಣಿಪೆಯ್ ಎಂಬ ಹಳ್ಳಿಯಲ್ಲಿ ಮನೆಮಾಡಿಕೊಂಡಿದ್ದರು. ತಮ್ಮ ದುಡಿಮೆಯ ಫಲವಾಗಿ ಅನುಕೂಲಸ್ಥರಾದರು. ಅವರ ಹೆಂಡತಿ ತಮ್ಮ ಮನೆದೇವರಾದ ಕುಮಾರಸ್ವಾಮಿಯಲ್ಲಿ ಹರಕೆ

ಹೊತ್ತು ಮಗನೊಬ್ಬನನ್ನು ಪಡೆದರು. ಕುಮಾರಸ್ವಾಮಿ (ಸ್ಕಂದ, ಸುಬ್ರಹ್ಮಣ್ಯ, ಮುರುಗ, ಆರುಮುಗ ಇವೆಲ್ಲ ಅವನ ಹೆಸರುಗಳೇ) ತಮಿಳುನಾಡಿನಲ್ಲಿ ಜನಪ್ರಿಯನಾದ ದೇವತೆ; ತಮಿಳರು ಸಿಂಹಳದ್ವೀಪಕ್ಕೆ ಬಂದಮೇಲೆ ಅಲ್ಲಿಯೂ ಅವನ ಜನಪ್ರೀತಿ ಹರಡಿತು. ಅಲ್ಲಿ ಮೂಡಿಕೊಂಡ ಅವನ ಹಲವಾರು ಗುಡಿಗಳಲ್ಲಿ ಕತರಗಾಮದ್ದೂ ಒಂದು ಮುಖ್ಯವಾದುದು, ಈ ಗುಡಿಯ ದೇವರಿಗೇ ಆಕೆ ಹರಕೆ ಹೊತ್ತದ್ದು. ಅಂತೂ ಮಗನೊಬ್ಬ ಹುಟ್ಟಿದಾಗ ಅವನಿಗೆ ಕುಮಾರಸ್ವಾಮಿಯೆಂದೇ ಹೆಸರಿಟ್ಟರು.

ಮುಂದೆ ಈ ಕುಮಾರಸ್ವಾಮಿ ಮುದಲಿಯಾರಿಗೆ ಇಬ್ಬರು ಗಂಡುಮಕ್ಕಳಾದರು. ದೊಡ್ಡವನು ಮುತ್ತು ಕುಮಾರಸ್ವಾಮಿ, ಚಿಕ್ಕವನು ಪೊನ್ನಂಬಲಂ. ಈ ಮಕ್ಕಳು ದೊಡ್ಡವರಾಗುವ ವೇಳೆಗೆ ಕುಮಾರಸ್ವಾಮಿ ಮುದಲಿಯಾರ್ ಶ್ರೀಮಂತನಾಗಿ ಕೊಲೊಂಬೋ ನಗರದಲ್ಲಿ ದೊಡ್ಡ ಮನೆಯೊಂದನ್ನು ಕಟ್ಟಿಕೊಂಡು ವಾಸಮಾಡು ತ್ತಿದ್ದನು. 1802 ರಿಂದಲೂ ಸಿಂಹಳದ್ವೀಪ, ಬ್ರಿಟಿಷ್ ಚಕ್ರಾಧಿಪತ್ಯದ ವಸಾಹತು. ಅದರ ಆಡಳಿತಕ್ಕೆ ಕುಮಾರಸ್ವಾಮಿ ಮುದಲಿಯಾರ್ ನೆರವಾದುದರಿಂದ, ಅವನಿಗೆ ಬ್ರಿಟಿಷರು 'ರಾಜವಾಶಲ್ ಮುದಲಿಯಾರ್' ಅಥವಾ 'ಗವರ್ನರ್ಸ್ ಗೇಟ್ ಮುದಲಿಯಾರ್' ಎಂಬ ಪ್ರಶಸ್ತಿಯನ್ನು ಕೊಟ್ಟು ಅಲ್ಲಿನ ನ್ಯಾಯಾಂಗಸಭೆ (ಲೆಜಿಸ್ಲೆಟಿವ್ ಕೌನ್ಸಿಲ್)ಗೆ ಸದಸ್ಯನನ್ನಾಗಿ ನೇಮಿಸಿದರು. ಈ ನ್ಯಾಯಾಂಗಸಭೆಗೆ ಮೊಟ್ಟಮೊದಲ ತಮಿಳಸದಸ್ಯ ಈತನೇ.

ಈತನ ದೊಡ್ಡ ಮಗನಾದ ಮುತ್ತು ಕುಮಾರಸ್ವಾಮಿಯೇ ನಮ್ಮ ಆನಂದ ಕುಮಾರಸ್ವಾಮಿಯವರ ತಂದೆ. ಮುತ್ತು ಕುಮಾರಸ್ವಾಮಿ (ಹುಟ್ಟಿದ ವರ್ಷ 1834) ಕೊಲೊಂಬೋ ಶಾಲೆಗಳಲ್ಲಿ ಓದಿ ನ್ಯಾಯಾಂಗ (ಲಾ) ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿ, ಅದೇ ಉದ್ಯೋಗವನ್ನು 1851 ರಲ್ಲಿ ಹಿಡಿದರು. ಬೇಕಾದಂತೆ ಹಣವನ್ನೂ ಗಳಿಸಿದರು; ಕೀರ್ತಿಯನ್ನೂ ಪಡೆದುಕೊಂಡರು. 1861 ರಲ್ಲಿ ಅವರ ತಂದೆ ತೀರಿಕೊಂಡಾಗ, ತಮಿಳುಜನರ ಹಿತಾಸಕ್ತಿಯನ್ನು ಪ್ರತಿನಿಧಿಸಲು ತೆರವಾದ ನ್ಯಾಯಾಂಗಸಭೆಯ ಸದಸ್ಯತ್ವವು ಇವರಿಗೇ ಸಂದಿತು. ಆಗ ಅವರ ವಯಸ್ಸು ಇಪ್ಪತ್ತೇಳು ವರ್ಷಗಳಷ್ಟೆ. ಮುಂದೆ ಒಂದೆರಡು ವರ್ಷಗಳಲ್ಲಿ, ಎಂದರೆ 1862 ರಲ್ಲಿ ಮೊಟ್ಟಮೊದಲ ಬಾರಿಗೆ ಇಂಗ್ಲೆಂಡಿಗೆ ಹೋಗಿ, ನ್ಯಾಯವಿದ್ಯೆಯನ್ನು ಮುಂದುವರಿಸಿ 'ಲಿಂಕನ್ ಇನ್' ಎಂಬ ಸುಪ್ರಸಿದ್ಧ ನ್ಯಾಯಸಂಸ್ಥೆಯ ಕರೆಯನ್ನೂ ಪಡೆದರು. ಈ ಗೌರವವನ್ನು ಗಳಿಸಿದ ಹಿಂದುಗಳಲ್ಲಿ ಇವರೇ ಮೊದಲಿಗರು. ಮೂರು ವರ್ಷಗಳ ಕಾಲ ಪ್ರವಾಸದಲ್ಲಿ ತೊಡಗಿದ್ದು ಹಿಂದಿರುಗಿದರು.

ಹತ್ತು ವರ್ಷಗಳ ತರುವಾಯ (1874 ರಲ್ಲಿ) ಮತ್ತೆ ಇಂಗ್ಲೆಂಡಿಗೆ ಹೋದಾಗ, ಬ್ರಿಟಿಷ್‌ರಾಣಿ ವಿಕ್ಟೋರಿಯ ಇವರಿಗೆ 'ನೈಟ್‌ಹುಡ್' ಪ್ರಶಸ್ತಿಯನ್ನು ನೀಡಿದಳು, ಈಗ ಅವರು 'ಸರ್ ಮುತ್ತು ಕುಮಾರಸ್ವಾಮಿ'ಯಾದರು. ಈ ಗೌರವವನ್ನು ಅವರೆಗೆ ಮತ್ತಾವ ಪ್ರಾಚ್ಯದೇಶೀಯನೂ ಪಡೆದಿರಲಿಲ್ಲ. ಆ ಕಾಲದ ಆಂಗ್ಲಸಮಾಜದ ಮೇಲೆ

ಸಾಕಷ್ಟು ಪ್ರಭಾವವನ್ನೂ ಬೀರಿದರು. ಆಗ ಬ್ರಿಟಿಷ್‌ರಾಜ್ಯದ ಮುಖ್ಯಮಂತ್ರಿಯಾಗಿದ್ದ ಬೆಂಜಮಿನ್ ಡಿಸ್‌ರೇಲಿ (ಮುಂದೆ ಅರ್ಲ್ ಬೀಕನ್ಸ್‌ಫೀಲ್ಡ್ ಆದವರು; ರಾಜಕಾರಣಿ, ಕಾದಂಬರಿಕಾರ), ಲಾರ್ಡ್ ಟೆನಿಸನ್ (ಸುಪ್ರಸಿದ್ಧ ಕವಿ), ಲಾರ್ಡ್ ಪಾಮರ್‌ಸ್ಟನ್ (ರಾಜಕಾರಣಿ) ಮುಂತಾದ ಗಣ್ಯರು ಇವರ ಮಿತ್ರರೆನಿಸಿದರು.

ಲಕ್ಷ್ಮೀವರಾಹ

ಇದೇ ಸಮಯದಲ್ಲಿ ಅವರ ಕೆಲವು ಗ್ರಂಥಗಳೂ ಲಂಡನ್ನಿನಲ್ಲಿ ಪ್ರಕಟವಾದುವು. ನ್ಯಾಯವಿಭಾಗದಲ್ಲಿ ತಜ್ಞರೆನಿಸಿ ರಾಜಕಾರಣಿಯಾಗಿದ್ದರೂ, ಮುತ್ತು ಕುಮಾರಸ್ವಾಮಿ ಸಂಸ್ಕೃತ, ಪಾಳಿ, ತಮಿಳು, ಇಂಗ್ಲಿಷ್ ಭಾಷೆಗಳಲ್ಲಿ ವಿದ್ವಾಂಸರು. ಪಾಳಿಭಾಷೆಯಿಂದ 'ದಾಠಾವಂಸ' (ಸಂಸ್ಕೃತದಲ್ಲಿ 'ದಂಷ್ಟ್ರವಂಶ', ಬುದ್ಧನ ಸ್ಮಾರಕವಾಗಿ ಅವರ ಹಲ್ಲೊಂದು ಸಿಂಹಳದ್ವೀಪಕ್ಕೆ ಬಂದ ವೃತ್ತಾಂತವನ್ನು ಕುರಿತ ಪುರಾಣಗ್ರಂಥ) ; 'ಸುತ್ತನಿಪಾತ' (ಬುದ್ಧ ಪ್ರವಚನಗ್ರಂಥ)—ಎರಡನ್ನೂ ಇಂಗ್ಲಿಷಿಗೆ ಅನುವಾದಮಾಡಿ 1874 ರಲ್ಲಿ ಪ್ರಕಟಿಸಿದರು. ಆ ಮೊದಲೇ (1863 ರಲ್ಲಿ) ತಮಿಳಿನಿಂದ ಹರಿಶ್ಚಂದ್ರನಾಟಕದ ಅವರ ಇಂಗ್ಲಿಷ್ ಅನುವಾದ ಲಂಡನ್ನಿನಿಂದಲೇ ಪ್ರಕಟ ಆಗಿದ್ದಿತು.

ಈ ಬಾರಿಯ ಇಂಗ್ಲೆಂಡ್ ಪ್ರವಾಸದಲ್ಲಿ ಅವರು ಎಲಿಜಬೆತ್ ಕ್ಲೇ ಬೀಬಿಯೆಂಬ ತರುಣಿಯನ್ನು ಭೇಟಿಯಾಗಿ, ಪ್ರೀತಿಸಿ 1875ರ ಮಾರ್ಚ್ 18 ರಂದು ಮದುವೆಯಾದರು. ಈಕೆ ಕೆಂಟ್ ಪ್ರದೇಶದ ಶ್ರೀಮಂತ ಕುಟುಂಬವೊಂದಕ್ಕೆ ಸೇರಿದ್ದವರು. ಈ ಕುಟುಂಬಕ್ಕೂ ಭಾರತದೇಶ-ಸಿಂಹಳದ್ವೀಪ ಗಳಿಗೂ ವ್ಯಾಪಾರ, ಉದ್ಯಮ ಮೊದಲಾದ ಹಲವು ಬಗೆಗಳಲ್ಲಿ ಸಂಬಂಧವಿದ್ದಿತು. ಈ ಹುಡುಗಿಗೆ ಭಾರತೀಯಸಂಸ್ಕೃತಿಯ ಮೇಲೆ ತುಂಬ ಆದರವೂ ಇದ್ದಿತು. ಸರ್ ಮುತ್ತು ಕುಮಾರಸ್ವಾಮಿ ಮತ್ತು ಈಕೆಯ ವಿವಾಹ ಕ್ಯಾಂಟರ್‌ಬರಿಯ ಆರ್ಚ್‌ಬಿಷಪ್ ಅವರ ಸಮ್ಮುಖದಲ್ಲೇ ಜರುಗಿತು. 1876 ರಲ್ಲಿ ಮದುವೆಯಾಗಿ, ಹೆಂಡತಿಯೊಡನೆ ಅದೇ ವರ್ಷ ಸರ್ ಮುತ್ತು ಕುಮಾರಸ್ವಾಮಿ ಸಿಂಹಳದ್ವೀಪಕ್ಕೆ ಹಿಂದಿರುಗಿದರು.

ಕೊಲೊಂಬೋನಗರದ ಹೊರಗೆ ರ್‍ಹೈನ್ ಲ್ಯಾಂಡ್ ಎಂಬಲ್ಲಿ ನಿಸರ್ಗಸುಂದರ ವಾದ ಕೊಲ್ಲುಪಿತಿಯ ಎಂಬ ಪ್ರದೇಶದಲ್ಲಿ ಮನೆ ಕಟ್ಟಿಸಿಕೊಂಡರು. ಅಲ್ಲಿ ಮರುವರ್ಷ (ಎಂದರೆ 1877 ರ ಆಗಸ್ಟ್ 22 ರಂದು) ಅವರಿಗೆ ಆನಂದ ಕುಮಾರಸ್ವಾಮಿ ಹುಟ್ಟಿದರು. ಅವರ ಹೆಸರಿನ ವಿವರ ಮೊದಲಲ್ಲೇ ಬಂದಿದೆ. ಮಗುವಿಗೆ ಎರಡು ವರ್ಷಗಳು

ಕಳೆಯುವ ಮೊದಲೇ (1878 ರಲ್ಲಿ) ತಾಯಿ ಮಗುವಿನೊಂದಿಗೆ ಇಂಗ್ಲೆಂಡಿಗೆ ಮರಳಿದರು. ಕಾರಣವೇನೆಂದು ಸರಿಯಾಗಿ ತಿಳಿದಿಲ್ಲ ; ಗಂಡ-ಹೆಂಡತಿಯರಿಗೆ ವಿರಸ ಒದಗಿತೆಂದು ಒಂದು ಒಕ್ಕಣೆ. ಸಿಂಹಳದ್ವೀಪದ ಹವ ತಾಯಿಗೆ ಒಗ್ಗಲಿಲ್ಲವೆಂದು ಇನ್ನೊಂದು ಒಕ್ಕಣೆ. ಕಾರಣ ಏನಾದರಿರಲಿ, ಕೊಲೊಂಬೋದಲ್ಲಿ ಸರ್ ಮುತ್ತು ಕುಮಾರಸ್ವಾಮಿ ಒಬ್ಬರೇ ಉಳಿದುಕೊಂಡರು; ಹೆಂಡತಿಯೂ ಮಗನೂ ಇಂಗ್ಲೆಂಡ್ ಸೇರಿದರು. ಆಗ ಮುತ್ತು ಕುಮಾರಸ್ವಾಮಿ ಶೈವಸಿದ್ಧಾಂತವನ್ನು ಅಭ್ಯಾಸಮಾಡಿ 'ತಾಯುಮಾನವರ್' ಎಂಬ ತಮಿಳುಗ್ರಂಥವನ್ನು ಇಂಗ್ಲಿಷಿಗೆ ಅನುವಾದ ಮಾಡಿದರು. ಅಚ್ಚೂ ಆಯಿತು, ಆದರೆ ಪ್ರಕಟವಾಗಲಿಲ್ಲ.

ಇದಾದ ಕೆಲವು ತಿಂಗಳುಗಳಲ್ಲಿ ಸರ್ ಮುತ್ತು ಕುಮಾರಸ್ವಾಮಿಯೂ ಇಂಗ್ಲೆಂಡಿಗೆ ಹೋಗಿ ಅಲ್ಲಿ ಪಾರ್ಲಿಮೆಂಟ್ ಸದಸ್ಯರಾಗುವ ಏರ್ಪಾಟಾಯಿತು. ಆದರೆ ಅವರು ಹೊರಡಬೇಕೆಂದು ನಿಶ್ಚಯವಾದ ದಿನವೇ (1879 ರ ಮೇ ನಾಲ್ಕರಂದು) ಇದ್ದಕ್ಕಿದ್ದಂತೆ ಕೊಲೊಂಬೋದಲ್ಲೇ ಪ್ರಾಣಬಿಟ್ಟರು. ಆಗ ಅವರಿಗೆ ನಲವತ್ತಾರು ವರ್ಷ ವಯಸ್ಸಷ್ಟೆ. ಇಂಗ್ಲೆಂಡ್‌ನಲ್ಲಿ ಎಲಿಜಬೆತ್ ಮೂವತ್ತುವರ್ಷ ಮುಟ್ಟುವ ಮೊದಲೇ ವಿಧವೆಯಾದರು! ಮಗನಿಗೆ ಇನ್ನೂ ಎರಡು ವರ್ಷ ಪೂರಾ ತುಂಬಿರಲಿಲ್ಲ. ಎಲಿಜಬೆತ್ ಧೃತಿಗೆಡಲಿಲ್ಲ. ಕೊಲೊಂಬೋಗೆ ಹಿಂದಿರುಗಲಿಲ್ಲ, ಮತ್ತೆ ಮದುವೆ ಮಾಡಿಕೊಳ್ಳಲಿಲ್ಲ, ತನ್ನ ತೌರೂರಾದ ಕೆಂಟ್‌ನಲ್ಲಿ ಸಣ್ಣ ಮನೆಯೊಂದನ್ನು ಬಾಡಿಗೆಗೆ ಹಿಡಿದು ಅಲ್ಲಿ ನೆಲಸಿ ಮಗನನ್ನು ಬೆಳೆಸಿದರು, ಮುಂದೆ ತಂದರು. ಈಕೆ 1939 ರಲ್ಲಿ ತೀರಿಕೊಂಡರು— ಆನಂದ ಕುಮಾರಸ್ವಾಮಿಗೆ ಅರವತ್ತೆರಡು ವರ್ಷ ವಯಸ್ಸಾದಾಗ.

ಹನ್ನೆರಡು ವರ್ಷ ವಯಸ್ಸಿನವನಿದ್ದಾಗ ಆನಂದನ ವಿದ್ಯಾಭ್ಯಾಸವು ಇಂಗ್ಲೆಂಡಿನ ಗ್ಲೌಚೆಸ್ಟರ್ ಶೈರಿನಲ್ಲಿರುತ್ತಿದ್ದ ಸ್ಪ್ರಿಂಗ್‌ಫೀಲ್ಡಿನ ವೈಕ್ಲಿಫ್ ಶಾಲೆಯಲ್ಲಿ 1889 ರಲ್ಲಿ ಮೊದಲಾಯಿತು. ಇಲ್ಲಿ ಆರು ವರ್ಷಗಳ ಕಾಲ ಪಡೆದ ಶಿಕ್ಷಣದಿಂದ ಅವನಲ್ಲಿ ವಿಜ್ಞಾನದ ಬಗ್ಗೆ ಆಸಕ್ತಿ ಮೂಡಿತು. ಅದರಲ್ಲೂ ಭೂವಿಜ್ಞಾನ (ಜಿಯಾಲಜಿ) ಅವರಿಗೆ ಅಚ್ಚುಮೆಚ್ಚಾಯಿತು. ಓದಿನಲ್ಲಿ ಮುಂದೆ, ಆಟದಲ್ಲೂ ಮುಂದೆ; ಎರಡರಲ್ಲೂ ತುಂಬ ಶ್ರದ್ಧೆ. ಹದಿನೆಂಟು ವರ್ಷದವರಿರುವಾಗ ಲಂಡನ್ನಿನ ಯೂನಿವರ್ಸಿಟಿ ಕಾಲೇಜನ್ನು ಸೇರಿದರು. ಭೂವಿಜ್ಞಾನ, ಸಸ್ಯಶಾಸ್ತ್ರ (ಬಾಟನಿ)ಗಳನ್ನೇ ವಿಶೇಷವಾದ ಅಧ್ಯಯನಕ್ಕೆ ಆರಿಸಿಕೊಂಡು 1900 ರಲ್ಲಿ ಪ್ರಥಮಶ್ರೇಣಿಯಲ್ಲಿ ಗೌರವದೊಂದಿಗೆ ಬಿ. ಎಸ್‌ಸಿ ಪರೀಕ್ಷೆಯನ್ನು ಮುಗಿಸಿದರು.

ಈ ನಡುವೆ ತಾಯಿಯೊಂದಿಗೆ ಕೆಲವು ಬಾರಿ ಸಿಂಹಳದ್ವೀಪಕ್ಕೆ ಹೋಗಿದ್ದು ಅಲ್ಲಿನ ಭೂಗತವಿವರಗಳು, ಸಸ್ಯಸಂಪತ್ತು ಈ ವಿಚಾರವಾಗಿ ಅಧ್ಯಯನ ನಡೆಸಿದ್ದುದ ರಿಂದ ಲಂಡನ್ನಿನ ಯೂನಿವರ್ಸಿಟಿ ಕಾಲೇಜಿನವರು ಇವರನ್ನು 'ಫೆಲೋ' ಎಂದು ನೇಮಕ ಮಾಡಿಕೊಂಡರು. ಇದು ನಡೆದ ವರ್ಷ 1903. ಅದಕ್ಕೆ ಹಿಂದಿನ ವರ್ಷ (1902 ರ ಜೂನ್ 19 ರಂದು) ಅವರಿಗೆ ಮದುವೆಯೂ ಆಗಿದ್ದಿತು. ಎತೆಲ್ ಮೈರೆ

(Mairet) ಎಂಬ ಯುವತಿ ಇವರ ಕೈಹಿಡಿದಿದ್ದರು; ಆಕೆ ಆಂಗ್ಲಳಾದರೂ ಭಾರತಸಂಸ್ಕೃತಿಯನ್ನು ಕುರಿತು ಆದರಾಭಿಮಾನಗಳನ್ನು ತಳೆದಿದ್ದವಳು. ಫೋಟಾಗ್ರಫಿಯಲ್ಲಿ ಚತುರೆ, ಕಲೆಗಳ ಮೇಲೆ ಅನುರಾಗವಿದ್ದವಳು; ಅನುಕೂಲ ದಾಂಪತ್ಯ.

ಪ್ರತಿಭಾಶಾಲಿಯೆಂದು ಪರಿಗಣಿಸಲ್ಪಟ್ಟ ಆನಂದ ಕುಮಾರಸ್ವಾಮಿ, ತನ್ನ ತಂದೆಯ ದೇಶವಾದ ಸಿಂಹಳದ ಭೂಸಂಪತ್ತನ್ನು ಕುರಿತು ಹಲವಾರು ಪ್ರೌಢಲೇಖನಗಳನ್ನೂ ಬರೆದಿದ್ದರು, ಸ್ವಾರಸ್ಯವಾದ ಸಂಶೋಧನೆಗಳನ್ನೂ ನಡೆಸಿದ್ದರು. ಇದನ್ನು ಮೆಚ್ಚಿಕೊಂಡು ಬ್ರಿಟಿಷ್ ಆಡಳಿತದವರು ತಮ್ಮ ವಸಾಹತಾಗಿದ್ದ ಸಿಂಹಳ ದ್ವೀಪದಲ್ಲಿ ಖನಿಜಗಳನ್ನು ಪತ್ತೆಮಾಡಿ ವಿವರಗಳನ್ನು ಪಡೆಯಲು ಸರ್ವೇಕ್ಷಣಾವಿಭಾಗವೊಂದನ್ನು 1903 ರಲ್ಲಿ ಏರ್ಪಡಿಸಿದರು. 'ಮಿನರಲಾಜಿಕಲ್ ಸರ್ವೆ ಆಫ್ ಸಿಲೋನ್' ಎಂದು ಹೆಸರು. ಅದರ ನಿರ್ದೇಶಕರಾಗಿ ಆನಂದ ಕುಮಾರಸ್ವಾಮಿಯನ್ನೇ ನೇಮಿಸಿದರು. ಆಗ ಅವರಿಗೆ ಇಪ್ಪತ್ತಾರು ವರ್ಷ ವಯಸ್ಸಷ್ಟೆ. ಅವರು ಖನಿಜಶಾಸ್ತ್ರವನ್ನು ಕುರಿತು ಬರೆದಿದ್ದ ಪ್ರಬಂಧಗಳಿಗೆ ಮುಂದೆ 1906 ರಲ್ಲಿ ಲಂಡನ್ ವಿಶ್ವವಿದ್ಯಾನಿಲಯವು ಡಾಕ್ಟೊರೇಟ್ ಪ್ರಶಸ್ತಿಯನ್ನೂ ನೀಡಿತು.

ಮುಖಲಿಂಗ

ಆಂಗ್ಲಹೆಂಡತಿಯೊಂದಿಗೆ ಆನಂದ ಕುಮಾರಸ್ವಾಮಿ ಹೀಗೆ ವಿಜ್ಞಾನಿಯೆಂದು ಹೆಸರಾಗಿ, ಹಿರಿಯ ಹುದ್ದೆಯೊಂದನ್ನು ಹಿಡಿದು, ತನ್ನ ತಂದೆಯಿರುತ್ತಿದ್ದು ತೀರಿಕೊಂಡ ಸಿಂಹಳದ್ವೀಪಕ್ಕೆ ಹಿಂದಿರುಗಿದಾಗ ಅವರಿಗೊಂದು ಬಗೆಯ ಹೆಮ್ಮೆ, ಸಮಾಧಾನ, ಉತ್ಸಾಹ.

ಭೂ-ವಿಜ್ಞಾನದಿಂದ ಕಲೆಯ ಕಡೆಗೆ

ಆನಂದ ಕುಮಾರಸ್ವಾಮಿ ಮತ್ತು ಹೆಂಡತಿ ಎತೆಲ್ ಮೈರೆ ಸಿಂಹಳದ್ವೀಪದ ಕಡೆಯ ರಾಜಧಾನಿಯಾಗಿದ್ದ ಕ್ಯಾಂಡಿಯ ಹೊರಗೆ ಬಂಗಲೆಯೊಂದರಲ್ಲಿ ವಾಸಮಾಡ ತೊಡಗಿದರು. ಖನಿಜಸಂಪತ್ತಿನ ಸರ್ವೇಕ್ಷಣೆಯಲ್ಲಿ ತೊಡಗಿದ್ದ ಆನಂದ ಕುಮಾರಸ್ವಾಮಿ ದಿನದ ಬಹುಕಾಲವನ್ನೂ, ತಿಂಗಳಿನ ಬಹುದಿನಗಳನ್ನೂ ಮನೆಯ ಹೊರಗೇ ಕಳೆಯುವರು. ಹೆಂಡತಿ ಬೇಸರವನ್ನು ಕಳೆಯಲು ಸಿಂಹಳದ ಸಾಂಪ್ರದಾಯಿಕ ಕಸೂತಿಕೆಲಸದ ಅಧ್ಯಯನವನ್ನು ಮೊದಲು ಮಾಡಿದರು; ಸಿಂಹಳದ ಕೆಲಸಗಾರರು ತಂತಮ್ಮ ಕೆಲಸದಲ್ಲಿ ತೊಡಗಿರುವುದನ್ನು ಛಾಯಾಚಿತ್ರಗಳಲ್ಲಿ ಹಿಡಿದು ಸಂಗ್ರಹಿಸಿದರು. ಮುಂದೆ ಸಿಂಹಳದ ಸಾಂಪ್ರದಾಯಿಕ ಕಸೂತಿಯನ್ನು ಕುರಿತ ಆಕೆಯ ಲೇಖನವೊಂದು 'ಸಿಲೋನ್ ನ್ಯಾಷನಲ್ ರೆವ್ಯೂ' ಪತ್ರಿಕೆಯಲ್ಲಿ (1906ರ ಜೂನ್) ಪ್ರಕಟವಾಯಿತು. ಮುಂದೆ ಕರಕುಶಲಕಲೆಯನ್ನು ಕುರಿತಂತೆ ಹಲವು ಗ್ರಂಥಗಳನ್ನೂ ಈಕೆ ರಚಿಸಿದರು. ಆಕೆಯೊಂದಿಗೆ ಇವರು ಇದ್ದದ್ದು ಮುಂದೆ ಆರೇಳು ವರ್ಷಗಳು ಮಾತ್ರ. ಅನಂತರ ವಿವಾಹವಿಚ್ಛೇದನವಾಯಿತು. ಆದರೂ ಆಕೆಯೊಂದಿಗೆ ಪತ್ರವ್ಯವಹಾರವನ್ನು ಇರಿಸಿಕೊಂಡೇ ಇದ್ದರು. ಆಕೆ ತೀರಿಕೊಂಡದ್ದು 1952ರಲ್ಲಿ.

ಆನಂದ ಕುಮಾರಸ್ವಾಮಿಯ ಗಮನ ಕರಕುಶಲಕಲೆಗಳ ಕಡೆಗೆ ಹರಿಯಲು ಎತೆಲ್ ಮೈರೆಯ ಲೇಖನ ಪ್ರೇರಣೆಯನ್ನೊದಗಿಸಿತು. ಆದರೆ ಮೊದಲವರ್ಷಗಳಲ್ಲಿ ವೈಜ್ಞಾನಿಕ-ಅನ್ವೇಷಣೆಯ ಕೆಲಸವೇ ಅವರ ಗಮನವನ್ನೆಲ್ಲ ಸೆಳೆದಿದ್ದಿತು. ಭೂಭಾಗಗಳ ನಕ್ಷೆಗಳನ್ನು ಸಿದ್ಧಪಡಿಸುವುದು, ಉಪಯುಕ್ತವಾಗುವ ಮೈಕಾ, ಗ್ರಾಫೈಟ್, ಕೊರಂಡಂ ಮುಂತಾದ ಖನಿಜಸ್ಥಳಗಳನ್ನು ಪತ್ತೆಮಾಡುವುದು, ವಾರ್ಷಿಕವರದಿಗಳನ್ನು ಸಿದ್ಧಪಡಿಸುವುದು—ಈ ಬಗೆಯ ಕೆಲಸಗಳಲ್ಲೇ ಹಗಲೂ ರಾತ್ರಿಯೂ ತೊಡಗಿರುತ್ತಿದ್ದರು. ಕಾಲನಡಿಗೆಯೋ ಎತ್ತಿನ ಬಂಡಿಯೋ, ಅಲೆದಾಟ ಸಂಚಾರಗಳು ವಿಶೇಷವಾಗಿಯೇ ಇರುತ್ತಿದ್ದುವು. ಭೂಗರ್ಭಪರೀಕ್ಷೆ, ಅನ್ವೇಷಣೆ ತುಂಬ ಶ್ರಮಸಾಧ್ಯವಾದುವಷ್ಟೇ.

ಆನಂದತಾಂಡವ
(ಸಿಯಮಂಗಳಂನ ಅವನಿಭಾಜನ ಗುಹೆಯ ಕಂಬಶಿಲ್ಪ)

ಈ ಅವಧಿಯಲ್ಲಿ ಅವರ ಪ್ರತಿಭೆ ಸಂಶೋಧನೆಯೊಂದರಲ್ಲಿ ಕಾಣಿಸಿಕೊಂಡಿತು. 1904 ರಲ್ಲಿ ಅವರು 'ತೋರಿಯನೈಟ್' (ತೋರಿಯಂ ಮತ್ತು ಯುರೇನಿಯಂಗಳ ಆಕ್ಸೈಡ್) ಎಂಬ ಹೊಸ ಖನಿಜವೊಂದನ್ನು ಕಂಡುಹಿಡಿದರು. ಸಾಮಾನ್ಯವಾಗಿ ಹೀಗೆ ಹೊಸ ಧಾತುಗಳನ್ನು ಕಂಡುಹಿಡಿದವರು ಅದಕ್ಕೆ ತಮ್ಮ ಹೆಸರನ್ನೇ ಇಟ್ಟು ಗುರುತಿಸುವುದು ವಾಡಿಕೆ. ಆದರೆ ಆನಂದ ಕುಮಾರಸ್ವಾಮಿಗೆ ಈ ಪದ್ಧತಿ ಹಿಡಿಸಲಿಲ್ಲ; ಸಂಶೋಧಕನ ಅಹಂಕಾರ ಇಲ್ಲಿ ಕಾಣಿಸಿಕೊಳ್ಳಬಾರದೆಂದು ನಿಶ್ಚಯಿಸಿ ತಾವು ಕಂಡುಹಿಡಿದ ಖನಿಜಕ್ಕೆ ಅದರ ಸ್ವರೂಪವನ್ನು ಅವಲಂಬಿಸಿ 'ತೋರಿಯನೈಟ್' ಎಂದು ನಾಮಕರಣ ಮಾಡಿದರು.

ಒಮ್ಮೆ, ತಮ್ಮ ಎಂದಿನ ಸರ್ವೇಕ್ಷಣದಲ್ಲಿ ತೊಡಗಿ, 'ಆಂಡಸ್ ಪೀಕ್' ಎಂಬ ಪರ್ವತಶಿಖರದ ಬಳಿ ಹಳ್ಳಿಯೊಂದರಲ್ಲಿ ತಂಗಿದ್ದರು. ಬುದ್ಧನ ಪಾದಗಳಿವೆಯೆಂದು ಆ ಶಿಖರ ಬೌದ್ಧಮತೀಯರಿಗೆ ಪವಿತ್ರಕ್ಷೇತ್ರ. ರತ್ನಾಪುರವೆಂಬ ನಗರದಿಂದ ಈ ಶಿಖರಕ್ಕೆ ಹೋಗುವ ಕಾಲುದಾರಿ ಆನಂದ ಕುಮಾರಸ್ವಾಮಿ ತಂಗಿದ್ದ ಹಳ್ಳಿಯಮೇಲೇ ಹಾದುಹೋಗುತ್ತಿತ್ತು. ಅದು ಯಾತ್ರೆಯ ಕಾಲವಲ್ಲದ್ದರಿಂದ ದಾರಿಯಲ್ಲಿ ಬಹು ಮಂದಿ ಇರಲಿಲ್ಲ. ಬೆಳಗ್ಗೆ ಸರ್ವೇಕ್ಷಣವನ್ನು ಮುಗಿಸಿಕೊಂಡು ಆನಂದ ಕುಮಾರಸ್ವಾಮಿ ಹಳ್ಳಿಗೆ

ಹಿಂದಿರುಗಿ, ತಾವು ಉಳಿದುಕೊಂಡಿದ್ದ ಮನೆಯ ಹೊರಗೆ ಕುಳಿತಿದ್ದರು. ನಿಸರ್ಗವೆಲ್ಲ ಶಾಂತವಾಗಿದ್ದು, ದೂರದಲ್ಲಿ ಬೇಸಾಯಗಾರನೊಬ್ಬ ಹಾಡುತ್ತಿದ್ದುದನ್ನು ಕೇಳುತ್ತ ಅವರು ವಾತಾವರಣದ ಸೌಂದರ್ಯವನ್ನು ಸವಿಯುತ್ತಿದ್ದರು. ಇಂಗ್ಲೆಂಡಿನಿಂದ ಮತ್ತೆ ಇಲ್ಲಿಗೆ ಹಿಂದಿರುಗಿದುದು ತನ್ನ ಸೌಭಾಗ್ಯವೆಂದು ಭಾವಿಸಿದರು. ಅಷ್ಟುಹೊತ್ತಿಗೆ ಸರಿಯಾಗಿ ಶಿಖರದ ದಾರಿಯಲ್ಲಿ ಒಬ್ಬ ಸಿಂಹಳೀಹೆಂಗಸು ತನ್ನ ಮಗನನ್ನು ಕರೆದುಕೊಂಡು ಸಾಗುತ್ತಿದ್ದಳು. ಇಬ್ಬರ ಉಡುಪುಗಳೂ ಐರೋಪ್ಯ ಮಾದರಿಯವು. ಅಷ್ಟೇನು ಅನೂಕೂಲವಿದ್ದವಳಂತೆ ಕಾಣದಿದ್ದರೂ ಆ ಹೆಂಗಸಿಗೆ ತಾನು ತೊಟ್ಟಿರುವ ಉಡುಪಿನ ಬಗ್ಗೆ ಹೆಮ್ಮೆಯಿದ್ದಂತೆ ತೋರುತ್ತಿತ್ತು. ಆಕೆ ತನ್ನ ಧರ್ಮವನ್ನು ಬಿಟ್ಟು ಕ್ರೈಸ್ತಧರ್ಮ ಹಿಡಿದಿದ್ದವಳು, ತನ್ನ ದೇಶೀಯ ತೊಡುಗೆಯನ್ನೂ ಬಿಟ್ಟಿದ್ದಳು. ಆದರೆ ಆನಂದ ಕುಮಾರಸ್ವಾಮಿ ಇದನ್ನು ಕಂಡು ಹೇಸಿದರು. ಆಕೆಯ ಮೈಮೇಲೆ ಪರದೇಶದ ಉಡುಪು ಅಸಂಬದ್ಧವಾಗಿದ್ದುದನ್ನು ಗಮನಿಸಿದರು. ಒಡನೆಯೇ ಅವರ ಮನಸ್ಸಿನಲ್ಲಿ, ಹೊರದೇಶದ ಸಂಸ್ಕೃತಿ ನಮ್ಮ ನಾಡಿಗೆ ದಾಳಿ ಮಾಡಿ ಒದಗಿಸಿರುವ ಅನಾಹುತ ಭೂತಾಕಾರವಾಗಿ ಎದ್ದು ನಿಂತಿತು. ಈ ದಾಳಿಯನ್ನು ತಡೆಗಟ್ಟದಿದ್ದರೆ ಸಾಂಪ್ರದಾಯಿಕ ಸಂಸ್ಕೃತಿಯ ನಾಶವಾಗುವುದು ನಿಶ್ಚಯ ಎಂಬುದನ್ನು ಕಂಡುಕೊಂಡರು. ತಮ್ಮ ಸಂಸ್ಕೃತಿಯ ವಿವರಗಳ ಮೇಲೆ ನಮ್ಮ ಜನಕ್ಕೆ ಅಭಿಮಾನ ಮೂಡುವಂತೆ ಮಾಡಲು ಸಂಕಲ್ಪಿಸಿದರು.

ಗಜಾಸುರಸಂಹಾರಮೂರ್ತಿ
(ಐರಾವತೇಶ್ವರಗುಡಿಯ ಶಿಲಾಶಿಲ್ಪ, ದಾರಾಸುರಂ)

ಈ ಪ್ರಸಂಗವೊಂದು ಅವರ ಬಾಳುವೆಯಲ್ಲಿ ಮುಖ್ಯ ಘಟ್ಟವಾಯಿತು. ಇಂಗ್ಲೆಂಡಿನಲ್ಲಿ ತಮ್ಮ ತಾಯಿಯ ಆರೈಕೆಯಲ್ಲಿ ಬೆಳೆಯುತ್ತಿರುವಾಗಲೇ ಅವರಿಗೆ ಭಾರತದ, ಸಿಂಹಳದ ದೇವದೇವತೆಯರು, ಪುರಾಣಕಥೆಗಳು, ಪೂಜಾಪದ್ಧತಿಗಳು ತಿಳಿದಿದ್ದುವು; ಸಂಪ್ರದಾಯದ ಬಗ್ಗೆ ಆದರವೂ ಬೆಳೆದಿದ್ದಿತು. ಆದರೆ ಹೊರಗೆಲ್ಲ ಕ್ರೈಸ್ತಪ್ರಭಾವ, ಪಾಶ್ಚಾತ್ಯವಾತಾವರಣವೇ ಇದ್ದುದರಿಂದ ತಮ್ಮ ನಾಡಿನ ನಿಜಸ್ಥಿತಿಯ ಅರಿವು ಮೂಡದಿದ್ದುದು ಸಹಜವೇ. ಆದರೆ ಕೆಲಸದ ಮೇಲೆ ಸಿಂಹಳಕ್ಕೆ ಬಂದು ಅಲ್ಲೇ ಒಂದೆರಡು ವರ್ಷ ಉಳಿದ ಮೇಲೆ ಇಲ್ಲಿನ ಸಂಸ್ಕೃತಿ, ಕಲೆ, ಧರ್ಮಗಳ ನೇರವಾದ ಪರಿಚಯವೂ ಆಯಿತು. ಹೊರದೇಶದಿಂದ ಬಂದ ಪ್ರಭಾವ ಇಲ್ಲಿನ ವಿವರಗಳನ್ನು ಹೊರದೂಡುತ್ತಿರುವ ಅನುಭವವೂ ಆಯಿತು. ಐರೋಪ್ಯ ಸಂಸ್ಕೃತಿಯ ವಿಚಾರವಾಗಿ ಒಂದು ಬಗೆಯ ಜುಗುಪ್ಸೆಯೂ ತಲೆದೋರಿತು.

ಅವರು ಖನಿಜ-ಸರ್ವೇಕ್ಷಣದ ನಿರ್ದೇಶಕರಾಗಿರುವಾಗಲೇ ಸಿಂಹಳದ್ವೀಪದ ಕಲೆಯ ಪ್ರಕಾರಗಳನ್ನೂ ಸಂಸ್ಕೃತಿಯ ವಿವರಗಳನ್ನೂ ಅಭ್ಯಾಸ ಮಾಡತೊಡಗಿದರು. ತಮ್ಮ ತಂದೆಯವರು ತಿಳಿದಿದ್ದ ಸಂಸ್ಕೃತ, ಪಾಳಿ, ಸಿಂಹಳೀಭಾಷೆಗಳನ್ನು ಕಲಿಯತೊಡಗಿದರು. ತಮ್ಮ ತಂದೆ ಆದರದಿಂದ ಅಧ್ಯಯನ ಮಾಡಿದ್ದ ತಮಿಳುಗ್ರಂಥಗಳನ್ನು, ಅದರಲ್ಲೂ ಶೈವಸಿದ್ಧಾಂತದ ಗ್ರಂಥಗಳನ್ನು ಓದಲು ಮೊದಲು ಮಾಡಿದರು. ಸಿಂಹಳದಲ್ಲಿ ಹರಡಿದ್ದ ಬೌದ್ಧಧರ್ಮವನ್ನೂ ಕುರಿತು ಆಸಕ್ತಿಯನ್ನು ತಳೆದರು.

ವಿಶೇಷವಾಗಿ ಪ್ರಾಚೀನ ಕಂಡಯ ಪ್ರದೇಶದ ವಾಸ್ತುಶಿಲ್ಪ ಕರಕುಶಲಕಲೆಗಳು ಅವರಿಗೆ ತುಂಬ ಸ್ವಾರಸ್ಯವೆನಿಸಿದುವು. ಇವನ್ನು ಕುರಿತು ಹಲವು ಲೇಖನಗಳನ್ನೂ ಬರೆದರು. ಮತ್ತು ಸಿಂಹಳೀಯರ ಸಾಮಾಜಿಕಸುಧಾರಣೆಯನ್ನು ಕೈಗೊಂಡು, 'ಸಿಲೋನ್ ಸೋಷಿಯಲ್ ರಿಫಾರ್ಮ್ ಸೊಸೈಟಿ'ಯನ್ನು ಸ್ಥಾಪಿಸಿ, ಅದರ ಅಧ್ಯಕ್ಷರಾದರು (1905); ಅದರ ವತಿಯಿಂದ ಪತ್ರಿಕೆಯೊಂದನ್ನೂ ಹೊರತಂದರು (1906). ಇವರ ಈ ಸಾಮಾಜಿಕಕಾರ್ಯಗಳಲ್ಲಿ ಅವರ ಚಿಕ್ಕಪ್ಪನ ಮಕ್ಕಳು ಸರ್ ಪೊನ್ನಂಬಲಂ ಅರುಣಾಚಲಂ, ಪೊನ್ನಂಬಲಂ ರಾಮನಾಥನ್, ಪೊನ್ನಂಬಲಂ ಕುಮಾರಸ್ವಾಮಿ—ಇವರು ನೆರವಾದರು.

ಸರಕಾರಿಹುದ್ದೆಯಲ್ಲಿ ತೊಡಗಿ ಅವರು ಸಿಂಹಳದಲ್ಲಿದ್ದುದು ಮೂರೇ ವರ್ಷಗಳು: 1903 ರಿಂದ 1906 ರವರೆಗೆ. 1906 ರ ಮೇ 28 ರಂದು ಅವರಿಗೆ ಲಂಡನ್ ವಿಶ್ವವಿದ್ಯಾನಿಲಯವು ಭೂಗರ್ಭಶಾಸ್ತ್ರವಿಭಾಗದಲ್ಲಿ ಡಿ. ಎಸ್‌ಸಿ ಪ್ರಶಸ್ತಿಯನ್ನು ನೀಡಿತು. ಇದಕ್ಕಾಗಿ 'ಸಿಂಹಳದ ಭೂಗರ್ಭಶಾಸ್ತ್ರಕ್ಕೆ ಕೊಡುಗೆ' ಎಂಬುದು ಅವರು ಬರೆದಿದ್ದ ಪ್ರಬಂಧ. 1906ರಲ್ಲಿ ಅಧಿಕಾರಾವಧಿ ಮುಗಿದಾಗ ಮತ್ತೆ ಅದನ್ನು ಮುಂದುವರಿಸಿರೆಂದು ಆಡಳಿತದವರನ್ನು ಕೇಳಲಿಲ್ಲ. ಅಧಿಕಾರಾವಧಿ ಮುಗಿದೊಡನೆ ಭಾರತದೇಶಕ್ಕೆ ಬಂದು ಕೆಲವು ತಿಂಗಳುಗಳು ಸುತ್ತಾಡಿದರು; ಭಾರತೀಯ-ಸಂಸ್ಕೃತಿಯ ನೇರವಾದ, ಆಳವಾದ ಪರಿಚಯವನ್ನು ಪಡೆದುಕೊಂಡರು. ಅನಂತರ, ತಾವು ಸಿಂಹಳದ್ವೀಪದ ಕರಕುಶಲಕಲೆಗಳ ಬಗ್ಗೆ ಸಂಗ್ರಹಿಸಿದ್ದ ವಿವರಗಳನ್ನೆಲ್ಲ ಪುಸ್ತಕವಾಗಿ ಪ್ರಕಟಿಸಲು ಮನಸ್ಸು ಮಾಡಿ ಇಂಗ್ಲೆಂಡಿಗೆ ಹಿಂದಿರುಗಿದರು. 1907 ರಲ್ಲಿ ತಾವೇ ಅಚ್ಚುಕೂಟವೊಂದನ್ನು ಏರ್ಪಡಿಸಿ 'ನಡುಯುಗದ ಸಿಂಹಳೀ ಕಲೆ' (*Mediaeval Sinhalese Art*) ಎಂಬ ಉದ್ಗ್ರಂಥವೊಂದನ್ನು ಪ್ರಕಟಿಸಿದರು (1908).

ದಕ್ಷಿಣಾಮೂರ್ತಿ
(ಚೋಳರಕಾಲದ ಶಿಲಾಶಿಲ್ಪ)

1907 ರಲ್ಲಿ ಅವರು ಆನ್ನಿಬೆಸಂಟರ ಸೂಚನೆಯಂತೆ ಥಿಯೋಸಾಫಿಕಲ್ ಸೊಸೈಟಿಯನ್ನು ಸೇರಿ ಅದರಲ್ಲಿ ಎರಡು ವರ್ಷಗಳಿದ್ದರು. ಈ ಸೊಸೈಟಿಯ ಕೇಂದ್ರವಾಗಿದ್ದ ವಾರಣಾಸಿಯಲ್ಲಿ ಬಾಬು ಭಗವಾನ್ ದಾಸರ ಮನೆಯಲ್ಲೇ ಆರು ವಾರಗಳಿದ್ದರು. ಮತ್ತೆ 1916 ರಲ್ಲಿ ಅವರು ವಾರಣಾಸಿಗೆ ಬಂದಾಗಲೂ ಭಗವಾನ್ ದಾಸರ ಮನೆಯಲ್ಲೇ ಅತಿಥಿಯಾಗಿ ಇದ್ದರು.

ಆ ವೇಳೆಗಾಗಲೇ ಅವರ ಗಮನವೆಲ್ಲ ಭಾರತದೇಶದ ಸಂಸ್ಕೃತಿಯ ಕಡೆಗೆ, ಅದರಲ್ಲೂ ಕಲೆಯ ಕಡೆಗೆ ತಿರುಗಿದ್ದಿತು; ಭೂವಿಜ್ಞಾನ ಅವರ ಆಸಕ್ತಿಯಿಂದ ಮರೆಯಾಗಿಬಿಟ್ಟಿತು. 1906 ರಿಂದ ಮುಂದೆ ಇಂಗ್ಲೆಂಡಿನಲ್ಲೇ ಇದ್ದರಾದರೂ, ಭಾರತ ವನ್ನೂ ಸಿಂಹಳವನ್ನೂ ಕುರಿತು ಬರಹ, ಉಪನ್ಯಾಸಗಳಲ್ಲಿ ನಿರತರಾದರು. ಇವರು ಭಾರತಕ್ಕೆ ಮೊದಲಬಾರಿ ಬಂದದ್ದು 1906 ರಲ್ಲಿ. ಆಗ ಇಲ್ಲಿನ ರಾಜಕೀಯ ವಾತಾವರಣವು ಗೊಂದಲಮಯವಾಗಿದ್ದಿತು. ಹಿಂದಿನ ವರ್ಷವೇ ಬಂಗಾಳದ ವಿಭಜನೆಯ ನಿಮಿತ್ತ ಎದ್ದುಕೊಂಡ ಆಂದೋಲನದ ಬೇಗೆ ದೇಶದಲ್ಲೆಲ್ಲ ಹರಡಿದ್ದಿತು. ಸ್ವದೇಶಿಚಳವಳಿ, ಸ್ವಾತಂತ್ರ್ಯಸಂಗ್ರಾಮ—ಈ ಎರಡೂ ಗರಿಕೆದರಿಕೊಂಡು ಮೇಲೇಳುತ್ತಿದ್ದುವು. ಲೋಕಮಾನ್ಯ ಬಾಳಗಂಗಾಧರ ಟಿಳಕರು, ಗೋಪಾಲಕೃಷ್ಣ ಗೋಖಲೆ, ಅರವಿಂದ ಘೋಷರು, ವಿಪಿನಚಂದ್ರ ಪಾಲರು, ಸುರೇಂದ್ರನಾಥ ವಂದ್ಯೋಪಾಧ್ಯಾಯರು ಇವರೆಲ್ಲರ ಪರಿಚಯ ಆನಂದ ಕುಮಾರಸ್ವಾಮಿಯವರಿಗೆ ಒದಗಿತು. ಅವರೆಲ್ಲರ ಪ್ರಭಾವವನ್ನೂ ಧಾರಾಳವಾಗಿ ಒಡಮೂಡಿಸಿಕೊಂಡರು.

ಸ್ವದೇಶಿಯಕರೆ ಇವರನ್ನು ಸೆಳೆದುಕೊಂಡಿತಾದರೂ, ಭಾರತೀಯಸಾಂಪ್ರದಾಯಿಕ ಕಲೆ ಅವರ ಆಸಕ್ತಿಯನ್ನೆಲ್ಲ ಸೂರೆಗೊಂಡಿತು. ಇದರ ಅಧ್ಯಯನಕ್ಕಾಗಿ ಅವರು ಹಲವಾರು ಬಾರಿ ಭಾರತಕ್ಕೆ ಬಂದು ಸುತ್ತಾಡಿದರು. ಇಲ್ಲಿನ ಸುಪ್ರಸಿದ್ಧ ಕಲಾವಿದರಾಗಿದ್ದ ಅವನೀಂದ್ರನಾಥ ಠಾಕೂರ, ನಂದಲಾಲ ವಸು, ಅಶೀತಕುಮಾರ ಹಾಲದಾರ, ಅರ್ಧೇಂದು ಕುಮಾರ ಗಂಗುಲಿ ಮೊದಲಾದವರ ಗೆಳೆತನವನ್ನು ಪಡೆದುಕೊಂಡರು. ಶಾಂತಿನಿಕೇತನದಲ್ಲಿ ಕವಿ ರವೀಂದ್ರನಾಥ ಠಾಕೂರರೂ ಇವರನ್ನು ಮೆಚ್ಚಿಕೊಂಡರು.

1907 ರಲ್ಲಿ ಕಲ್ಕತ್ತಾನಗರದಲ್ಲಿ ಒಂದು ಕಲಾಶಾಲೆಯನ್ನು ಸ್ಥಾಪಿಸುವುದರಲ್ಲಿ ಪ್ರಮುಖಪಾತ್ರವನ್ನು ವಹಿಸಿದರು. ಆಗ ಇವರಿಗೆ ನೆರವಾದವರಲ್ಲಿ ತಂತ್ರಗ್ರಂಥಗಳನ್ನು ರಚಿಸಿದ ಸರ್ ಜಾನ್ ವುಡ್ರೋಫ್, ವಿವೇಕಾನಂದ ಸ್ವಾಮಿಗಳ ಶಿಷ್ಯೆ ನಿವೇದಿತಾ, ಕಲಾವಿದನಾಗಿದ್ದ ಹ್ಯಾವೆಲ್ ಇವರು ಇದ್ದರು. ಭಾರತದಲ್ಲಿನ ಕಲಾಶಾಲೆಯು ಮಾಡಬೇಕಾದ ಕೆಲಸ ಪಾಶ್ಚಾತ್ಯಕಲೆಯ ಆದರ್ಶಗಳನ್ನೂ ಮೌಲ್ಯಗಳನ್ನೂ ಸಂವಿಧಾನ ಗಳನ್ನೂ ಇಲ್ಲಿಗೆ ತಂದುಕೊಳ್ಳುವುದಲ್ಲ, ಭಾರತೀಯ ಕಲಾಪರಂಪರೆಯನ್ನು ಪುನರುಜ್ಜೀವನಗೊಳಿಸುವುದು; ಭಾರತೀಯಜನತೆಯ ಬದುಕಿಗೆ, ಮೌಲ್ಯಗಳಿಗೆ ಅನುಗುಣವಾಗಿ ಹೊಂದಿಸಿಕೊಳ್ಳುವುದು—ಇದು ಅವರೆಲ್ಲರ ಉದ್ದೇಶವಾಗಿದ್ದಿತು. ಭಾರತೀಯ ಕಲಾಸಂಪ್ರದಾಯವು ಗ್ರೀಸಿನಿಂದಲೋ ರೋಮಿನಿಂದಲೋ ಬಂದದ್ದಲ್ಲ;

ಇಲ್ಲಿಯೇ ಹುಟ್ಟಿ ಬೆಳೆದು ಹೆಮ್ಮರವಾಗಿ ನಿಂತದ್ದು ಎಂಬುದು ಅವರೆಲ್ಲರ ನಿಲುವು. 1908 ರ ಸುಮಾರಿಗೆ ಇವರು ಬರೆದು ಪ್ರಕಟಿಸಿದ 'ಭಾರತೀಯ ಕಲೆಯ ಗೊತ್ತುಗುರಿ' (*The Aims of Indian Art*) ಜಗತ್ತಿನ ಕಲಾವಿದರ ಕಣ್ಣನ್ನು ತೆರೆಯಿತು.

1909 ರಲ್ಲಿ ಇವರು ಕಾಶ್ಮೀರ, ಬಂಗಾಳ, ಎಲ್ಲೋರ, ಅಜಂಟ, ಸಾಂಚಿ, ಭೂಪಾಲ, ವಾರಣಾಸಿ, ತಂಜಾವೂರು, ಮಧುರೆ, ರಾಮೇಶ್ವರ ಮೊದಲಾದ ಸ್ಥಳಗಳಲ್ಲೆಲ್ಲ ಅಡ್ಡಾಡಿ ಬಂದರು. ಇದರಿಂದಾಗಿ ಅವರು ಮನಗಂಡದ್ದು ಭಾರತೀಯ ಕಲೆಯ ವೈಶಿಷ್ಟ್ಯ. ಅವರ ಮಾತೇ ಇದು—

> "The Indian conception of art may be defined as the controlled and rhythmic expression of emotion (*rasa*). The conception of *rasa* (feeling, flavour, burden, passion) is the essential factor in Hindu ideas of aesthetics. The aesthetic faculty is called '*ranjinivrtti*', "colouring faculty" because in art, things are conditioned or coloured by *rasa*. All true aesthetic creation is a passionate experience".

> *(ಭಾರತೀಯ ಕಲ್ಪನೆಯಲ್ಲಿ ಕಲೆಯೆಂದರೆ ರಸದ ನಿಯಂತ್ರಿತ, ಲಯಬದ್ಧ ಅಭಿವ್ಯಕ್ತಿ. ಹಿಂದೂ ಅಲಂಕಾರಶಾಸ್ತ್ರದಲ್ಲಿ ರಸ ತುಂಬ ಮುಖ್ಯವಾದ ವಿಚಾರ, ರಸಾಸ್ವಾದನಶಕ್ತಿಯನ್ನೆ ರಂಜನೀವೃತ್ತಿಯೆಂದು ಕರೆದಿದ್ದಾರೆ. ರಂಜನವೆಂದರೆ ಬಣ್ಣ ತುಂಬುವುದು. ಕಲೆಯಲ್ಲಿ ಎಲ್ಲ ವಿವರಗಳೂ ರಸದಿಂದಾಗಿ ವರ್ಣಮಯ ವಾಗಿರುತ್ತವೆ. ದಿಟವಾಗಿ ಎಲ್ಲ ಕಲಾಸೃಷ್ಟಿಯೂ ರಸಭರಿತವಾದ ಅನುಭವವೇ.)*

ಅವರ ಮನಸ್ಸನ್ನು ಕೊರೆಯುತ್ತಿದ್ದ ಸಮಸ್ಯೆಯೆಂದರೆ ಭಾರತದ ಕಲಾಸಂಪತ್ತು. ಕಲಾಸಂಪ್ರದಾಯ ಅಪಾರವಾಗಿ ಉಜ್ಜ್ವಲವಾಗಿದ್ದರೂ ಜನ ಅದನ್ನು ಮರೆತು ಪಾಶ್ಚಾತ್ಯಪ್ರಭಾವಕ್ಕೆ ಮಣಿದು ಯಾಂತ್ರಿಕತೆಯ ಜಾಡನ್ನು ಹಿಡಿಯುತ್ತಿರುವರೆಂಬುದು. ಕಲೆಗೂ ಆರ್ಥಿಕಸ್ಥಿತಿಗೂ ಸಂಬಂಧವಿದೆಯಷ್ಟೆ. ಹೊರಗಿನಿಂದ ಆಂಗ್ಲ–ಉದ್ಯಮಗಳು ನಮ್ಮ ದೇಶದಲ್ಲಿ ಬಳಕೆಗೆ ಬಂದ ಮೇಲೆ, ಅವುಗಳ ಪೈಪೋಟಿಯನ್ನು ತಾಳಿಕೊಳ್ಳ ಲಾರದೆ, ದೇಶೀಯ ಕರಕುಶಲಕಲೆಗಳೆಲ್ಲ ಹಿಂದೆ ಬಿದ್ದುವು. 'ಸ್ವದೇಶೀ'ಯೆಂಬ ಅಭಿಮಾನವು ಕಲಾವಿದರಲ್ಲಾಗಲೀ ಕಾರ್ಮಿಕರಲ್ಲಾಗಲೀ ಉಳಿಯಲಿಲ್ಲ; ಜನರೂ ಸ್ವದೇಶೀವಸ್ತುಗಳನ್ನು ಆದರದಿಂದ ಕಾಣಲಿಲ್ಲ. ಇದರಿಂದಾಗಿ ಭಾರತೀಯ ಲಲಿತಕಲೆ ಯಾಗಲೀ ಉಪಯುಕ್ತ ಕಲೆಯಾಗಲೀ ಬೆಳೆಯುವುದಿರಲಿ, ಉಳಿಯುವುದೂ ಸಾಧ್ಯವಿರಲಿಲ್ಲ.

ಈ ಸಮಸ್ಯೆಯನ್ನು ಆನಂದ ಕುಮಾರಸ್ವಾಮಿಯೇ ಮೊದಲು ಅರಿತುಕೊಂಡವ ರೆಂದಲ್ಲ. ಅವರಿಗೆ ಮೊದಲೇ ಸರ್ ಜಾರ್ಜ್ ಬರ್ಡ್‌ವುಡ್ ಎಂಬಾತ ಇದನ್ನು

ಎತ್ತಿಹೇಳಿದ್ದ. ಲಂಡನ್ನಿನ ಸೌತ್ ಕೆನ್‌ಸಿಂಗ್‌ಟನ್ ಮ್ಯೂಸಿಯಂ (ಮುಂದೆ, ಆಲ್‌ಬರ್ಟ್-ವಿಕ್ಟೋರಿಯ ಮ್ಯೂಸಿಯಂ)ನ ಅಧಿಕಾರಿಯಾಗಿದ್ದ ಈತನು ಭಾರತೀಯ ಕರಕುಶಲಕಲೆಗಳ ಮೇಲೆ ಆಸಕ್ತಿಯನ್ನು ತಳೆದು, ಅದರ ಬೇರೆ ಬೇರೆ ಪ್ರಕಾರಗಳಲ್ಲಿ ತೊಡಗಿದ್ದ ಕೆಲಸಗಾರರ ಸ್ಥಿತಿಗತಿಗಳನ್ನೂ, ಅವರ ಕೆಲಸದ ಸ್ವರೂಪ ಸ್ವಭಾವ ವೈಶಿಷ್ಟ್ಯಗಳನ್ನೂ ಕುರಿತು ಆಳವಾದ ಅಧ್ಯಯನ ನಡೆಸಿ 1880 ರಷ್ಟು ಹಿಂದೆಯೇ 'ಇಂಡಸ್ಟ್ರಿಯಲ್ ಆರ್ಟ್ಸ್ ಆಫ್ ಇಂಡಿಯ' ಎಂಬ ದೊಡ್ಡ ಪುಸ್ತಕವೊಂದನ್ನು ಸಿದ್ಧಪಡಿಸಿದ್ದ. ಈ ಪುಸ್ತಕವೇ ಆನಂದ ಕುಮಾರಸ್ವಾಮಿ 1908 ರಲ್ಲಿ ಹೊರತಂದ 'ಮೆಡೀವಲ್ ಸಿಲೋನೀಸ್ ಆರ್ಟ್' ಎಂಬ ಗ್ರಂಥಕ್ಕೆ ಸ್ಫೂರ್ತಿಯಾಯಿತೆಂದು ಬಲ್ಲವರು ಹೇಳುತ್ತಾರೆ.

ಅರ್ಧನಾರೀಶ್ವರಮೂರ್ತಿ
(ಪಂಚಲೋಹಶಿಲ್ಪ, ಚೋಳ)

ಇಂಗ್ಲಿಷರು ನಮ್ಮ ದೇಶಕ್ಕೆ ಬಂದುದು ವ್ಯಾಪಾರದ ದೃಷ್ಟಿಯಿಂದಲೇ—ತಮ್ಮ ಉದ್ಯಮಕ್ಕೆ ಇಲ್ಲೊಂದು ಲಾಭ ದಾಯಕವಾದ ಮಾರುಕಟ್ಟೆಯನ್ನು ಏರ್ಪಡಿಸಿಕೊಳ್ಳುವ ಸಲುವಾಗಿ. ಹಾಗೆ ಬಂದವರು ಇಲ್ಲಿ ತಮ್ಮ ಆಡಳಿತವನ್ನೂ ರೂಢಿಸಿಕೊಂಡು ಇಡೀ ದೇಶವನ್ನೇ ಲೂಟಿ ಮಾಡತೊಡಗಿದರು. ಸ್ವರಾಜ್ಯದ ಆಂದೋಲನ ಆರಂಭವಾಗಲು ಇದೇ ಪ್ರೇರಣೆಯನ್ನು ನೀಡಿತು. ಸ್ವರಾಜ್ಯದ ಕಲ್ಪನೆ ಬೇರೂರಲು 'ಸ್ವದೇಶೀ' ಎಂಬ ಮಂತ್ರ ಅಗತ್ಯ ವಾಯಿತು. ದೇಶದ ಜನ ತಮ್ಮ ಸಂಪನ್ಮೂಲಗಳನ್ನು ತಾವೇ ಅರಿತುಕೊಂಡು, ವಿದೇಶೀಯರ ಉದ್ಯಮ ವನ್ನಾಗಲೀ ವ್ಯವಧಾನಗಳನ್ನಾಗಲೀ ವ್ಯಾಪಾರ ಮನೋಧರ್ಮವನ್ನಾಗಲೀ ಅವಲಂಬಿಸದೆ ತಮ್ಮ ಕಾಲ ಮೇಲೆ ತಾವೇ ನಿಲ್ಲಬೇಕಾದುದು ಅಗತ್ಯವೆಂದು ಮಹಾತ್ಮಾ ಗಾಂಧಿಯವರ ಕರೆ.

ಕಾಳಿಕಾಂಬೆ
(ಅಂಬಲಪಾಡಿ, ದಕ್ಷಿಣಕನ್ನಡ)

ಇದನ್ನು ಆನಂದ ಕುಮಾರಸ್ವಾಮಿ ಅನುಮೋದಿಸಿ, 'ಸ್ವದೇಶೀ' ಎನ್ನುವ ಕಲ್ಪನೆ ದಿಟವಾಗ ಬೇಕಾದರೆ ದೇಶದ ಜನ ತಮ್ಮ ಧರ್ಮ, ಕಲೆ, ರೀತಿ, ನೀತಿಗಳ ಹಿರಿಮೆಯನ್ನು ಅರಿತುಕೊಳ್ಳಬೇಕು ಎಂದರು. ಸ್ವದೇಶೀಭಾವನೆಯಲ್ಲೊಂದು ಆಧ್ಯಾತ್ಮಿಕತೆ ಇದೆಯೆಂದು ಅವರ ವಾದ. ದೇಶ ತನ್ನ ಸತ್ತ್ವವನ್ನು ಸಾಕ್ಷಾತ್ಕರಿಸಿಕೊಳ್ಳುವುದೇ ಸ್ವದೇಶೀ ಕಲ್ಪನೆಯ ಜೀವಾಳ. ದೇಶದ ಸಾಂಸ್ಕೃತಿಕ–ಅಭಿವ್ಯಕ್ತಿ ದೇಶಭಕ್ತಿ

ಯಾಗಿ ಮೈದಳೆಯುತ್ತದೆ. ರಾಜಕೀಯವಾಗಿ ಮಾತ್ರ ವಿದೇಶೀ–ಆಡಳಿತದಿಂದ ಮುಕ್ತಿಯನ್ನು ಪಡೆದುಕೊಂಡರೆ ಅದು ದಿಟವಾದ ಸ್ವಾತಂತ್ರ್ಯವಲ್ಲ; ಆರ್ಥಿಕವಾಗಿ, ಧಾರ್ಮಿಕವಾಗಿ, ಸಾಂಸ್ಕೃತಿಕವಾಗಿ, ಆಧ್ಯಾತ್ಮಿಕವಾಗಿ ದೇಶ 'ಸ್ವತಂತ್ರ'ವಾಗುವುದು ಮುಖ್ಯವಾದ ವಿಚಾರ. ದೇಶ ಸ್ವತಂತ್ರವಾದರೆ ನಿಮ್ಮ ಸಂದೇಶವೇನು ಎಂದು ಯಾರೋ ಆನಂದ ಕುಮಾರಸ್ವಾಮಿಯವರನ್ನು ಕೇಳಿದರಂತೆ. ಅದಕ್ಕೆ ಅವರು "ನೀವು ನೀವೇ ಆಗಿರಬೇಕು" ('Be Yourself') ಎಂದು ಉತ್ತರ ನೀಡಿದರು.

1908 ರಲ್ಲಿ ಇವರು ಕಲ್ಕತ್ತಾನಗರಕ್ಕೆ ಬಂದು ಕೆಲವು ಕಾಲ ಇದ್ದಾಗ ಬೋ ಬಜಾರಿನಲ್ಲಿರುತ್ತಿದ್ದ ನ್ಯಾಷನಲ್ ಕಾಲೇಜಿನಲ್ಲಿ ಭಾರತೀಯಕಲೆಯನ್ನು ಕುರಿತಂತೆ ಹಲವು ಪ್ರವಚನಗಳನ್ನು ನೀಡಿದರು. 1910 ರಲ್ಲಿ ಇದೇ ಒಂದು ಕಲಾಂದೋಲನಕ್ಕೆ ನಾಂದಿಯಾಯಿತು. ರವೀಂದ್ರನಾಥ ಠಾಕೂರರು, ಅವನೀಂದ್ರನಾಥ ಠಾಕೂರರು ಇವರೊಂದಿಗೆ ಎಲ್ಲೋರ, ಅಜಂಟ, ಸಾಂಚಿ ಮುಂತಾದ ಸ್ಥಳಗಳಿಗೆ ಭೇಟಿಯಿತ್ತರು. ರವೀಂದ್ರನಾಥರ ಕಾವ್ಯವನ್ನು ಕುರಿತಂತೆ 'ಆರ್ಟ್ ಆ್ಯಂಡ್ ಸ್ವದೇಶಿ' (*'Art and Swadeshi'*)ಯಲ್ಲಿ ಲೇಖನವನ್ನು ಬರೆದುದಲ್ಲದೆ (1911), ರವೀಂದ್ರನಾಥರ 'ಶಿಶು' ಎಂಬ ಸಂಕಲನದಿಂದ ಹನ್ನೊಂದು ಕವಿತೆಗಳನ್ನು ಆಂಗ್ಲಭಾಷೆಗೆ ಅನುವಾದ ಮಾಡಿದರು. 1909-1910 ರಲ್ಲಿ ಅವರು ಶಾಂತಿನಿಕೇತನದಲ್ಲಿ ವಾಸಮಾಡಿದಾಗ ರವೀಂದ್ರನಾಥರ 'ಬಂಗಾಳಿಜನ್ಮಕಥೆ' ಎಂಬುದನ್ನು ಅಜಿತಕುಮಾರ ಚಟ್ಟೋಪಾಧ್ಯಾಯರ ನೆರವಿನಿಂದ ಅನುವಾದ ಮಾಡಿದರು; ಅವರು 'ವಿದಾಯ' ಎಂಬ ಬಂಗಾಳಿಕೃತಿಯನ್ನು ಅನುವಾದ ಮಾಡುವಾಗ ರವೀಂದ್ರನಾಥರೇ ನೆರವಾದರು. ಈ ಅವಧಿಯಲ್ಲೇ ಆನಂದ ಕುಮಾರಸ್ವಾಮಿಯವರಿಗೂ ಅವರ ಹೆಂಡತಿ ಎತೆಲ್ ಮೈರೇಗೂ ಭಿನ್ನಾಭಿಪ್ರಾಯಗಳು ಒಡಮೂಡಿ ಆಕೆ ಇಂಗ್ಲೆಂಡಿಗೆ ಹೊರಟುಹೋದಳು.

ಆನಂದ ಕುಮಾರಸ್ವಾಮಿಯವರು 'ಸ್ವದೇಶಿ' ಎಂಬ ಸೂತ್ರಕ್ಕೆ ವಿಶಾಲವಾದ, ಆಳವಾದ ಅರ್ಥವನ್ನು ಒದಗಿಸಿದರು. "ರಾಷ್ಟ್ರಗಳನ್ನು ಕಟ್ಟುವವರು ರಾಜಕಾರಣಿಗಳಲ್ಲ, ಉದ್ಯಮಿಗಳಲ್ಲ; ಕಲಾವಿದರು, ಕವಿಗಳು" ಎಂದು ಅವರ ವಾದ. ರಾಷ್ಟ್ರದ ಬದುಕು ಚೊಕ್ಕವಾಗಲು, ಸಂಪನ್ನವಾಗಲು ಜನರ ದಿನನಿತ್ಯ ವ್ಯವಹಾರ ಕಲಾತ್ಮಕವಾಗಿರ ಬೇಕೆಂದು ಸೂಚಿಸಿದರು. ಬದುಕಿನ ಮೂಲಸೂತ್ರಗಳಲ್ಲೇ ಕಲೆ ಅಡಗಿರುವುದೆಂದು ವಿವರಿಸಿದರು. ಈ ದೃಷ್ಟಿಯಿಂದ ಸ್ವಾತಂತ್ರ್ಯಕ್ಕಾಗಿ ಭಾರತೀಯರು ನಡೆಸಿದ ಹೋರಾಟದಲ್ಲಿ ಆನಂದ ಕುಮಾರಸ್ವಾಮಿಯವರೂ ಪಾಲ್ಗೊಂಡು ಸ್ವದೇಶಿಯ ಕಲ್ಪನೆ ಬುದ್ಧಿಜೀವಿಗಳಲ್ಲಿ ಹರಡಿಕೊಳ್ಳಲು ಕಾರಣರಾದರು.

1908 ರ ಅಕ್ಟೋಬರ್ 16 ರಂದು ಲಂಡನ್ನಿನಲ್ಲೊಂದು ಸಭೆ ನಡೆಯಿತು. ಗಾಂಧಿಜೀಯವರನ್ನು ದಕ್ಷಿಣ ಆಫ್ರಿಕದಲ್ಲಿ ಬ್ರಿಟಿಷ್–ಆಡಳಿತವು ಬಂಧಿಸಿದುದನ್ನು ಪ್ರತಿಭಟಿಸಿ ಈ ಸಭೆ ಏರ್ಪಟ್ಟಿತ್ತು. ಈ ಸಭೆಯಲ್ಲಿ ಲಾಲಾ ಲಜಪತರಾಯ್, ವಿಪಿನಚಂದ್ರಪಾಲ್, ವೀರ ಸಾವರ್‌ಕರ್ ಇವರೊಂದಿಗೆ ಆನಂದ ಕುಮಾರಸ್ವಾಮಿಯೂ

ಭಾಷಣಮಾಡಿ ಗಾಂಧಿಜೀಯನ್ನು ಒಡನೆಯೇ ಬಿಡುಗಡೆ ಮಾಡಬೇಕೆಂದರು. ಮತ್ತೆ 1914ರ ಆಗಸ್ಟ್ 8ರಂದು ಲಂಡನ್ನಿನಲ್ಲೇ ಇನ್ನೊಂದು ಸಭೆ ನೆರೆಯಿತು—ದಕ್ಷಿಣ ಆಫ್ರಿಕದಲ್ಲಿ ಗಾಂಧಿಜೀ ನಡೆಸಿದ ಆಂದೋಲನವನ್ನು ಅನುಮೋದಿಸಲೆಂದು. ಆ ಸಭೆಯಲ್ಲೂ ಆನಂದ ಕುಮಾರಸ್ವಾಮಿ ಮಾತನಾಡಿದರು. ಆಗ ಸಭೆಯಲ್ಲಿ ಮಹಮ್ಮದಾಲಿ ಜಿನ್ನಾ, ಸರೋಜಿನೀ ದೇವಿ ಇವರೂ ಇದ್ದರು.

ಚಂಡಿಕೇಶ್ವರವರಪ್ರಸಾದಮೂರ್ತಿ
(ಗಂಗೈಕೊಂಡಚೋಳಪುರದಲ್ಲಿನ ಶಿಲಾಶಿಲ್ಪ)

ಆಗ ಗಾಂಧಿಜೀ ಇನ್ನೂ ಭಾರತದ ಸ್ವಾತಂತ್ರ್ಯ ಆಂದೋಲನದ ಸೂತ್ರಧಾರಿಯಾಗಿ ಅವತರಿಸಿರಲಿಲ್ಲ. ಆದರೆ ಆನಂದ ಕುಮಾರಸ್ವಾಮಿ ಅವರ ಹಿರಿಮೆಯನ್ನು ಅರಿತುಕೊಂಡು ಅವರನ್ನು ಇತರರು ಅರಿತುಕೊಳ್ಳಲು ನೆರವಾದರು. ಭಾರತದಲ್ಲಿ ಗಾಂಧಿಜೀ "ಮುಂಬರುವ ಮನುಷ್ಯ" ('coming man') ಎಂದು ಅವರು ಭವಿಷ್ಯ ನುಡಿದಿದ್ದರು. ಆದರೆ ಗಾಂಧಿಜೀ, ಕಲೆಯ ಬಗ್ಗೆ ವಿಶೇಷವಾದ ಆದರವನ್ನು ತಳೆಯದೇ ಇದ್ದುದು ಅವರಿಗೆ ಹಿಡಿಸಿರಲಿಲ್ಲ. ಹಲವು ಅಭಿಪ್ರಾಯಗಳಲ್ಲಿ ಅವರಿಬ್ಬರಿಗೆ ಒಮ್ಮತ ವಿದ್ದಿತು. ಸ್ವದೇಶೀಯ ಗೀಳು ಇಬ್ಬರಿಗೂ ಸಮನೇ; ಉತ್ಕಟವಾದ ದೇಶಭಕ್ತಿ ಇಬ್ಬರದ್ದೂ. ಧರ್ಮದ ಮೇಲ್ಮೆಯಲ್ಲಿ ಸಮಾನವಾದ ಶ್ರದ್ಧೆಯೇ. ಆದರೆ ಲಲಿತಕಲೆ, ಕರಕುಶಲಕಲೆಗಳ ವಿಚಾರವಾಗಿ ಅವರು ಗಾಂಧಿಜೀಗಿಂತ ರವೀಂದ್ರನಾಥ ಠಾಕೂರರಿಗೆ ಹತ್ತಿರವಾಗಿದ್ದರು. ಅವರ ಪ್ರಕಾರ ಸ್ವದೇಶಿಯೆಂಬುದು ಬರಿಯ ರಾಜಕೀಯ ಅಸ್ತ್ರವಲ್ಲ; ಅದಕ್ಕೆ ಧಾರ್ಮಿಕ, ಕಲಾತ್ಮಕ ಆದರ್ಶಗಳೂ ಇರಬೇಕು; ಅದೊಂದು ಬದುಕುವ ಬಗೆಯಾಗಬೇಕೆಂದು ಅವರ ಎಣಿಕೆಯಾಗಿದ್ದಿತು. ಗಾಂಧಿಜೀ ಕರ್ಮಯೋಗಿಯಾದರೆ, ರವೀಂದ್ರನಾಥರು ಕಲಾಯೋಗಿ. ಇಬ್ಬರೂ ಸಂತರೇ. ಆದರೂ ಒಬ್ಬರಿಗೆ ಸತ್ಯಶೋಧನೆ ದಾರಿಯಾದರೆ, ಇನ್ನೊಬ್ಬರಿಗೆ ಸೌಂದರ್ಯೋಪಾಸನೆ ದಾರಿ. ಆನಂದ ಕುಮಾರಸ್ವಾಮಿಯೂ ಕಲಾಯೋಗಿಯೇ, ಸೌಂದರ್ಯೋಪಾಸಕನೇ.

ಭಾರತವೋ? ಅಮೆರಿಕವೋ?

ಡಾ॥ ಆನಂದ ಕುಮಾರಸ್ವಾಮಿಯವರು ಖನಿಜಸರ್ವೇಕ್ಷಣದ ನಿರ್ದೇಶಕವೃತ್ತಿಯಿಂದ 1906ರಲ್ಲಿ ಹೊರಬಂದಮೇಲೆ, ಸಮಾಜಸುಧಾರಣೆಯಲ್ಲಿ ಕೆಲವು ತಿಂಗಳ ಕಾಲ ಕಳೆದು, 1907ರ ಮೊದಲ ಭಾಗದಲ್ಲಿ ಸಿಂಹಳವನ್ನು ಬಿಟ್ಟು ಇಂಗ್ಲೆಂಡಿಗೆ ಮರಳಿದರು. ಸ್ಟ್ರಾಟ್‌ಫರ್ಡ್ ಆನ್-ಏವನ್ ಬಳಿ ಬ್ರಾಡ್ ಕ್ಯಾಂಪ್‌ಡೆನ್ ಎಂಬಲ್ಲಿ ಹಳ್ಳಿಯ ಮನೆಯೊಂದನ್ನು ಹಿಡಿದು ಬರಹದಲ್ಲಿ ತೊಡಗಿದರು. ಸಿಂಹಳವನ್ನು ಬಿಟ್ಟುಬಂದರೂ ಸಿಂಹಳದ ಸಾಂಸ್ಕೃತಿಕ ಸಂಪರ್ಕವನ್ನು ಉಳಿಸಿಕೊಂಡಿದ್ದು ಅದರ ಬಗ್ಗೆ ಹಲವಾರು ಲೇಖನಗಳನ್ನು ಬರೆದರು. ಸಿಂಹಳದಲ್ಲಿ ಸ್ವದೇಶ ಭಾವನೆ ಬೆಳೆಯಬೇಕೆಂಬುದು ಅವರ ಹಂಬಲವಾಗಿದ್ದಿತು. 'ಸಿಲೋನ್ ನ್ಯಾಷನಲ್ ರೆವ್ಯೂ' ಎಂಬ ಪತ್ರಿಕೆಗೆ ಲೇಖನಗಳನ್ನು ಬರೆಯುವುದರಲ್ಲೇ ಆ ವರ್ಷವೆಲ್ಲ ಕಳೆಯಿತು. ಆದರೆ ಅಲ್ಲಿನ ಪ್ರೋತ್ಸಾಹ ಸಾಲದೆ ಪತ್ರಿಕೆ ನಿಂತಿತು.

ಸುದೈವದಿಂದ ಅವರಿಗೆ ಬಳುವಳಿಯಾಗಿ ಒಂದಿಷ್ಟು ಐಶ್ವರ್ಯ ಒದಗಿದುದರಿಂದ ಅವರು ಗ್ಲೌಸೆಸ್ಟರ್‌ಷೈರ್‌ನಲ್ಲಿ ನಾರ್ಮನ್ ಛಾಪೆಲ್ ಎಂಬ ಪುರಾತನ ಚರ್ಚ್ (ಗೋಥಿಕ್) ಬಂಗಲೆಯನ್ನು ಕೊಂಡು, ಅಲ್ಲಿ ಕರಕುಶಲಕಲೆಗಳ ಶಾಲೆಯೊಂದನ್ನು ಕೆಲವು ಕಾಲ ನಡೆಸಿದರು. ಅಲ್ಲಿಯೇ 'ಎಸ್‌ಕ್ಸ್ ಹೌಸ್ ಪ್ರೆಸ್' ಎಂಬ ಹೆಸರಿನ ಅಚ್ಚುಕೂಟವೊಂದನ್ನು ಏರ್ಪಡಿಸಿ, ತಮ್ಮ 'ನಡುಯುಗದ ಸಿಂಹಳೀಕಲೆ' ಎಂಬ ಪುಸ್ತಕವನ್ನು ಹದಿನೈದು ತಿಂಗಳುಗಳಲ್ಲಿ ಕೈಯಾರೆ ಅಚ್ಚು ಮಾಡಿದರು. ಅದು ಅಲ್ಲಿ ಪ್ರಕಟವಾದಾಗ 425 ಪ್ರತಿಗಳು ಮಾತ್ರ ಸಿದ್ಧವಾಗಿದ್ದುವು. ಅಲ್ಲಿಯೇ ಅವರ ಪುಸ್ತಕ ಭಂಡಾರವೂ ಇದ್ದು, ಆಡಿಗಡಿಗೆ ಅವರ ಉಪನ್ಯಾಸಗಳೂ ಜರುಗುತ್ತಿದ್ದವು. ಸ್ವಾಮಿ ವಿವೇಕಾನಂದರ ಶಿಷ್ಯೆ ಸೋದರಿ ನಿವೇದಿತಾ ಅಲ್ಲಿಗೆ ಬಂದು ಒಂದು ಉಪನ್ಯಾಸ ಕೊಟ್ಟಿದ್ದಳು (1904ರಲ್ಲಿ). ಆನಂದ ಕುಮಾರಸ್ವಾಮಿ ಮುಂದೆ ಒಂದು ವರ್ಷ ಭಾರತದಲ್ಲೇ ಕಳೆದರು.

ಹಿಂದಿರುಗಿದಮೇಲೆ ಇಂಗ್ಲೆಂಡಿನಲ್ಲಿ ಜಾನ್ ರಸ್ಕಿನ್‌ನಿಂದ ಮತ್ತು ವಿಲಿಯಂ ಮಾರಿಸ್‌ನಿಂದ ಪ್ರಭಾವಿತನಾಗಿದ್ದ ಸಿ. ಆರ್. ಆಷ್‌ಬಿಯೊಂದಿಗೆ ಆನಂದ ಕುಮಾರ ಸ್ವಾಮಿ ಸೇರಿ ಕಲೆ, ಸಾಹಿತ್ಯ, ಸಮಾಜಗಳನ್ನು ಕುರಿತು ಉದಾತ್ತ ಭಾವನೆಗಳು ಬೆಳೆಯಬೇಕೆಂದು ಬರಹ, ಭಾಷಣ, ಚರ್ಚೆಗಳ ಮೂಲಕ ಶ್ರಮಿಸಿದರು. ಆಷ್‌ಬಿ ಎಂಬಾತ ವಾಸ್ತುಶಿಲ್ಪಿ, ವಿನ್ಯಾಸಕಾರ, ಸಮಾಜಸುಧಾರಕ. ಈತನಿಗೆ ಇಂಗ್ಲಿಷ್‌ಜನರ ಕೈಕೆಲಸ ಮತ್ತು ಕಲೆಯ ಮೇಲೆ ತುಂಬ ಆಸಕ್ತಿಯಿದ್ದು 1888 ರಲ್ಲಿ ಬಳಕೆಯ ಸಾಮಾನು, ಅಲಂಕರಣಸಾಮಗ್ರಿ, ಪುಸ್ತಕಗಳು, ಲೋಹಪದಾರ್ಥಗಳು ಇವನ್ನು ತಯಾರಿಸಲು ಕಾರ್ಯಾಗಾರವೊಂದನ್ನು ಏರ್ಪಡಿಸಿದ್ದನು. ಆದರೆ ರಸ್ಕಿನ್ ಭಾರತೀಯ ಕಲಾವಿದರನ್ನು ತೆಗಳಿ ಬರೆದಿದ್ದುದನ್ನು (1859 ರಷ್ಟು ಹಿಂದೆ) ತಿಳಿದು ಇಂಗ್ಲಿಷ್ ಜನರಲ್ಲಿ ಭಾರತೀಯಕಲೆಗಳ ಪರಿಚಯ ಚೆನ್ನಾಗಿ ಆಗಬೇಕೆಂದು ಸಂಕಲ್ಪಿಸಿ, ಇಲ್ಲಿನ ಕಲಾಕೃತಿಗಳನ್ನು ಸಂಗ್ರಹಿಸಲು ಆನಂದ ಕುಮಾರಸ್ವಾಮಿ ಮೊದಲು ಮಾಡಿದರು. 1911 ರಲ್ಲಿ ಅವರ 'ಭಾರತದೇಶದ ರೇಖಾಚಿತ್ರಗಳು' (*Indian Drawings*) ಎಂಬ ಗ್ರಂಥ ಎರಡು ಸಂಪುಟಗಳಲ್ಲಿ, ಅವರೇ ವ್ಯವಸ್ಥೆ ಮಾಡಿದ 'ಇಂಡಿಯ ಸೊಸೈಟಿ' ಎಂಬ ಸಂಸ್ಥೆಯಿಂದ ಪ್ರಕಟವಾಯಿತು. ಇದರಲ್ಲಿ ಉತ್ತರಭಾರತದ ರಾಜಾಸ್ಥಾನ, ಪಂಜಾಬುಗಳಲ್ಲಿ ಹಿಂದೂಕಲಾವಿದರಿಂದ ಸಿದ್ಧವಾದ ವರ್ಣಚಿತ್ರಗಳ ಪ್ರತಿಕೃತಿಗಳು ಸೇರಿದ್ದು, ಇಂಗ್ಲೆಂಡಿನಲ್ಲಿ ತುಂಬ ಕುತೂಹಲವನ್ನು ಕೆರಳಿಸಿದುವು.

ಈ ಸಮಯದಲ್ಲಿ, ಎಂದರೆ 1909-1911 ರ ಸುಮಾರಿಗೆ, ಡಾ॥ ಆನಂದ ಕುಮಾರಸ್ವಾಮಿಯವರು ಭಾರತೀಯಕಲೆಯ ಇತಿಹಾಸವನ್ನು ಚೆನ್ನಾಗಿ ಬಲ್ಲವರೆಂದು ಹೆಸರಾದರು. 1907 ರಿಂದ 1917 ರವರೆಗೆ ಆನಂದ ಕುಮಾರಸ್ವಾಮಿ ಅಲೆದಾಟದಲ್ಲೇ ತೊಡಗಿದ್ದರು. ಕೊಲೊಂಬೋದಿಂದ ಇಂಗ್ಲೆಂಡಿಗೆ ಕೆಲವು ವಾರಗಳು ತೆರಳಿದ್ದರು. ಅಲ್ಲಿಂದ ಮರುವರ್ಷವೇ (1908 ರಲ್ಲಿ) ಭಾರತಕ್ಕೆ ಬಂದರು. ಇಲ್ಲಿ ಎರಡು ವರ್ಷಗಳಿರಬೇಕೆಂಬುದು ಅವರ ಬಯಕೆಯಾಗಿದ್ದಿತು. 1910 ರಲ್ಲಿ ಉತ್ತರಭಾರತ ವನ್ನೆಲ್ಲ ಸುತ್ತಾಡಿ ಬಂದರು. ಈ ಅವಧಿಯಲ್ಲಿ ನೂರಾರು ಉತ್ಕೃಷ್ಟ ಮುಗಲ್ ಮತ್ತು ರಜಪೂತ್ ವರ್ಣಚಿತ್ರಗಳನ್ನು ಸಂಗ್ರಹಿಸಿದರು. ಪಹಾಡಿ ಶೈಲಿಯ ಸ್ಥಾನಮಾನವನ್ನು ಗುರುತಿಸಿದ್ದು ಅವರೇ. ಇದೇ ಸಮಯದಲ್ಲಿ ಅವರು ಇಂಡಿಯ ಸೊಸೈಟಿ (ಈಗ ರಾಯಲ್ ಸೊಸೈಟಿ ಆಫ್ ಇಂಡಿಯ, ಪಾಕಿಸ್ಥಾನ್ ಆ್ಯಂಡ್ ಸಿಲೋನ್) ಸಂಸ್ಥೆಯ ಸ್ಥಾಪನೆಗೆ ನೆರವಾದರು. ಅದರ 'ವೈಸ್ ಪ್ರೆಸಿಡೆಂಟ್' ಆಗಿ 1911 ರಿಂದ 1916 ರ ವರೆಗೂ ಇದ್ದರು. 1916 ರಲ್ಲಿ ತಮ್ಮ ಹುದ್ದೆಗೆ ರಾಜಿನಾಮೆಯಿತ್ತು ಬೋಸ್ಟನ್‌ಗೆ ಹೋದರು. ಅಲ್ಲಿ 1917 ರ ಅಕ್ಟೋಬರ್ ತಿಂಗಳಲ್ಲಿ ಲಲಿತಕಲೆಗಳ ಮ್ಯೂಸಿಯಂನಲ್ಲಿ ಭಾರತೀಯ ಕಲಾವಿಭಾಗದ 'ಕೀಪರ್' ಹುದ್ದೆಯನ್ನು ಹಿಡಿದರು. 1911 ರಲ್ಲೇ ಅವರು ದುಗ್ಗಿರಾಲ ಗೋಪಾಲಕೃಷ್ಣಯ್ಯ ಎಂಬುವರೊಡಗೂಡಿ *'Mirror of Gesture'* (ಅಭಿನಯದರ್ಪಣ) ಎಂಬ ಗ್ರಂಥವನ್ನು ರಚಿಸಿ ಹೊರತಂದರು. ರಾಜಾಸ್ಥಾನದ ವರ್ಣಚಿತ್ರಗಳನ್ನು ಅವರೇ ಕಂಡುಹಿಡಿದು, ಜಗತ್ತಿಗೆ ಕಾಣಿಸಿದವರು. ರಾಜಪುತ್ರರ

ವರ್ಣಚಿತ್ರಗಳನ್ನು ಕುರಿತಂತೆ ಅವರ ಎರಡು ಸಂಪುಟಗಳ ಗ್ರಂಥ (*Rajput Painting*) ಆಕ್ಸ್‌ಫರ್ಡ್‌ನಿಂದ 1910 ರಲ್ಲಿ ಪ್ರಕಟವಾದುವು. ಈ ಕಲಾಶೈಲಿಯನ್ನು ಅವರು ಗುರುತಿಸಿರುವ ಬಗೆ ಇದು—

> "It has a range of content and depth of passion foreign to the sentimental Persian idylls, battles and hunting scenes and rarely touched in the Mughal studies of individual character.... This art is religious, lyrical and epic. It has many of the qualities of folk-song and ballad. It is essentially true to human nature, but makes no pretence to realism".

> *(ರಾಜಾಸ್ಥಾನದ ಚಿತ್ರಗಳಲ್ಲಿ ಪರ್ಶಿಯದ ಪ್ರಣಯದೃಶ್ಯಗಳು, ಸಮರಚಿತ್ರ ಗಳು, ಬೇಟೆಯ ನಿರೂಪಣೆ ಮುಂತಾದುವುಗಳಲ್ಲಾಗಲಿ, ಮುಗಲದ ವ್ಯಕ್ತಿಚಿತ್ರಣ ಗಳಲ್ಲಾಗಲಿ ಕಂಡುಬರದಿರುವ ವಿಷಯವಿನ್ಯಾಸ ಮತ್ತು ರಸಭಾವ ಕಾಣಸಿಗುತ್ತವೆ. ಈ ಕಲೆಯು ಆಧ್ಯಾತ್ಮಿಕವಾದುದು, ಕಾವ್ಯಮಯವಾದುದು, ಪುರಾಣ ಪ್ರಸಕ್ತಿ ಯುಳ್ಳದ್ದು. ಜಾನಪದಗೀತಗಳ ಕಥನಗಳ ಅನೇಕ ಅಂಶಗಳನ್ನೊಳಗೊಂಡಿದೆ. ಮಾನವಸ್ವಭಾವವನ್ನು ಪ್ರತಿಬಿಂಬಿಸುವಂಥದು; ವಾಸ್ತವಿಕತೆಯ ಸೋಗನ್ನೇನು ತೊಟ್ಟಿರುವುದಿಲ್ಲ.)*

ಭಾರತದೇಶದಲ್ಲಿ ಸುತ್ತಾಡಿ ವರ್ಣಚಿತ್ರಗಳು, ಪ್ರತಿಮೆಗಳು, ಶಿಲ್ಪಗಳು, ಉಪ ಕರಣಗಳು ಮೊದಲಾದ ಕಲಾಕೃತಿಗಳನ್ನು ಸಂಗ್ರಹಿಸಿ, ಅವುಗಳ ವಿಷಯವನ್ನೆಲ್ಲ ಕ್ರೋಡೀಕರಿಸಿದರು. ಪ್ರವಾಸ, ಸಂಗ್ರಹ, ಸಂಶೋಧನೆಗಳಲ್ಲೇ ನಾಲ್ಕೈದು ವರ್ಷಗಳು ತೊಡಗಿದರು. 1909 ರಲ್ಲಿ ಪೂರಾ ಒಂದು ವರ್ಷ ಭಾರತದಲ್ಲೇ ಕಳೆದು, ಮತ್ತೆ ಮರುವರ್ಷ ತಮ್ಮ ಹೆಂಡತಿ ಎತೆಲ್‌ನೊಂದಿಗೆ ಭಾರತಕ್ಕೆ ಬಂದಿದ್ದರು. ಬಂಗಾಳದ ವಿಭಜನೆಯ ಕಾಲ ಅದು, ದೇಶದಲ್ಲೆಲ್ಲ ಗೊಂದಲ, ಆಂದೋಲನ, ಸ್ವದೇಶೀಭಾವನೆ ಬೇರೂರುತ್ತಿದ್ದಿತು. ಆಗ ಕಲ್ಕತ್ತೆಯ 'ಜೋಡಶಂಖೋ' ಎಂಬ ರವೀಂದ್ರನಾಥ ಠಾಕೂರರ ಮನೆ ನವಚೈತನ್ಯದ ಕೇಂದ್ರವಾಗಿ ಮೆರೆಯುತ್ತಿತ್ತು. ಆನಂದ ಕುಮಾರಸ್ವಾಮಿ ತಂಗಿದ್ದು ಅಲ್ಲಿಯೇ. ಸರ್ ವಿಲಿಯಂ ರೊದೆನ್‌ಸ್ಟೇನ್ ಎಂಬ ಸುಪ್ರಸಿದ್ಧ ಕಲಾವಿದನ ಸಂಪರ್ಕ ಅವರಿಗೆ ಒದಗಿತು. ಮತ್ತು ಅವನೀಂದ್ರನಾಥ ಠಾಕೂರರು, ಅವರ ಸೋದರ ಗಗನೇಂದ್ರನಾಥ ಠಾಕೂರರು ಇವರ ನಿಕಟ ಪರಿಚಯವೂ ಆಯಿತು.

ಈ ವೇಳೆಗೆ ಅವರಲ್ಲಿ ಸೊಗಸಾದ ಭಾರತೀಯ ಕಲಾಕೃತಿಗಳ ಸಂಗ್ರಹವಿದ್ದಿತು. ಅದರಲ್ಲಿ ಕೆಲವನ್ನು 'ಇಂಡಿಯ ಸೊಸೈಟಿ' ಆಶ್ರಯದಿಂದ ಪ್ರಕಟಿಸಿದರು. *'Indian Drawings Series I'* 1910 ರಲ್ಲೂ, *'Series II'* 1911 ರಲ್ಲೂ ಹೊರಬಂದುವು. ಅವೆಲ್ಲವನ್ನೂ ಒಂದು ರಾಷ್ಟ್ರೀಯ ಮ್ಯೂಸಿಯಂನ ಬುನಾದಿಯನ್ನಾಗಿ ಮಾಡಬೇಕೆಂದೂ,

ಇಂಥ ರಾಷ್ಟ್ರೀಯ ಮ್ಯೂಸಿಯಂ ದೇಶದ ಸಾಂಸ್ಕೃತಿಕ, ಧಾರ್ಮಿಕಕೇಂದ್ರವಾದ ವಾರಣಾಸಿಯಲ್ಲಿ ಏರ್ಪಡಿಸಬೇಕೆಂದೂ ಹೆಣಗಾಡಿದರು. ಅವನೀಂದ್ರನಾಥರ 'ಇಂಡಿಯನ್ ಸೊಸೈಟಿ ಆಫ್ ಓರಿಯಂಟಲ್ ಆರ್ಟ್ಸ್' ಈ ವಿಚಾರವಾಗಿ ಒಂದು ಕರಪತ್ರಿಕೆಯನ್ನೂ ಹೊರಡಿಸಿ ಮಹಾಜನರ ನೆರವನ್ನು ಕೋರಿತು. ಆಡಳಿತದವರ ಅನಾದರ, ಜನನಾಯಕರ ಉಪೇಕ್ಷೆ ಇವುಗಳಿಂದ ಅವರ ಯೋಜನೆ ಕೈಗೂಡಲಿಲ್ಲ. ಆನಂದ ಕುಮಾರಸ್ವಾಮಿಯವರು ಹೊರಡಿಸಿದ ಮುದ್ರಿತ ಅಭ್ಯರ್ಥನಾಪತ್ರಿಕೆಗೆ ಗೋಪಾಲಕೃಷ್ಣ ಗೋಖಲೆಯವರ ಬೆಂಬಲವೂ ಇದ್ದಿತು. ಆದರೆ ಆಗಿನ ಆರ್ಕಿಯಾಲಾಜಿಕಲ್ ಇಲಾಖೆಯಾಗಲಿ ಸರಕಾರವಾಗಲಿ ಅನುಮೋದಿಸಲಿಲ್ಲ. ಒಂದು ವೇಳೆ ಅವರ ಪ್ರಯತ್ನ ಸಫಲವಾಗಿದ್ದರೆ ಅವರ ಕಲಾಸಂಗ್ರಹ (ಇಂದು ಬೋಸ್ಟನ್ ಮ್ಯೂಸಿಯಂನಲ್ಲಿರುವುದು) ಇಲ್ಲಿಯೇ ಉಳಿಯುತ್ತಿತ್ತು. ಅದರ ಸಂರಕ್ಷಕರಾಗಿ ಅವರೂ ಇಲ್ಲಿಯೇ ಇರುವಂತಾಗುತ್ತಿತ್ತು. ಕಡೆಗೆ ಯಾವುದಾದರೂ ಭಾರತೀಯ ವಿಶ್ವವಿದ್ಯಾನಿಲಯವೊಂದರಲ್ಲಿ ಕಲಾ—ಇತಿಹಾಸದ ಪ್ರಾಧ್ಯಾಪಕನಾಗಿಯಾದರೂ ಸೇರಬೇಕೆಂದು ಪ್ರಯತ್ನಿಸಿದರು. ಅದೂ ಕೈಗೂಡಲಿಲ್ಲ. ರಾಯ್ ಕೃಷ್ಣದಾಸ ಮತ್ತು ಡಾ॥ ಭಗವಾನ್ ದಾಸರಂಥ ಪ್ರಭಾವಶಾಲಿಗಳು ಪ್ರಯತ್ನಪಟ್ಟರೂ ವಾರಣಾಸಿಯ ವಿಶ್ವವಿದ್ಯಾನಿಲಯದಲ್ಲಿ ಅವರಿಗೆ ಸ್ಥಾನ ದೊರೆಯಲಿಲ್ಲ. ವಾರಣಾಸಿಯ ವಿಶ್ವವಿದ್ಯಾನಿಲಯದ ಅಧ್ವರ್ಯುವಾಗಿದ್ದ ಪಂಡಿತ ಮದನಮೋಹನ ಮಾಳವೀಯರು ಕಲೆಗಿಂತ ವಿಜ್ಞಾನಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡಬೇಕೆಂದು ನಿರ್ಧರಿಸಿದ್ದರು.

ಆನಂದ ಕುಮಾರಸ್ವಾಮಿ 1911 ರ ಮೇ-ಜೂನ್ ತಿಂಗಳುಗಳನ್ನು ಕಾಶ್ಮೀರದಲ್ಲಿ ಕಳೆದರು. ಪಂಜಾಬೀ ಮತ್ತು ಕಾಶ್ಮೀರಿ ಜಾನಪದಗೀತಗಳನ್ನು ಸಂಗ್ರಹಿಸಿ ಅವನ್ನು ಇಂಗ್ಲಿಷಿಗೆ ಅನುವಾದ ಮಾಡಿದರು. ಕಾಶ್ಮೀರದ ಚಿತ್ರಕಲಾಸಂಪ್ರದಾಯವನ್ನೂ ಅಧ್ಯಯನ ಮಾಡಿದರು.

ಅವರು 1913 ರವರೆಗೂ ಭಾರತದಲ್ಲೇ ಇದ್ದುಕೊಂಡು ಅವನೀಂದ್ರನಾಥ ಠಾಕೂರರ 'ಇಂಡಿಯನ್ ಸೊಸೈಟಿ ಆಫ್ ಓರಿಯಂಟಲ್ ಆರ್ಟ್ಸ್' ಸಂಸ್ಥೆಯಲ್ಲಿ ಕಲಾಭಿರುಚಿಯ ಬೆಳವಣಿಗೆಗೆ ಶ್ರಮಿಸಿದರು. ಸೋದರಿ ನಿವೇದಿತಾಳೊಂದಿಗೆ ಹಿಂದೂಗಳ, ಬೌದ್ಧರ ಪುರಾಣಕಥೆಗಳನ್ನು ಕುರಿತು ಸಚಿತ್ರಗ್ರಂಥವನ್ನು ಬರೆದು ಪ್ರಕಟಿಸಿದರು. ದೇಶದ ಹಲವೆಡೆ ಪ್ರಾಚೀನ ಭಾರತೀಯ ಕಲಾಕೃತಿಗಳ ಪ್ರದರ್ಶನವನ್ನು ಏರ್ಪಡಿಸಿದರು. ತಮ್ಮ ಚಿಂತನಗಳನ್ನು 'ಕಲೆ ಮತ್ತು ಸ್ವದೇಶೀ,' (*Art and Swadeshi*) ಎಂಬ ಸುಪ್ರಸಿದ್ಧವಾದ ಪುಸ್ತಕದಲ್ಲಿ ಮೂಡಿಸಿದರು (ಇದು 1911 ರಲ್ಲಿ ಮದರಾಸಿನಲ್ಲಿ ಪ್ರಕಟವಾಯಿತು).

ಇದೇ ಸಮಯದಲ್ಲಿ ಭಾರತೀಯಸಂಗೀತ ಅವರನ್ನು ಆಕರ್ಷಿಸಿತು. 1910 ರ ಸುಮಾರಿಗೆ ಅವರೊಮ್ಮೆ ಲಂಡನ್ನಿಗೆ ಬಂದಿದ್ದಾಗ ಸೆಸಿಲ್ ಶಾರ್ಪ್ ಎಂಬ ಜನಪ್ರಿಯ ಸಂಗೀತಕಲಾವಿದನ ಪರಿಚಯವಾಗಿ ಇಂಗ್ಲಿಷ್ ಜಾನಪದಗೀತಗಳನ್ನು ಮೆಚ್ಚಿಕೊಂಡರು. ಬಳಕೆಯಿಂದ ಜಾರುತ್ತಿರುವ ಗೇಯಪ್ರಕಾರಗಳನ್ನು ಉಳಿಸಲು ಈತ ಬಹುವಾಗಿ

ಶ್ರಮಿಸುತ್ತಿದ್ದ. ಈ ಕೆಲಸ ಆನಂದ ಕುಮಾರಸ್ವಾಮಿಯವರಿಗೂ ಇಷ್ಟವಾಯಿತು. ಈತನ ಶಿಷ್ಯೆ ಆ್ಯಲಿಸ್ ರಿಚರ್ಡ್‌ಸನ್ ಎಂಬಾಕೆ ನೃತ್ಯದಲ್ಲೂ ಸಂಗೀತದಲ್ಲೂ ಚತುರೆ. ಆವೇಳೆಗೆ ಆನಂದ ಕುಮಾರಸ್ವಾಮಿಯವರ ಹೆಂಡತಿ ಎತೆಲ್ ಮೈರೇ ಅವರಿಂದ ದೂರವಾಗಿದ್ದಳು; 1911ರ ಸುಮಾರಿಗೆ ವಿವಾಹವಿಚ್ಛೇದನವೂ ಆಗಿದ್ದಿತು. ಈಗ ಆ್ಯಲಿಸ್ ಅವರ ಹೆಂಡತಿಯಾದಳು. ಎತೆಲ್ ಮೈರೇ ನೇಕಾರಿಗೆ ವಿನ್ಯಾಸದಲ್ಲಿ ತೊಡಗಿದ್ದು ವಿವಾಹ ವಿಚ್ಛೇದನವಾದಮೇಲೆ ಕೂಡ ಇದನ್ನೇ ಮುಂದರಿಸಿಕೊಂಡುಹೋದಳು. ಆಕೆ ತೀರಿ ಕೊಂಡದ್ದು 1952ರಲ್ಲಿ. ಆಕೆಯಿಂದ ಆನಂದ ಕುಮಾರಸ್ವಾಮಿಯವರಿಗೆ ಮಕ್ಕಳಿರಲಿಲ್ಲ.

ಗಂಗಾವಿಸರ್ಜನಮೂರ್ತಿ
(ಪಲ್ಲವಕಾಲದ ಶಿಲಾಭಿತ್ತಿಶಿಲ್ಪ, ಕೈಲಾಸನಾಥದೇವಾಲಯ)

ಆ್ಯಲಿಸ್ ಒಂದಿಗೆ ಈ ಮದುವೆ ಇಂಗ್ಲೆಂಡಿನಲ್ಲೇ ನಡೆದ ಮೇಲೆ 1911ರ ಸುಮಾರಿಗೆ ಅವರಿಬ್ಬರೂ ಒಡಗೂಡಿ ಭಾರತಕ್ಕೆ ಬಂದು ಕಾಶ್ಮೀರದ ಶ್ರೀನಗರದಲ್ಲಿ ನೆಲೆಸಿದರು. ಆ್ಯಲಿಸ್ ಭಾರತೀಯ ಸಂಗೀತಕ್ಕೆ ಒಲಿದು ಕಪೂರ್ತಲದ ಅಬ್ದುಲ್ ರಹೀಮ್ ಎಂಬ ಉಸ್ತಾದರ ಬಳಿ ಹತ್ತು ವಾರಗಳ ಕಾಲ ಶಾಸ್ತ್ರೀಯಸಂಗೀತವನ್ನು ಅಭ್ಯಾಸ ಮಾಡಿದಳು. ಆಕೆ ತನ್ನ ಹೆಸರನ್ನು 'ರತ್ನದೇವಿ' ಎಂದು ಮಾರ್ಪಡಿಸಿಕೊಂಡೂ ಇದ್ದಳು. ಮರುವರ್ಷ ಆನಂದ ಕುಮಾರಸ್ವಾಮಿಯವರೊಂದಿಗೆ ರತ್ನ ದೇವಿ ಇಂಗ್ಲೆಂಡಿಗೆ ಮರಳಿದಾಗ ತಂಬೂರಿ ಯೊಂದಿಗೆ ಭಾರತೀಯ ಸಂಗೀತವನ್ನು ಹಲವಾರು ಸಭೆಗಳಲ್ಲಿ ಹಾಡತೊಡಗಿದಳು. ಭಾರತೀಯ ಸಂಗೀತ ಅಲ್ಲಿಯ ಜನರಿಗೆ ಹೊಸದಾದ್ದರಿಂದ, ಗಾಯನ ನಡೆಯುವ ಮೊದಲು ಆನಂದ ಕುಮಾರಸ್ವಾಮಿ ಪ್ರಸ್ತಾವನೆ ಯಾಗಿ ಸಂಗೀತದ ವಿಚಾರ ತಿಳಿಯಪಡಿಸು ತ್ತಿದ್ದರು. ರವೀಂದ್ರನಾಥ ಠಾಕೂರರು ಆ ವರ್ಷ ಇಂಗ್ಲೆಂಡಿಗೆ ಬಂದಿದ್ದಾಗ ಆಕೆಯ ಗಾಯನವನ್ನು ಕೇಳಿ ಮುಗ್ಧರಾದರಂತೆ. ಡಬ್ಲ್ಯು. ಬಿ. ಯೀಟ್ಸ್ ಮೊದಲಾದ ರಸಿಕರೂ ಇದೇ ಅನುಭವವನ್ನು ಪಡೆದರು. ಆಕೆಯ ಸಂಗೀತಕಚೇರಿಗಳು ಇಂಗ್ಲೆಂಡಿನ ಹಲವೆಡೆ ನಡೆದುವು; ಮೂರು-ನಾಲ್ಕು ವರ್ಷಗಳು ಅಮೇರಿಕಕ್ಕೂ ಹೋಗಿ ಅಲ್ಲಿ ಸಂಗೀತಸಭೆಗಳಲ್ಲಿ ಹಾಡಿದರು.

ಈಕೆಯನ್ನು ಮದುವೆಯಾದ ಮರುವರ್ಷ ಆನಂದ ಕುಮಾರಸ್ವಾಮಿಯವರು 'ಪಂಜಾಬು-ಕಾಶ್ಮೀರಗಳ ಮೂವತ್ತು ಗೀತಗಳು' (*Thirty Indian Songs from the Panjab and Kashmir*) ಎಂಬ ಗ್ರಂಥವನ್ನು ಪ್ರಕಟಿಸಿದರು. ಈ ಗೀತಗಳಿಗೆ

ಸ್ವರಪ್ರಸ್ತಾರವನ್ನು ರತ್ನದೇವಿಯೇ ಒದಗಿಸಿದ್ದಳು. ಪುಸ್ತಕ ಅಚ್ಚಾಗುವ ವೇಳೆಗೆ ಅವರಿಗೊಬ್ಬ ಮಗನೂ ಹುಟ್ಟಿದ. ಮಗನ ಹೆಸರು ನಾರದ. ಹೆಸರಿಗೆ ತಕ್ಕಂತೆ ಅವನು ಮುಂದೆ ಅಲೆಮಾರಿಯಾಗಿ ಎಲ್ಲೋ ಮರೆಯಾದ. ಒಬ್ಬಳು ಮಗಳೂ ಆದಳು. ಹೆಸರು—ರೋಹಿಣಿ.

1916ರಲ್ಲಿ ಆನಂದ ಕುಮಾರಸ್ವಾಮಿಯವರ ಉದ್ಗ್ರಂಥ 'ರಜಪುತ್ ಪೇಯ್‌ಂಟಿಂಗ್' (*Rajput Painting*) ಆಕ್ಸ್‌ಫರ್ಡ್‌ನಿಂದ ಎರಡು ಸಂಪುಟಗಳಲ್ಲಿ ಪ್ರಕಟವಾಯಿತು. ಅವರೆಗೆ ರಾಜಾಸ್ಥಾನದ್ದೇ ವರ್ಣಚಿತ್ರಗಳು ವಿಶಿಷ್ಟವಾದುವು ಎಂಬ ಕಲ್ಪನೆ ಯಾರಿಗೂ ಇರಲಿಲ್ಲ. ರಾಜಾಸ್ಥಾನ ಮತ್ತು ಕಾಂಗಡಾ ಚಿತ್ರಗಳು ಮುಗಲ್ ಶೈಲಿಯ ಪ್ರಕಾರಗಳೇ ಎಂದು ಎಲ್ಲರೂ ಬಗೆದಿದ್ದರು. ಈ ಪುಸ್ತಕದಲ್ಲಿ ಅವರು ಈ ವರ್ಣಚಿತ್ರಗಳು ಮುಗಲ್ ವರ್ಣಚಿತ್ರಗಳಿಗಿಂತ ಬೇರೆಯಾದುವೆಂದೂ, ಅವಕ್ಕೇ ಪ್ರತ್ಯೇಕವಾದ ಇತಿಹಾಸ, ತಾತ್ಪರ್ಯಗಳಿವೆಯೆಂದೂ ವಿವರಿಸಿದರು. ರಾಜಾಸ್ಥಾನ ಚಿತ್ರಗಳ ಬೆಳವಣಿಗೆ ಮತ್ತು ಸಂಕೇತಗಳ ವಿವರಣೆ ಎಲ್ಲವೂ ಈ ಪುಸ್ತಕಕ್ಕೆ ಕಲಾಪ್ರಪಂಚದಲ್ಲಿ ಮಾನ್ಯತೆಯನ್ನು ಗಳಿಸಿಕೊಟ್ಟವು. ಮೇಲಾಗಿ ಸೊಗಸಾದ ಪ್ರತಿ ಕೃತಿಗಳೂ ಅದರಲ್ಲಿದ್ದುವು. ಇದರ ಬರಹದಲ್ಲಿ ಮುಕುಂದೀಲಾಲನೆಂಬ ತಜ್ಞಕಲಾವಿದ ನೆರವಾದನು. ರಾಜಾಸ್ಥಾನದ ವರ್ಣಚಿತ್ರಗಳ ತಾತ್ಪರ್ಯವೂ ಸ್ವಾರಸ್ಯವೂ ಅವರಿಗೆ ಮನದಟ್ಟಾದುದು ವಿದ್ಯಾಪತಿಯೆಂಬ ಬಂಗಾಳಿ ವೈಷ್ಣವಕವಿಯ ಕವಿತೆಗಳಿಂದ. 1915ರಲ್ಲಿ ಅವರು ಅರುಣಸೇನನೆಂಬ ವಿದ್ವಾಂಸನೊಡಗೂಡಿ 'ವಿದ್ಯಾಪತಿಯ ಬಂಗೀಯ ಪದಾವಲಿ' (*Vidyapati: Bangiya Padabali*) ಎಂಬ ಅನುವಾದವನ್ನು ಹೊರತಂದಿದ್ದರು.

ಈ ವರ್ಷ ಅವರು ಇಂಗ್ಲೆಂಡನ್ನು ಹೇಗಾದರೂ ಬಿಡಬೇಕೆಂದು ನಿರ್ಧರಿಸಿದ್ದರು. ಕಾರಣವೇನೋ ತಿಳಿಯುವುದಿಲ್ಲ. ಇಂಗ್ಲೆಂಡಿನಲ್ಲಿ ಹರ್ಬರ್ಟ್ ರೀಡ್, ಎರಿಕ್ ಗಿಲ್ ಮೊದಲಾದ ಪ್ರಭಾವಶಾಲಿಗಳು ಅವರ ಮಿತ್ರವರ್ಗದಲ್ಲಿ ಸೇರಿದ್ದರು. ಆದರೆ ಭಾರತದೇಶದ ಸೆಳೆತ ಅವರಿಗೆ ಹೆಚ್ಚಾದಂತೆ ತೋರುತ್ತದೆ. ತಮ್ಮ ಕಲಾಸಂಗ್ರಹವನ್ನೆಲ್ಲ ಭಾರತಕ್ಕೆ ತಂದಿದ್ದರು; ಇಲ್ಲಿ ರಾಷ್ಟ್ರೀಯ ಮ್ಯೂಸಿಯಂ ಒಂದನ್ನು ಏರ್ಪಡಿಸಲು ಅವರು ಯತ್ನಿಸಿದ್ದನ್ನು ಆಗಲೇ ಹೇಳಿದ್ದೇವೆ. ಭಾರತದಲ್ಲಿ ನೆಲೆಸಬೇಕೆಂಬ ಬಯಕೆ ಅವರಿಗಿದ್ದುದು ಅವರು ಆ ಕಾಲದಲ್ಲಿ ಬರೆದ ಪತ್ರಗಳಿಂದಲೂ ಸ್ಪಷ್ಟವಾಗುತ್ತದೆ. ಆದರೆ ಭಾರತದಲ್ಲಿ ಅವರಿಗೆ ಪ್ರೋತ್ಸಾಹ ದೊರೆಯದೇ ಇದ್ದುದರಿಂದ ಅವರಿಗೆ ಬೇಸರವಾಯಿತು. ದೇಶದ ಸ್ವಾತಂತ್ರ್ಯ ಇನ್ನೂ ದೂರದ ಕನಸಾಗಿದ್ದ ಕಾಲ ಅದು. ಸ್ವರಾಜ್ಯದ ಆಂದೋಲನ ಮೊದಲಾಗಿದ್ದು, ಆನಂದ ಕುಮಾರಸ್ವಾಮಿಯ ಪಾತ್ರ ಅದರಲ್ಲಿ ಇದ್ದುದರಿಂದ ಬ್ರಿಟಿಷ್-ಆಡಳಿತ ಇವರನ್ನು ಇಲ್ಲಿ ಬರಗೊಡಲಿಲ್ಲ.

ಹೀಗೆ ನಿರಾಶೆಯಾದಾಗ ಅವರು ಅಮೆರಿಕದ ಕಡೆ ತಿರುಗಿದರು. ತಮ್ಮ ಹೆಂಡತಿ ರತ್ನದೇವಿಯ ಸಂಗೀತಕಚೇರಿಗಳನ್ನು ಆ ದೇಶದಲ್ಲಿ ಏರ್ಪಡಿಸಿ, ಅವರೊಂದಿಗೆ

ಭಾರತೀಯಸಂಗೀತದ ವಿಚಾರ ಭಾಷಣ ಮಾಡುವುದಾಗಿ ಹೊರಟರು. 1917ರ ಮೊದಲ ತಿಂಗಳಲ್ಲಿ ಅವರು ಅಮೆರಿಕದೇಶಕ್ಕೆ ಬಂದುದು. ಬರುವಾಗ ಬ್ರಿಟಿಷ್ ಮ್ಯೂಸಿಯಂನ ಅಧಿಕಾರಿಯಾಗಿದ್ದ ಲಾರೆನ್ಸ್ ಬನ್ಯನ್ ಎಂಬ ಕಲಾವಿಮರ್ಶಕನಿಂದ ಪತ್ರವೊಂದನ್ನೂ ಸರಕಾರಕ್ಕೆ ಬರೆಸಿದರು. ಪತ್ರದಲ್ಲಿ ಆನಂದ ಕುಮಾರಸ್ವಾಮಿಯ ಕಲಾಸಂಗ್ರಹದ ವಿಚಾರವೂ ಇದೆ. ಭಾರತೀಯಕಲೆಯ ಬಗ್ಗೆ ಕೆಲವು ಉಪನ್ಯಾಸಗಳನ್ನು ಕೊಡುವುದಷ್ಟೇ ಅವರ ಅಮೆರಿಕ ಪ್ರವಾಸದ ಉದ್ದೇಶ ಎಂಬ ಒಕ್ಕಣೆಯೂ ಇದೆ.

ಅಮೆರಿಕದಲ್ಲಿ ನೆಲೆಸುವ ಉದ್ದೇಶ ಅವರಿಗಿದ್ದಿತೋ ಇಲ್ಲವೋ ಹೇಳುವುದು ಕಷ್ಟ. ಆದರೆ ನೆಲೆಸಲು ಅನುಕೂಲವಾದ ಸಂದರ್ಭವೇನೋ ಒದಗಿತು. ಆಗತಾನೇ ಪ್ರಕಟವಾಗಿದ್ದ ಅವರ ರಾಜಾಸ್ಥಾನೀ ವರ್ಣಚಿತ್ರಗಳನ್ನು ಕುರಿತ ಪುಸ್ತಕ ಅಮೆರಿಕದ ಕಲಾರಸಿಕರ ಗಮನಕ್ಕೆ ಆಗಲೇ ಬಂದಿದ್ದಿತು. ಅಲ್ಲಿ ಬೋಸ್ಟನ್ ಮ್ಯೂಸಿಯಂ ಲಲಿತಕಲೆಗಳ ಕೃತಿಗಳನ್ನು ಪ್ರಪಂಚದ ಎಲ್ಲೆಡೆಗಳಿಂದ ಸಂಗ್ರಹಿಸುವ ಯೋಜನೆ ಯೊಂದನ್ನು 1895ರಿಂದಲೇ ಹಾಕಿಕೊಂಡಿತ್ತು. ಚೀನ ಮತ್ತು ಜಪಾನ್‌ದೇಶಗಳಿಂದ ಹಲವು ಕಲಾಕೃತಿಗಳು ಆಗಲೇ ಅಲ್ಲಿದ್ದುವು; ಅವಕ್ಕೆ ಬೇರೆ ಒಂದು ವಿಭಾಗವನ್ನೂ ಏರ್ಪಡಿಸಿದ್ದರು. ಈ ಸಂಸ್ಥೆಯ ವಿಶ್ವಸ್ಥರಲ್ಲಿ ಒಬ್ಬರಾಗಿದ್ದ ಡೆನ್‌ಮನ್ ವಾಲ್ಡೊ ರಾಸ್ (ಮರಣ 1935) ಏಶಿಯಾಖಂಡದ ಕಲಾಕೃತಿಗಳ ಮೇಲೆ ವಿಶೇಷವಾದ ಆದರವನ್ನು ತಳೆದಿದ್ದರು. ಲಂಡನ್ನಿನಲ್ಲಿ ಆನಂದ ಕುಮಾರಸ್ವಾಮಿ 'ಇಂಡಿಯ ಸೊಸೈಟಿ' ಸಂಸ್ಥೆಯನ್ನು ಆರಂಭ ಮಾಡಿದಾಗ ಅವರಿಗೆ ರಾಸ್ ಪರಿಚಯವೂ ಆಗಿದ್ದಿತು. ರಾಸ್ ಆಗಲೇ ಭಾರತದ ಮತ್ತು ಪರ್ಶಿಯದ ಸುಮಾರು ನೂರೈವತ್ತು ಕಿರುಚಿತ್ರಗಳನ್ನು ಸಂಗ್ರಹಿಸಿ ಬೋಸ್ಟನ್ ಮ್ಯೂಸಿಯಂಗೆ ಕೊಟ್ಟಿದ್ದರು. ಇವನ್ನು ಏಶಿಯನ್ ಆರ್ಟ್ಸ್ ವಿಭಾಗವಾಗಿ ವ್ಯವಸ್ಥೆ ಮಾಡಲಾಗಿತ್ತು. ಎಂ. ಗೊಲೂಬ್ಯು ಅವರ ಮುಗಲ್‌ಚಿತ್ರಗಳ ಸಂಗ್ರಹವೂ ಇದರಲ್ಲಿಯೇ ಇದ್ದಿತು. 'ಇಂಡಿಯನ್ ಆರ್ಟ್ ಸ್ಪೆಷಲ್ ಫಂಡ್' 1913ರಲ್ಲಿ ಅಸ್ತಿತ್ವಕ್ಕೆ ಬಂದು, ಈ ವಿಭಾಗಕ್ಕೆ ಉತ್ತೇಜನ ದೊರಕಿತು.

ಈಗ ಆನಂದ ಕುಮಾರಸ್ವಾಮಿಯವರು ಅಮೆರಿಕ ಪ್ರವಾಸಕ್ಕೆ ಬಂದಾಗ ಜೊತೆಯಲ್ಲಿ ತಮ್ಮ ಕಲಾಸಂಗ್ರಹವನ್ನೂ ತಂದಿದ್ದರು; ರಾಸ್‌ನನ್ನು ಅವರು ಭೇಟಿಯಾಗಿ ಅವನ್ನೆಲ್ಲ ತೋರಿಸಿದರು. ಈ ಸಂಗ್ರಹದಲ್ಲಿ ಸಾವಿರಾರು ರಾಜಾಸ್ಥಾನೀ ವರ್ಣಚಿತ್ರಗಳು, ಮುಗಲ್‌ವರ್ಣಚಿತ್ರಗಳು, ಶಿಲ್ಪಗಳು, ಲೋಹದ ಪ್ರತಿಮೆಗಳೂ ಇದ್ದುವು. ರಾಸ್ ಇವನ್ನೆಲ್ಲ ಮ್ಯೂಸಿಯಂಗಾಗಿ ಕೊಂಡುಕೊಳ್ಳುವ ಮನಸ್ಸು ಮಾಡಿ 1916ರಲ್ಲಿ ಮ್ಯೂಸಿಯಂನ ವಿಶ್ವಸ್ಥಸಭೆಯ ಸಮ್ಮತಿಯನ್ನು ಪಡೆದುಕೊಂಡರು. ಹಾಗೆ ಕೊಂಡ ಕಲಾವಸ್ತುಗಳು 'ರಾಸ್-ಕುಮಾರಸ್ವಾಮಿ ಸಂಗ್ರಹ' ಎಂಬ ಹೆಸರಿನಿಂದ ಪ್ರಸಿದ್ಧ ವಾದುವು. ಇವುಗಳಲ್ಲಿ 900 ವರ್ಣಚಿತ್ರಗಳಿದ್ದುವು.

ಬೋಸ್ಟನ್ ವಸ್ತುಸಂಗ್ರಹಾಲಯದಲ್ಲಿ

ಹೀಗೆ ತಮ್ಮ ಅಪಾರವಾದ, ಅಪರೂಪವಾದ ಕಲಾಕೃತಿಗಳ ಸಂಗ್ರಹವನ್ನು ಎಲ್ಲಿ ನೆಲೆಗೊಳಿಸಬೇಕೆಂಬ ಆನಂದ ಕುಮಾರಸ್ವಾಮಿಯವರ ಸಮಸ್ಯೆಯ ಪರಿಹಾರ

ವಾಯಿತು. ರಾಸ್ ಈ ಸಂಗ್ರಹದಲ್ಲಿ ಆಸಕ್ತಿಯನ್ನು ತಳೆದು ಬೋಸ್ಟನ್ ವಸ್ತುಸಂಗ್ರಹಾಲಯಕ್ಕೆ ಅವನ್ನು ಕೊಂಡುದು ಮಾತ್ರವಲ್ಲ; ಭಾರತೀಯ ವಿಭಾಗ ವೊಂದನ್ನೇ ಏರ್ಪಡಿಸಿಬೇಕೆಂದು ಹವಣಿಸಿದರು. ದೂರಪ್ರಾಚ್ಯದ ಸಂಸ್ಕೃತಿಯನ್ನು ಕುರಿತು ಆಗಲೆ ಒಂದು ವಿಭಾಗವಿದ್ದಿತು. ಎಡ್ವರ್ಡ್ ಸಿಲ್ವೆಸ್ಟರ್ ಮಾರ್ಸ್ 1880 ರಲ್ಲಿ ಜಪಾನಿನಿಂದ ಬೋಸ್ಟನ್ನಿಗೆ ಬರುವಾಗ ತಮ್ಮೊಂದಿಗೆ ಅಲ್ಲಿನ ಕಲಾಕೃತಿಗಳನ್ನು ತಂದಿದ್ದರು; 1891ರಲ್ಲಿ ಅವರೂ ಬೋಸ್ಟನ್ ಮ್ಯೂಸಿಯಂನ ವಿಶ್ವಸ್ಥರಲ್ಲೊಬ್ಬರಾದರು. ಮುಂದೆ ಒಕಾಕುರ ಕಕುಜೊ 1904 ರಿಂದ 1913 ರವರೆಗೂ (ಎಂದರೆ, ತಮ್ಮ ಮರಣದ ವರೆಗೂ) ಬೋಸ್ಟನ್ ಮ್ಯೂಸಿಯಂನ ಅಧಿಕಾರಿಯಾಗಿದ್ದು ದೂರಪ್ರಾಚ್ಯ ವಿಭಾಗದ ಅಧಿಕಾರಿಯಾಗಿದ್ದರು. 1917 ರ ವೇಳೆಗೆ ಈ ಮ್ಯೂಸಿಯಂನಲ್ಲಿ ಐದುಸಾವಿರ ವರ್ಣಚಿತ್ರಗಳೂ, ಅರವತ್ತುಸಾವಿರ ಅಚ್ಚುಕೃತಿಗಳೂ (ಪ್ರಿಂಟ್), ಏಳುಸಾವಿರ ಪಿಂಗಾಣಿ ಸಾಮಾನುಗಳೂ, ಎಂಟುನೂರು ನೋ-ಉಡುಪುಗಳೂ ಜಪಾನ್-ಸಂಸ್ಕೃತಿಯನ್ನು ಪ್ರತಿನಿಧಿಸುತ್ತ ಇದ್ದುವು. ಈ ಸಂಗ್ರಹದ ಮುಂದೆ ಭಾರತದಿಂದ ಕೇವಲ 440 ಕಲಾಕೃತಿಗಳು ಪ್ರದರ್ಶನಕ್ಕೂ, ಒಂದುಸಾವಿರದ ನೂರು ಕಲಾಕೃತಿಗಳು ಅಧ್ಯಯನಕ್ಕೂ ಇದ್ದುವೆಂದರೆ, ಅವಕ್ಕೇ ಒಂದು ವಿಭಾಗವನ್ನೇರ್ಪಡಿಸುವುದು ಅಷ್ಟು ಸುಲಭ ವಾಗಿರಲಿಲ್ಲ.

ಮ್ಯೂಸಿಯಂನ ವಿಶ್ವಸ್ಥಸಮಿತಿ ಮೊದಲು ಇದಕ್ಕೊಪ್ಪಲಿಲ್ಲ. ಆದರೆ ರಾಸ್‌ನ ಒತ್ತಾಯಕ್ಕೆ ಮಣಿದು ಕಡೆಗೆ ಒಪ್ಪಿದರು. ರಾಸ್ ಶ್ರೀಮಂತ, ಪ್ರಭಾವಶಾಲಿ, ಕಲಾರಸಿಕ, ಮ್ಯೂಸಿಯಂನ ಪೋಷಕರಲ್ಲೊಬ್ಬರು. 1883 ರಲ್ಲಿ ಅವರು ಮ್ಯೂಸಿಯಂನಲ್ಲಿ ಆಸಕ್ತಿ ತಳೆದಂದಿನಿಂದ ತಾವು 1905 ರಲ್ಲಿ ತೀರಿಕೊಳ್ಳುವವರೆಗೆ ಏಶಿಯಾಖಂಡದ ಆರುಸಾವಿರ ಕಲಾಕೃತಿಗಳನ್ನು ಮ್ಯೂಸಿಯಂಗೆ ಕೊಟ್ಟ ದಾಖಲೆಯಿದೆ. ಅಷ್ಟು ಮಾತ್ರವಲ್ಲ, ಹಾರ್ವರ್ಡ್ ವಿಶ್ವವಿದ್ಯಾನಿಲಯದಲ್ಲಿ ಕಲೆಯ ಅಧ್ಯಾಪಕರೂ ಆಗಿದ್ದರು. ಹೀಗಾಗಿ ಅವರು ಡಾ॥ ಆನಂದ ಕುಮಾರಸ್ವಾಮಿಯವರ ಬಗ್ಗೆ ವಿಶೇಷವಾದ ಅಭಿಮಾನವನ್ನು ತಳೆದುದು ಸೋಜಿಗವಲ್ಲ. ಮ್ಯೂಸಿಯಂನ ಏಷ್ಯಾಕಲೆಯ ವಿಭಾಗದ 'ಕೀಪರ್' ಆಗಿದ್ದ

ಓಕಾಕುರ ಈ ವೇಳೆಗೆ ತೀರಿಕೊಂಡನಾಗಿ, ಅವನ ಕೆಲಸವನ್ನೂ ಆನಂದ ಕುಮಾರಸ್ವಾಮಿಗೆ ಕೊಡಿಸಬೇಕೆಂದು ಯತ್ನಿಸಿದರು.



ಚಕ್ರಪುರುಷ
(ಕಾಂಸ್ಯಶಿಲ್ಪ)

ಅಂತೂ 1917 ರಲ್ಲಿ (ಏಪ್ರಿಲ್ 26 ರಂದು) ಬೋಸ್ಟನ್ ಮ್ಯೂಸಿಯಂನ ವಿಶ್ವಸ್ಥಸಮಿತಿಯು ಭಾರತಿಯ ಕಲಾಕೃತಿಗಳ ವಿಭಾಗವೊಂದನ್ನು ಏರ್ಪಡಿಸಲು ಒಪ್ಪಿದುದಲ್ಲದೆ, ಡಾ॥ ಆನಂದ ಕುಮಾರಸ್ವಾಮಿಯವರನ್ನೇ ಅದರ ಮೇಲಧಿಕಾರಿಯಾಗಿರುವಂತೆ ಕೇಳಿಕೊಂಡಿತು. ಆನಂದ ಕುಮಾರಸ್ವಾಮಿಯವರು ಒಪ್ಪಿದರೆಂದು ಬೇರೆ ಹೇಳಬೇಕಾಗಿಲ್ಲ. ಮೊದಲಿಗೆ ಈ ಉದ್ಯೋಗ ಮೂರು ವರ್ಷಗಳಿಗೆ ಮಾತ್ರ ಎಂದಿದ್ದಿತು; ಭಾರತೀಯ ಕಲಾಕೃತಿಗಳ ವಿವರಣಾತ್ಮಕ ಸೂಚಿಯನ್ನು ಸಿದ್ಧಪಡಿಸಲೆಂದೇ ಅವರ ಕೆಲಸ ಗೊತ್ತಾಗಿದ್ದಿತು. ಮುಂದೆ ಅವಶ್ಯವಿದ್ದರೆ ಒಂದು ವರ್ಷಕಾಲ ಅವಧಿಯನ್ನು ವಿಸ್ತರಿಸುವ ಸೌಲಭ್ಯವನ್ನು ಕೊಟ್ಟಿದ್ದರು. ಇವರ ಹುದ್ದೆಯ ಹೆಸರು 'ಭಾರತೀಯ ಕಲೆಗಳ ರಕ್ಷಕ' (ಕೀಪರ್ ಆಫ್ ಇಂಡಿಯನ್ ಆರ್ಟ್ಸ್). 1917 ರಿಂದ 1921 ರ ವರೆಗೂ ಇಷ್ಟು ಮಾತ್ರ ಅವರ ಅಧಿಕಾರದ ವ್ಯಾಪ್ತಿಯಲ್ಲಿದ್ದಿತು. ಮುಂದೆ 1922 ರಿಂದ 1932 ರ ವರೆಗೆ ಭಾರತೀಯ ಮತ್ತು ಮಹಮ್ಮದೀಯಕಲೆಗಳೆರಡೂ ಅವರ ಮೇಲ್ವಿಚಾರಣೆಗೆ ಒಳಪಟ್ಟುವು. 1917 ರಲ್ಲಿ ಆನಂದ ಕುಮಾರಸ್ವಾಮಿ ಇಂಗ್ಲೆಂಡನ್ನು ಬಿಟ್ಟು ಬೋಸ್ಟನ್ನಿಗೆ ಬಂದು, ಮ್ಯೂಸಿಯಂ ಕೆಲಸವನ್ನು ಕೈಗೊಂಡು, ಅಮೆರಿಕ ನಿವಾಸಿಯಾಗಿ ನೆಲಸಿದರು. 1932 ರವರೆಗೆ ಅವರ ಕೆಲಸ ಮ್ಯೂಸಿಯಂನ ಭಾರತೀಯ ಮತ್ತು ಅದಕ್ಕೆ ಸಂಬಂಧಿಸಿದ ಕಲಾಕೃತಿಗಳ ಸಂರಕ್ಷಣೆ, ವಿವರಣೆ, ಜೋಡಣೆ, ವರದಿಗಳ ಸಿದ್ಧತೆ ಇಷ್ಟು ಮಾತ್ರ ಇದ್ದಿತು. ಹೀಗಾದರೂ ಅವರ ಬರಹ, ಪುಸ್ತಕಗಳ ಪ್ರಕಟಣೆ ಭರದಿಂದ ಸಾಗಿತು. 1933 ರಲ್ಲಿ ಮ್ಯೂಸಿಯಂ ಆಡಳಿತವು ಇವರಿಗೆ ಭಾರತೀಯ, ಮಹಮ್ಮದೀಯ ಮತ್ತು ಪರ್ಶಿಯನ್‌ಕಲೆಗಳಲ್ಲಿ ಸಂಶೋಧನೆಗಾಗಿ 'ಫೆಲೋ' ಎಂಬ ಗೌರವದ ಹುದ್ದೆಯನ್ನು ಕೊಟ್ಟಿತು. ಆಗ ಅವರಿಗೆ ಮ್ಯೂಸಿಯಂನ ದಿನನಿತ್ಯದ ನಿರ್ವಹಣೆಯ ಹೊಣೆ ಅಷ್ಟಾಗಿ ಇರದೆ, ತಮಗೆ ಪ್ರಿಯವಾದ ವಿಷಯಗಳ ಅಧ್ಯಯನ, ಚಿಂತನ, ಬರಹಗಳಿಗೆ ಅವಕಾಶ ದೊರೆಯಿತು. 1947 ರಲ್ಲಿ ತೀರಿಕೊಳ್ಳುವವರೆಗೂ ಈ ಕೆಲಸದಲ್ಲೇ ತೊಡಗಿದ್ದರು.

1917 ರಲ್ಲಿ ಅವರು ಬೋಸ್ಟನ್ನಿಗೆ ಬಂದು, ಹೆಂಡತಿ ರತ್ನದೇವಿಯೊಂದಿಗೆ ನೆಲೆಸಿದ್ದರಷ್ಟೇ. ಆಗಿನಿಂದ ರತ್ನದೇವಿಗೂ ಇವರಿಗೂ ದಾಂಪತ್ಯಜೀವನದಲ್ಲಿ ವಿರಸ ತಲೆದೋರಿಕೊಂಡು ಮುಂದೆ ಒಂದೆರಡು ವರ್ಷಗಳಲ್ಲಿ ವಿವಾಹವಿಚ್ಛೇದನವಾಯಿತು. ವೈವಾಹಿಕಜೀವನ, ಪ್ರೇಮ—ಇವುಗಳನ್ನು ಕುರಿತು ಡಾ॥ ಆನಂದ ಕುಮಾರಸ್ವಾಮಿ

ಯವರ ನಿಲುವು ಮಾರ್ಪಟ್ಟಿತು. ಹೆಂಗಸಿನ ಪ್ರೀತಿಗಿಂತ ಜ್ಞಾನದ ಪ್ರೀತಿ ಅವರಿಗೆ ಮಿಗಿಲಾದುದೆಂದು ತೋರಿ, ವೈವಾಹಿಕಜೀವನ ಅನುಕೂಲಕ್ಕಾಗಿ ಅಷ್ಟೇ ಎನ್ನುವ ಭಾವನೆಯೂ ಮೂಡಿಬಂದಿತು. ಆದರೆ ಅದೇ ಸಮಯದಲ್ಲಿ ನ್ಯೂಯಾರ್ಕಿನ ಸ್ಟೆಲ್ಲ ಬ್ಲಾಚ್ ಎಂಬ ಹದಿನೇಳು ವರ್ಷದ ಹುಡುಗಿಯನ್ನು ಮೆಚ್ಚಿಕೊಂಡು, ಆಕೆಯ ಒಡನಾಟದಲ್ಲಿ ತೊಡಗಿದರು. ಆಗ ಅವರಿಗೆ ನಲವತ್ತೆರಡು ವರ್ಷ ವಯಸ್ಸು.

ಈ ಹುಡುಗಿ ನೃತ್ಯದಲ್ಲಿ ಪರಿಣತಳಾಗಿದ್ದವಳು; ಕೆಲವು ಚಲನಚಿತ್ರಗಳಲ್ಲಿ ಪಾತ್ರವನ್ನೂ ವಹಿಸಿದ್ದಳು. 1920-21 ರ ಸುಮಾರಿಗೆ ಇವಳೊಂದಿಗೆ ಆನಂದ ಕುಮಾರಸ್ವಾಮಿಯವರು ಭಾರತದೇಶದ ಪ್ರವಾಸವನ್ನೂ ಕೈಗೊಂಡರು. 1922 ರಲ್ಲಿ ಇವರಿಬ್ಬರ ಮದುವೆಯಾಯಿತು. ಆದರೆ ಆಕೆ ನ್ಯೂಯಾರ್ಕಿನಲ್ಲೇ, ಇವರು ಬೋಸ್ಟನ್ನಿನಲ್ಲೇ. ಬೇಸಗೆಯಲ್ಲಿ ಮಾತ್ರ ಕೆನಡಾದೇಶದ ಗಡಿಯಲ್ಲಿ ಮೇನ್ ಎಂಬೆಡೆ ಇದ್ದ ತಮ್ಮ ಮನೆಯಲ್ಲಿ ಅಥವಾ ವ್ಯೋಮಿಂಗ್ ಎಂಬಲ್ಲಿ ಇಬ್ಬರೂ ಒಟ್ಟಿಗೆ ಸೇರುವರು. ಉಳಿದಂತೆ ಅವರು ಬೇರೆಬೇರೆಯಾಗಿಯೇ ಇರುವರು. ಆಕೆ ಛಾಯಾಚಿತ್ರದಲ್ಲೂ ನುರಿತವಳು; ಆನಂದ ಕುಮಾರಸ್ವಾಮಿಯವರೂ ಛಾಯಾಚಿತ್ರದಲ್ಲಿ ವಿಶೇಷವಾದ ಆಸಕ್ತಿಯನ್ನು ತಳೆದು ಆಕೆಯ ಚಿತ್ರಗಳನ್ನು ತೆಗೆದರು.

ಆದರೆ ಮೂರನೆಯ ಮದುವೆಯೂ ಊರ್ಜಿತವಾಗಲಿಲ್ಲ. 1930 ರಲ್ಲಿ ಇವರ ದಾಂಪತ್ಯಜೀವನ ಕೊನೆಗೊಂಡು ವಿವಾಹವಿಚ್ಛೇದನವಾಯಿತು. ವಿವಾಹವಿಚ್ಛೇದದ ಕಟ್ಟಳೆ ಮುಗಿದ ತಿಂಗಳಲ್ಲೇ ಆನಂದ ಕುಮಾರಸ್ವಾಮಿ ಮತ್ತೊಬ್ಬಳನ್ನು ಮದುವೆಯಾದರು. ಸ್ಟೆಲ್ಲ ವರ್ಣಚಿತ್ರಗಾರ್ತಿಯಾಗಿ ನ್ಯೂಯಾರ್ಕಿನಲ್ಲಿ ವೃತ್ತಿಯನ್ನು ಹಿಡಿದಳು. ಆನಂದ ಕುಮಾರಸ್ವಾಮಿ ನಾಲ್ಕನೆಯ ಹೆಂಡತಿಯಿಂದ ಅವರಿಗೆ ನೆಮ್ಮದಿ ದೊರೆತಿತು; ಬದುಕಿರುವವರೆಗೂ ಆಕೆಯೊಂದಿಗೆ ಅನ್ಯೋನ್ಯವಾಗಿದ್ದರು.

ಕಾಳಿ (ಕಾಂಸ್ಯಶಿಲ್ಪ)

ಈಕೆಯ ಹೆಸರು ದೋನಾ ಲೂಯಿಸ ಎಂದು; ಅರ್ಜೆಂಟೀನಾದ ಯೆಹೂದೀ ಹಿನ್ನೆಲೆಯಿದ್ದ ಈ ಹುಡುಗಿ ಅವರ ಕೈ ಹಿಡಿದಾಗ ಇಪ್ಪತ್ತೈದು ವರ್ಷ ವಯಸ್ಸು. ಮೊದಲ ಮೂವರು ಹೆಂಡತಿಯರಂತೆ ಈಕೆಗೆ ವಿಶೇಷವಾದ ಪ್ರತಿಭೆಯೇನೂ ಇರದೆ, ಗಂಡನನ್ನು ಚೆನ್ನಾಗಿ ನೋಡಿಕೊಳ್ಳುವುದರಲ್ಲೇ ಸಂತೋಷಪಟ್ಟರು. ಬೋಸ್ಟನ್ನಿನ ಸಭ್ಯಕೂಟಗಳಲ್ಲಿ ಈಕೆಗೆ ಮನ್ನಣೆಯಿದ್ದಿತು; ಛಾಯಾಚಿತ್ರಗ್ರಹಣವೂ ಈಕೆಯ ಹವ್ಯಾಸ ಗಳಲ್ಲೊಂದಾಗಿತ್ತು, ಎರಡು ವರ್ಷಗಳ ಅನಂತರ ಅವರಿಗೆ ಮಗನೊಬ್ಬ ಹುಟ್ಟಿದ; ಹೆಸರು ರಾಮ (ಪೂರಾ ಹೆಸರು—ರಾಮ ಪೊನ್ನಂಬಲಂ ಕುಮಾರಸ್ವಾಮಿ). ಇವನು ಮುಂದೆ ವೈದ್ಯನಾಗಿ ಅಮೆರಿಕದಲ್ಲೇ ಕನೆಕ್‌ಟಿಕಟ್‌ನ ಗ್ರೀನ್‌ವಿಚ್‌ನಲ್ಲಿ ನೆಲೆಸಿದನು.

ಮಗು ಹುಟ್ಟಿದ ಮೂರು ವರ್ಷಗಳ ಮೇಲೆ ದೋನಾ ಭಾರತಕ್ಕೆ ಬಂದು ಕಾಂಗಡಿ ಗುರುಕುಲದಲ್ಲಿ ಸಂಸ್ಕೃತ ಮತ್ತು ಇತರ ಕೆಲವು ಭಾರತೀಯಭಾಷೆಗಳನ್ನು ಅಭ್ಯಾಸ ಮಾಡಿದರು. ಮುಂದೆ ಮಗ ರಾಮನೂ ಇದೇ ಗುರುಕುಲವಿದ್ಯಾಲಯದಲ್ಲಿ ಸಂಸ್ಕೃತವನ್ನು ಓದಿ, ಭಾರತೀಯಸಂಸ್ಕೃತಿಯ ಪರಿಚಯವನ್ನು ಪಡೆದನು. ಇಬ್ಬರಿಗೂ ಸಂಸ್ಕೃತವನ್ನು ಕಲಿಸಿದವರು ವಾಗೀಶ್ವರಜೀ ಎಂಬ ಪಂಡಿತರು.

ಇರಲಿ, ಆನಂದ ಕುಮಾರಸ್ವಾಮಿ ಬೋಸ್ಟನ್ನಿಗೆ ಬಂದು ವಸ್ತುಸಂಗ್ರಹಾಲಯದಲ್ಲಿ ಕೆಲಸ ಮಾಡಲು ನಿಂತ ಪ್ರಸಂಗಕ್ಕೆ ಹಿಂದಿರುಗೋಣ. 1917 ರಿಂದ ಮೂವತ್ತು ವರ್ಷಗಳವರೆಗೆ (ಎಂದರೆ, ತೀರಿಕೊಳ್ಳುವವರೆಗೆ) ಅವರು ತಮ್ಮ ಬದುಕಿನ ಗೊತ್ತು-ಗುರಿಯನ್ನು ಅರಿತುಕೊಂಡು ತಮಗೆ ಸಮಾಧಾನ ತರುವ ಕೆಲಸವನ್ನೇ ಮಾಡಿದರು. ಕಲಾಕೃತಿಗಳ ಸಂಗ್ರಹ, ವಿಂಗಡಣೆ, ವ್ಯವಸ್ಥೆ, ವಿವರಣಾತ್ಮಕವಾದ ಸೂಚಿಗಳ ಸಿದ್ಧತೆ, ಪ್ರದರ್ಶನಕ್ಕೆ ಅಣಿಮಾಡುವುದು—ಇದರಲ್ಲೇ ಮೊದಲ ವರ್ಷಗಳೆಲ್ಲ ಕಳೆದುವು. ತಮ್ಮ ಸಂಗ್ರಹದಲ್ಲಿ ಸೇರಿದ ಬೇರೆ ಬೇರೆ ಕಲಾಕೃತಿಗಳನ್ನು ತಾವೇ ಸಾವಧಾನವಾಗಿ ಅಧ್ಯಯನ ಮಾಡಿದರು. ಈ ಅಧ್ಯಯನಕ್ಕೆ ನೆರವಾಗುವಂತೆ ಹಲವಾರು ಭಾಷೆಗಳನ್ನು ಕಲಿತರು, ಸಂಸ್ಕೃತ, ಪಾಳಿ ಇತರ ಕೆಲವು ಭಾರತೀಯಭಾಷೆಗಳು ಬರುತ್ತಿದ್ದವು. ಈಗ ಅರಾಬಿಕ್, ಅವೆಸ್ತನ್, ಪರ್ಶಿಯನ್, ಗ್ರೀಕ್, ಲ್ಯಾಟಿನ್, ಫ್ರೆಂಚ್, ಇತಾಲಿಯನ್, ಸ್ಪಾನಿಷ್ ಭಾಷೆಗಳನ್ನೂ ಕಲಿತರು. ಆಯಾ ಭಾಷೆಗಳಲ್ಲಿರುವ ಗ್ರಂಥಗಳನ್ನು ಮೂಲದಲ್ಲೇ ಓದಿದರು. ಕಲೆಯಿಂದ ಕಲೆಯ ತತ್ತ್ವಚಿಂತನೆಯ ಕಡೆಗೆ ಅವರ ಮನಸ್ಸು ಹರಿಯಿತು. ಕಲೆಯ ತತ್ತ್ವಚಿಂತನೆಯಿಂದ ವೇದ-ವೇದಾಂತಗಳ ಅಧ್ಯಯನವೂ ಮೊದಲಿಟ್ಟಿತು.

ಬೋಸ್ಟನ್‌ಗೆ ಅವರು ಬರುವ ವೇಳೆಗಾಗಲೇ ಪಾಶ್ಚಾತ್ಯಸಂಸ್ಕೃತಿಯ ಬಗ್ಗೆ ಬೇಸರವನ್ನು ತಳೆದಿದ್ದರು. ನಗರಗಳ ಗೊಂದಲ-ಗದ್ದಲ ಅವರಿಗೆ ಇಷ್ಟೂ ಹಿಡಿಸು ತ್ತಿರಲಿಲ್ಲ ; ಕಾರ್ಖಾನೆ, ಸಾಮೂಹಿಕ ಉತ್ಪಾದನೆ, ದೊಡ್ಡ ದೊಡ್ಡ ಉದ್ಯಮಗಳಲ್ಲಿ ಮಾನವೀಯತೆ ಮರೆಯಾಗುವುದನ್ನು ನೋಡಿದ್ದರು; ಲೌಕಿಕವೆನಿಸುವ ಆಸಕ್ತಿ ಅವರಿಗೆ ಅಷ್ಟೇನೂ ಉಳಿದಿರಲಿಲ್ಲ. ಹೀಗಾಗಿ ತಾವಾಯಿತು, ವಸ್ತುಸಂಗ್ರಹಾಲಯವಾಯಿತು ; ಉಳಿದಂತೆ ಬದುಕು ಅವರ ಪಾಲಿಗೆ ತೀರ ಕಡಮೆಯಾಯಿತು.

ಬೋಸ್ಟನ್ ನಗರದಲ್ಲೇ ಮನೆಮಾಡದೆ, ಬೋಸ್ಟನ್ ನಗರದ ಹೊರಗೆ, ಮೂವತ್ತು ಮೈಲಿ ದೂರದಲ್ಲಿ, ಹಳ್ಳಿಯಲ್ಲಿ ಮನೆಮಾಡಿಕೊಂಡು ಇರುತ್ತಿದ್ದರು. ಅಲ್ಲಿಂದ ದಿನವೂ ಕೆಲಸಕ್ಕೆ ಬೋಸ್ಟನ್ನಿಗೆ ಬರುವುದು, ಸಂಜೆ ಹಳ್ಳಿಗೆ ಹಿಂದಿರುಗುವುದು. "ಧೂಳು ಮುಚ್ಚಿದ ಪಟ್ಟಣದಲ್ಲಿ ಯಾರೂ ಮುಕ್ತಿಯನ್ನು ಪಡೆಯಲಾರರು!" ಎಂದು ಹೇಳುತ್ತಿದ್ದರು. ಹಳ್ಳಿಯಲ್ಲಿ ಕೂಡ ಅವರದ್ದು ಹೆಚ್ಚೂ ಕಡಮೆ ವಿರಕ್ತಜೀವನವೇ. ಹೀಗಾಗಿ ಅವರನ್ನು 'ಬೋಸ್ಟನ್ ಬ್ರಾಹ್ಮಣ'ನೆಂದೇ ಜನ ಕರೆಯುತ್ತಿದ್ದರು.

ಆದರೆ 1918 ರಿಂದ ಅವರ ಕಾರ್ಯಕ್ಷೇತ್ರ ಬೋಸ್ಟನ್‌ನ ವಸ್ತುಸಂಗ್ರಹಾಲಯಕ್ಕೆ ಮಾತ್ರ ಸೀಮಿತವಾಗದೆ ಹೊರಗೆ ಹರಿಯಿತು. ಭಾರತೀಯಸಂಗೀತವನ್ನು ಕುರಿತು ಮಾತನಾಡಬೇಕೆಂದು ಯೇಲ್ ವಿಶ್ವವಿದ್ಯಾನಿಲಯದಿಂದ ಕರೆ ಬಂದಿತು (1918); ಕೇಂಬ್ರಿಜ್ ವಿಶ್ವವಿದ್ಯಾನಿಲಯದ ಫಾಗ್ ಮ್ಯೂಸಿಯಂನಲ್ಲಿ ಭಾರತೀಯಸಂಸ್ಕೃತಿಯನ್ನು ಕುರಿತು ಪ್ರವಚನಗಳು ನಡೆದುವು (1919); ಚಿಕಾಗೋ ವಿಶ್ವವಿದ್ಯಾನಿಲಯದಲ್ಲಿಯೂ, ಸ್ಮಿತ್ ಕಾಲೇಜಿನಲ್ಲಿಯೂ ಅವರ ಉಪನ್ಯಾಸಗಳು ನಡೆದುವು (1920-21); ನ್ಯೂಯಾರ್ಕ್ ವಿಶ್ವವಿದ್ಯಾನಿಲಯದ ಸ್ನಾತಕವಿಭಾಗದಲ್ಲಿ ಲಲಿತಕಲೆಗಳ ಸಂದರ್ಶಕ ಪ್ರಾಧ್ಯಾಪಕರಾಗಿ ನೇಮಕಗೊಂಡರು (1928-29); ನ್ಯೂಯಾರ್ಕ್‌ನಲ್ಲಿ 'ಭಾರತೀಯ ಸಾಂಸ್ಕೃತಿಕಕೇಂದ್ರ'ವೊಂದನ್ನೂ ವ್ಯವಸ್ಥೆ ಮಾಡಿದರು (1924).

ಈ ಅವಧಿಯಲ್ಲಿ ಅವರ ಬರವಣಿಗೆಯೂ ಅಡೆತಡೆಯಿಲ್ಲದೆ ಸಾಗಿತು. ಕಲಾಕೃತಿಗಳನ್ನು ಕುರಿತು, ಕಲೆಯನ್ನು ಕುರಿತು, ಸಂಸ್ಕೃತಿಯನ್ನು ಕುರಿತು, ತತ್ತ್ವಶಾಸ್ತ್ರದ ಸಮಸ್ಯೆಗಳನ್ನು ಕುರಿತು ಅವರು ಹಲವು ವಿವರಗಳನ್ನೂ ಹಲವಾರು ಲೇಖನಗಳನ್ನೂ ಪುಸ್ತಕಗಳನ್ನೂ ಬರೆದರು. 'ಭಾರತದ ಮತ್ತು ಇಂಡೋನೇಶಿಯ ಕಲೆ' (*History of Indian and Indonesian Art*) ಯೆಂಬ ಅವರ ಉದ್ಗ್ರಂಥ 1927 ರಲ್ಲಿ ಹೊರ ಬಂದಿತು. ಅಷ್ಟು ಸಮಗ್ರವಾದ, ಸೂಕ್ಷ್ಮವಾದ ವಿವೇಚನೆ ಆವರೆಗೆ ನಡೆದೇ ಇರಲಿಲ್ಲ. ವಾಷಿಂಗ್‌ಟನ್ನಿನ ಸ್ಮಿತ್‌ಸೋನಿಯನ್ ಸಂಸ್ಥೆ ಅವರು ಯಕ್ಷರನ್ನು ಕುರಿತು ಬರೆದ ಗ್ರಂಥವನ್ನು ಎರಡು ಸಂಪುಟಗಳಲ್ಲಿ ಪ್ರಕಟಿಸಿತು (1928-1931). ಈ ಸಮಯದಲ್ಲಿ ಅವರ ಒಟ್ಟು ಬರಹಗಳು ಮುನ್ನೂರನ್ನೂ ಮೀರಿದವು.

1928 ರಲ್ಲಿ ಅವರು ನ್ಯೂಯಾರ್ಕ್ ವಿಶ್ವವಿದ್ಯಾನಿಲಯದಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿ ನೇಮಕಗೊಂಡರು. ನವದೆಹಲಿಯ 'ಆಲ್ ಇಂಡಿಯ ಫೈನ್ ಆರ್ಟ್ಸ್ ಅಂಡ್ ಕ್ರಾಫ್ಟ್ಸ್ ಸೊಸೈಟಿ'ಯವರು 'ರೂಪಲೇಖ' ಎಂಬ ಹೆಸರಿನಿಂದ ನಿಯತಕಾಲಿಕೆಯೊಂದನ್ನು 1928 ರಲ್ಲಿ ಹೊರತರುವ ಯೋಜನೆಯೊಂದನ್ನು ಏರ್ಪಡಿಸಿ ಕೊಂಡರು. ಅದರ ಸಂಪಾದಕವರ್ಗದ ಅಧ್ಯಕ್ಷತೆಯನ್ನು ಆನಂದ ಕುಮಾರಸ್ವಾಮಿ ಯವರಿಗೆ ವಹಿಸಿಕೊಡಲಾಯಿತು. ಈ ಹೊಣೆಯನ್ನು ಅವರು 1928 ರಿಂದ 1947ರ ವರೆಗೂ ನಿರ್ವಹಿಸಿದರು.

ಬೋಸ್ಟನ್ ಬ್ರಾಹ್ಮಣ

ಬೋಸ್ಟನ್ನಿನ ವಸ್ತುಸಂಗ್ರಹಾಲಯದಲ್ಲಿ ಕೆಲಸವನ್ನು ಕೈಗೊಂಡು ಆನಂದ ಕುಮಾರ ಸ್ವಾಮಿಯವರು ಇರುತ್ತಿದ್ದ ಬಗೆಯನ್ನು ಕಂಡು, ಅವರನ್ನು ಬಲ್ಲವರೆಲ್ಲ ಅವರನ್ನು 'ಬೋಸ್ಟನ್ ಬ್ರಾಹ್ಮಣ' ಎಂದೇ ಕರೆಯುತ್ತಿದ್ದರು. ಹುಟ್ಟಿನಿಂದ ಅವರೇನೂ ಬ್ರಾಹ್ಮಣರಲ್ಲ; ವೆಲ್ಲಾಳ ಗುಂಪಿನ ಮುದಲಿಯಾರರು. ಆದರೆ ಅವರು ತಮ್ಮನ್ನು ತಾವು ಬ್ರಾಹ್ಮಣರೆಂದೇ ಬಗೆದುಕೊಂಡಿದ್ದರು. ಯಾಕೆಂದರೆ ಅವರು ಹಿಡಿದ ವೃತ್ತಿ, ಅವರ ಮನೋಧರ್ಮ, ಅವರ ಆಧ್ಯಾತ್ಮಿಕಪ್ರವೃತ್ತಿ ಇವೆಲ್ಲವೂ ಬ್ರಾಹ್ಮಣ್ಯಕ್ಕೆ ಅನುವಾಗಿಯೇ ಇದ್ದುವು. ಹೀಗಾಗಿ ಅವರು ದಿಟವಾದ ಬ್ರಾಹ್ಮಣರೇ. ಬೋಸ್ಟನ್ನಿಗೆ ಬರುವ ಮೊದಲೂ ಅವರು ಪಾಶ್ಚಾತ್ಯಸಂಸ್ಕೃತಿಯ ಹಲವು ವಿವರಗಳನ್ನು ಬಿಟ್ಟಿದ್ದರು. ಭಾರತೀಯ-ಉಡುಗೆ, ಹಣೆಯ ಮೇಲೆ ಗಂಧ, ದಿನವೂ ಸಂಸ್ಕೃತದ ಅಧ್ಯಯನ, ಅಧ್ಯಾತ್ಮಚಿಂತನ ಇವೆಲ್ಲ ಅವರ ವೈಶಿಷ್ಟ್ಯವನ್ನು ಕಾಣಿಸುತ್ತಿದ್ದುವು. ಎಳೆತನದಿಂದ ಅವರು ಸಸ್ಯಾಹಾರಿಗಳೇ; ಮದ್ಯವನ್ನು ಮುಟ್ಟುತ್ತಿರಲಿಲ್ಲ ; ಅವರದ್ದು ಸಾತ್ತ್ವಿಕಜೀವನ.

ಬೋಸ್ಟನ್ನಿಗೆ ಬಂದಮೇಲಂತೂ ಪ್ರಾಚೀನಕಾಲದ ಭಾರತೀಯಸಂಸ್ಕೃತಿಯ ಬೆಳಕಲ್ಲೇ ಅವರ ಹಗಲಿರುಳುಗಳು ಕಳೆದುವು. ವಸ್ತುಸಂಗ್ರಹಾಲಯದಲ್ಲಿ ಅವರ ಸುತ್ತ ಎಲ್ಲೆಲ್ಲೂ ಭಾರತೀಯ ಕಲಾಕೃತಿಗಳೇ. ತಮ್ಮ ಕನಸಿನ ತಾಯ್ನಾಡನ್ನು ಅಲ್ಲಿ ಸೃಷ್ಟಿಸಿಕೊಂಡಿದ್ದರು. ಅದರಲ್ಲೇ ಮೂವತ್ತು ವರ್ಷಗಳನ್ನು ತನ್ಮಯತೆಯಿಂದ ಕಳೆದರು. ಭಾರತದೇಶದಲ್ಲಿರುವವರಿಗಿಂತ ಹೆಚ್ಚಾಗಿ ಭಾರತೀಯರಾಗಿ ಬದುಕಿದರು. ಸಂಪ್ರದಾಯ ಅವರ ಪಾಲಿಗೆ ತುಂಬ ಬೆಲೆಯುಳ್ಳ ವಿವರವಾಗಿದ್ದಿತು. ಭಾರತೀಯ ಸತ್ತ್ವವಿರುವುದು ಸಂಸ್ಕೃತಿಯಲ್ಲಿ, ಸಂಸ್ಕೃತಿಯಿರುವುದು ಸಂಪ್ರದಾಯದಲ್ಲಿ ಎಂದು ಅವರ ವಿಶ್ವಾಸ. ಈ ಕಾಲದಲ್ಲಿ ಅಷ್ಟು ಸಂಪ್ರದಾಯ ನಿಷ್ಠೆಯಿಂದ, ಅದೂ ಅಮೆರಿಕದಂಥ ಪ್ರಗತಿಪರ ರಾಷ್ಟ್ರದಲ್ಲಿ ಬಾಳುವವರು ಬಹುಮಂದಿ ಇರಲಾರರು.

ಅವರು ದಿನದಿನವೂ ಬದುಕಿದ ಬಗೆಯೇ ಒಂದು ತಪಸ್ಸಿನಂತೆ. ಮುಂಜಾನೆ ಐದೂವರೆ ಗಂಟೆಗೆ ಎದ್ದು, ನಿತ್ಯಕರ್ಮಗಳನ್ನು ಮುಗಿಸಿ ಅಧ್ಯಯನಕ್ಕೆ ಕೂತರೆಂದರೆ

ಒಂಬತ್ತು ಗಂಟೆಯಾಗುವುದು. ಆಗ ಉಪಾಹಾರವನ್ನು ಮುಗಿಸಿ ಬೋಸ್ಟನ್‌ನಗರಕ್ಕೆ ಕೆಲಸದ ಮೇಲೆ ಹೊರಡುವರು. ಅಲ್ಲಿ ಸಂಜೆ ನಾಲ್ಕೂವರೆ ಗಂಟೆಯವರೆಗೆ ವಸ್ತುಸಂಗ್ರಹಾಲಯದಲ್ಲಿರುವರು; ಆಗಲೂ ಬಹುಕಾಲ ಓದು, ಬರಹಗಳಲ್ಲೇ ಕಳೆಯುವುದು. ಸಂಜೆ ಮತ್ತೆ ತಮ್ಮ ಹಳ್ಳಿಯ ಮನೆಗೆ ಮರಳಿ, ಕೊಂಚ ಕಾಲವನ್ನು ತೋಟದಲ್ಲಿ ಕಳೆಯುವರು. ತೋಟಗಾರಿಕೆ ಅವರ ಮೆಚ್ಚಿನ ಹವ್ಯಾಸ. ಅದನ್ನು ಮುಗಿಸಿ ರಾತ್ರಿಯಾಯಿತೆಂದರೆ 7-30 ಗಂಟೆಗೆ ಮತ್ತೆ ಅಧ್ಯಯನ, ಬರಹ; ಇದು ಸುಮಾರು 10 ಗಂಟೆಯವರೆಗೆ ಸಾಗುವುದು, ತಮ್ಮ ಬರಹವನ್ನು ತಾವೇ ಟೈಪ್ ಮಾಡುವರು, ಆಮೇಲೆ ವಿಶ್ರಾಂತಿ.

ಕೆಲಸಕ್ಕೆಂದು ಯಾವ ಆಳುಗಳನ್ನೂ ಇರಿಸಿಕೊಂಡಿರಲಿಲ್ಲವಾಗಿ, ಮನೆಯ ಎಲ್ಲ ಕೆಲಸಗಳನ್ನೂ ತಾವು, ತಮ್ಮ ಹೆಂಡತಿ ದೋನಾ ಇಬ್ಬರೇ ನೋಡಿಕೊಳ್ಳುವರು. ಗಂಡನನ್ನು ಬೋಸ್ಟನ್ನಿಗೆ ಕಾರಿನಲ್ಲಿ ಕರೆದೊಯ್ಯುವುದು, ಸಂಜೆ ಮನೆಗೆ ಕರೆದುಕೊಂಡು ಬರುವುದು ಹೆಂಡತಿಯ ಕೆಲಸವೇ. ವಿದ್ಯಾರ್ಥಿಗಳು, ಸಂಶೋಧಕರು, ಮಿತ್ರರು ಮನೆಗೆ ಬರುತ್ತಲೇ ಇರುವರು. ಗಂಡ ಬಹುವೇಳೆ ತನ್ನ ಕೆಲಸದಲ್ಲೇ ತೊಡಗಿರುವಾಗ ಇವರ ಉಪಚಾರವೆಲ್ಲ ಹೆಂಡತಿಯ ಕೆಲಸವೇ! ಗಂಡನೊಂದಿಗೆ ಒಡನಾಡಿ ಆಕೆಗೂ ಭಾರತ ಸಂಸ್ಕೃತಿಯ ಮುಖ್ಯ ವಿವರಗಳೆಲ್ಲ ಮನದಟ್ಟಾಗಿದ್ದುವು; ಕಲೆಯನ್ನು ಕುರಿತು ದಿಟವಾದ ಆಸಕ್ತಿ ಬೆಳೆದಿದ್ದಿತು; ಸಂಸ್ಕೃತವನ್ನೂ ಕಲಿತಿದ್ದರು. ಹೀಗಾಗಿ ದೋನಾ-ಆನಂದ ಕುಮಾರಸ್ವಾಮಿಯವರದ್ದು ಅನುರೂಪ ಮತ್ತು ಅನುಕೂಲದಾಂಪತ್ಯವಾಗಿದ್ದಿತು.

1932 ರಿಂದ ಮುಂದೆ ಆನಂದ ಕುಮಾರಸ್ವಾಮಿಯವರ ಆಸಕ್ತಿ ವೇದದ ಕಡೆ ತಿರುಗಿತು. ಅಂದಿನಿಂದ ಅವರು ಕಡೆಯುಸಿರು ಎಳೆಯುವವರೆಗೂ ಭಾರತ ಸಂಸ್ಕೃತಿಯ ಮೂಲವಾಙ್ಮಯವಾದ ವೇದದ ಅರ್ಥವನ್ನು ಅನುಸಂಧಾನ ಮಾಡುತ್ತಲೇ ಇದ್ದರು. 1933 ರಂದು ಅವರ 'ವೇದಗಳ ಅರ್ಥನಿಶ್ಚಯಕ್ಕೊಂದು ಹೊಸ ದಾರಿ' (*A New Approach to the Vedas*) ಎಂಬ ಗ್ರಂಥ ಪ್ರಕಟವಾಯಿತು. ವೇದದಿಂದ ಹೊರಹೊಮ್ಮುವ ತಾತ್ತ್ವಿಕ ನಿಲುವನ್ನು ಅವರು 'ಸನಾತನ ಧರ್ಮ' (ಫಿಲೊಸೊಫಿಯ ಪೆರಿನಿಸ್) ಎಂದೇ ಗುರುತಿಸಿದರು. 'ವೈದಿಕ ಪರಂಪರೆ' ಎಂಬ ಇನ್ನೊಂದು ಗ್ರಂಥವನ್ನೂ ಬರೆದರು; 'ವೇದದ ಆಧ್ಯಾತ್ಮಿಕ ವಿಕಾಸ' ಎಂಬ ಮತ್ತೊಂದು ಗ್ರಂಥವೂ ಹೊರ ಬಂದಿತು. ಅವರ ಕಟ್ಟಕಡೆಯ ಗ್ರಂಥ 'ಕಾಲ ಮತ್ತು ಅನಂತ' (*Time and Eternity*) ಎನ್ನುವುದೂ ವೇದದ ಅರ್ಥನಿಶ್ಚಯಕ್ಕೆ ಸಂಬಂಧಿಸಿದುದೇ. ಇದೇ ಕಾಲದಲ್ಲಿ (1935 ರಲ್ಲಿ) ಬೌದ್ಧಮೂರ್ತಿ ಶಿಲ್ಪದ ಮೇಲೆ ಉದ್ಗ್ರಂಥವೊಂದೂ (*Elements of Buddhist Iconography*) ಅವರಿಂದ ಹೊರಬಂದಿತು.

ವೈದಿಕವಾಙ್ಮಯದಲ್ಲಿ ಬರುವ ವಿಷ್ಣುಪಾದವೆ ('ತದ್ ವಿಷ್ಣೋಃ ಪರಮಂ ಪದಂ') ಮುಂದೆ ಬುದ್ಧನ ಪಾದಗಳು, ಬುದ್ಧನ ಮೂರ್ತಿಶಿಲ್ಪ ಮುಂತಾದವುಗಳಿಗೆ ಹಿನ್ನೆಲೆ ಎಂಬುದನ್ನು ಅವರು ಗುರುತಿಸಿದರು. ಪಾದವೆಂದರೆ ಭೂಮಿಯ ಮೇಲೆ ಭಗವಂತನ

ಇರವನ್ನು ತೋರಿಸುವ ಸಂಕೇತ. ಅವನು ಹಿಂದೊಮ್ಮೆ ಇಲ್ಲಿ ನಡೆದುದನ್ನು ನಮ್ಮ ನೆನಪಿನಲ್ಲಿ ಉಳಿಸಿಕೊಳ್ಳುವ ಸಾಧನ ('ವೆಸ್ಟೀಜಿಯಂ ಪೆಡಿಸ್') ಎಂಬುದನ್ನೂ, ಭಗವಂತನು ತೋರಿಸಿದ ಮಾರ್ಗವೇ ಅದು, ತಾನೇ ನಡೆದ ದಾರಿಯ ಹೆಗ್ಗುರುತು ಎಂಬುದನ್ನೂ ಅವರು ಕಾಣಿಸಿದರು. ಇದೊಂದು ಮೂಲಭೂತವಾದ ಸಂಶೋಧನೆ.

ಹೀಗೆ ಆನಂದ ಕುಮಾರಸ್ವಾಮಿಯವರ ಬದುಕಿನಲ್ಲಿ ಅಧ್ಯಯನ, ಅಧ್ಯಾಪನ, ಬರಹ, ಏಕಾಂತ, ತಪಸ್ಸು, ಸಂಪ್ರದಾಯನಿಷ್ಠೆ, ಸರಳಜೀವನ ಇವೇ ಎದ್ದುಕಾಣುತ್ತಿದ್ದ ವಿವರಗಳು. ಪರಂಪರೆಯ ಮೌಲ್ಯಗಳನ್ನೇ ನಂಬಿ, ಹೊರಗಣ ಯಾವ ಪ್ರಲೋಭನೆಗೂ ಪಕ್ಕಾಗದೆ, ಎಚ್ಚರದ ಗಳಿಗೆಗಳಿಗೆಯಲ್ಲೂ ಆಧ್ಯಾತ್ಮದ ಚಿಂತನೆಯಲ್ಲೇ ತೊಡಗಿದ್ದ ಜೀವ ಅದು. ಬೌದ್ಧಧರ್ಮ, ಹಿಂದೂಧರ್ಮ, ಜೈನಧರ್ಮಗಳಲ್ಲಿ ಅವರ ಅಧ್ಯಯನ ಆಳವಾದುದು. ತಂದೆಯಿಂದ ಬಳುವಳಿಯಾಗಿ ಪಡೆದ ಶೈವಸಿದ್ಧಾಂತದ ಪರಿಚಯವೂ

ಆದಿಮೂರ್ತಿ (ಚಾಲುಕ್ಯಶಿಲ್ಪ)

ಅವರಿಗೆ ಚೆನ್ನಾಗಿದ್ದಿತು; ತೇವಾರಂಗಳು, ತಿರುವಾಚಕಂ, ತಾಯುಮಾನವರ್, ಶಿವಜ್ಞಾನಬೋಧಂ—ಈ ಗ್ರಂಥಗಳನ್ನು ಅವರು ಮತ್ತೆ ಮತ್ತೆ ಓದುತ್ತಿದ್ದರು. ತಮ್ಮ ತೌರೂರಾದ ಚಿದಂಬರದ (ಪೊನ್ನಂಬಲಂ) ನಟರಾಜ ವಿಗ್ರಹದ ಸ್ವಾರಸ್ಯವನ್ನು, ಸಂಕೇತವನ್ನು ಜಗತ್ತಿಗೆ ತಿಳಿಯಪಡಿಸಿದರು.

ಅವರ ಬರಹಗಳಲ್ಲಿ ಇಪ್ಪತ್ತಕ್ಕಿಂತ ಮಿಕ್ಕು ಉದ್ಗ್ರಂಥಗಳು; ಐನೂರಕ್ಕಿಂತ ಹೆಚ್ಚು ಮಹಾಪ್ರಬಂಧಗಳು. ಸಾಮಾನ್ಯ ಜನರಿಗೆಂದು ಅವರು ಏನನ್ನೂ ಬರೆಯಲಿಲ್ಲ. ಅವರು ಕೈಗೊಂಡ ಕೆಲಸವನ್ನು ಅವರೇ ಹೇಳಿದ್ದಾರೆ—"ಹಲವರು ತಾವೇ ವಿದ್ವಾಂಸರೆಂದುಕೊಂಡು ನಮ್ಮ ಸಂಸ್ಕೃತಿಯನ್ನು ಚೆನ್ನಾಗಿ ಅರಿತುಕೊಳ್ಳದೆ, ನಮ್ಮ ಧರ್ಮ, ಕಲೆ

ಮೊದಲಾದ ವಿವರಗಳನ್ನು ಆಳವಾಗಿ ಅರಿಯದೆ ಮೇಲೆ ಮೇಲೆ ಮಾತ್ರ ತಿಳಿದುಕೊಂಡು, ಅಪಾರ್ಥ ಕಲ್ಪಿಸುತ್ತಿದ್ದಾರೆ; ಪರಂಪರೆಯಿಂದ ಬಂದ ಮೌಲ್ಯಗಳನ್ನು ತಿರಸ್ಕರಿಸುತ್ತಿದ್ದಾರೆ. ಇಂಥವರು ದೊಡ್ಡದೊಡ್ಡ ಹುದ್ದೆಗಳಲ್ಲಿದ್ದು, ಅವರ ಮಾತೇ ಪ್ರಮಾಣವೆಂದು ಇತರರು ನಂಬುವಂತಾಗಿದೆ. ಅವರ ಬರಹಗಳನ್ನು ಆಧರಿಸಿಯೇ ಶಾಲಾ ಕಾಲೇಜುಗಳ ಪಠ್ಯಪುಸ್ತಕಗಳು ಸಿದ್ಧವಾಗುತ್ತಿವೆ. ಹೀಗಾಗಿ ಭಾರತೀಯ ಸಂಸ್ಕೃತಿಯ ಸತ್ತ್ವವೇ ಜನರ ಗಮನದಿಂದ ದೂರವಾಗತೊಡಗಿದೆ. ಇದನ್ನು ತಡೆಗಟ್ಟುವುದು ನನ್ನ ಕರ್ತವ್ಯವೆಂದು ಭಾವಿಸಿದ್ದೇನೆ. ಆದುದರಿಂದಲೇ ನನ್ನ ಬರಹಗಳನ್ನು ವಿಶ್ವವಿದ್ಯಾನಿಲಯಗಳ ಪ್ರಾಧ್ಯಾಪಕರು, ತಜ್ಞರು ಇವರನ್ನೇ ದೃಷ್ಟಿಯಲ್ಲಿರಿಸಿಕೊಂಡು ಬರೆಯುತ್ತಲಿದ್ದೇನೆ". ಪಾಶ್ಚಾತ್ಯವಿದ್ವಾಂಸರು ಭಾರತೀಯಧರ್ಮ, ದರ್ಶನಗಳ ವಿಚಾರವಾಗಿ ಬರೆದಿರುವುದು ಅವರ ಮನಸ್ಸಿಗೆ ಏನೇನೂ ಹಿಡಿಸಲಿಲ್ಲ. ಸಂಸ್ಕೃತಭಾಷೆ ತಿಳಿದಿದ್ದ ಮಾತ್ರಕ್ಕೆ ಭಾರತೀಯದರ್ಶನಗಳು ಅರ್ಥವಾಗುವುದಿಲ್ಲ, ಸಾಂಪ್ರದಾಯಕವಾದ ಶಿಕ್ಷಣ ಅಗತ್ಯ ಎಂದು ಅವರು ಮತ್ತೆ ಮತ್ತೆ ಹೇಳುತ್ತಿದ್ದರು.

ಆನಂದ ಕುಮಾರಸ್ವಾಮಿಯವರು ತಮ್ಮ ಬದುಕಿನುದ್ದಕ್ಕೂ ಬರೆದ ಬರಹಗಳಲ್ಲಿ ಮೊದಲ ಮೂವತ್ತು ಪ್ರಬಂಧಗಳು ಭೂವಿಜ್ಞಾನವನ್ನು ಕುರಿತವು. ಮುಂದೆ ಅವರ ಬರಹಗಳು ಕುಶಲಕಲೆ, ಲಲಿತಕಲೆ, ಸ್ವದೇಶೀ, ಭಾರತೀಯತೆ, ರಾಷ್ಟ್ರೀಯತೆ ಇವನ್ನು ವಿಷಯವಾಗಿ ಆಯ್ದುಕೊಂಡವು. ಬೋಸ್ಟನ್ನಿಗೆ ಬಂದ ಮೇಲೆ ಕಲಾದರ್ಶನ, ತತ್ತ್ವಶಾಸ್ತ್ರ, ವೇದಾಂತ, ಬೌದ್ಧಧರ್ಮ, ವೇದ ಇವು ಅವರ ಬರಹಗಳ ಮುಖ್ಯ ವಿಷಯಗಳಾದುವು. 'ಬ್ರಿಟನ್ನಿನ ವಿಶ್ವಕೋಶ' ('ಎನ್‌ಸೈಕ್ಲೋಪೀಡಿಯ ಬ್ರಿಟಾನಿಕ') ದಂಥ ಜಗತ್ಪ್ರಸಿದ್ಧ ಪ್ರಕಾಶನ-ಸಂಸ್ಥೆ ಇವರನ್ನು ಭಾರತ, ಸಿಂಹಳ, ಇಂಡೋನೋಶಿಯದೇಶಗಳ ಕಲೆಯ ವಿಚಾರವಾಗಿ ಬರೆಯಲು ಕೇಳಿಕೊಂಡಿತು. 'ಅಮೆರಿಕದ ರಾಷ್ಟ್ರೀಯ ವಿಶ್ವಕೋಶ' ('ನ್ಯಾಶನಲ್ ಎನ್‌ಸೈಕ್ಲೋಪೀಡಿಯ ಆಫ್ ಅಮೆರಿಕ') ಇವರ ಲೇಖನಗಳನ್ನು ತನ್ನ ಸಂಪುಟಗಳಲ್ಲಿ ಪ್ರಕಾಶಿಸಿತು. 'ವೆಬ್‌ಸ್ಟರ್' ಹೆಸರಿನ ನವ್ಯ ಅಂತರರಾಷ್ಟ್ರೀಯ ಪದಕೋಶ ('ನ್ಯೂ ಇಂಟರ್‌ನ್ಯಾಷನಲ್ ಡಿಕ್ಷನರಿ') ದಲ್ಲಿ ಭಾರತೀಯ ಮೂಲದ ಪದಗಳನ್ನು ಸಿದ್ಧಪಡಿಸುವ ಕೆಲಸವನ್ನು ಇವರೇ ನಿರ್ವಹಿಸಿದರು.

ಸಂಧ್ಯಾತಾಂಡವ

ಇವರ ನಿಕಟಸಂಪರ್ಕವನ್ನು ತಳೆದಿದ್ದವರಲ್ಲಿ ಸುಪ್ರಸಿದ್ಧ ಮನೋವಿಜ್ಞಾನಿ ಕಾರ್ಲ್ ಯೊಂಗ್, ಪ್ರಖ್ಯಾತ ಕಲಾವಿದ ಎರಿಕ್ ಗಿಲ್, ಹಾರ್‌ವರ್ಡ್ ವಿಶ್ವವಿದ್ಯಾನಿಲಯದ ಬೆಂಜಮಿನ್ ರೊಲಾಂಡ್ ಮತ್ತು ಎರಿಕ್ ಶ್ರೊಯ್ ಡರ್, ಮೇಯರ್

ಶಪಿರೋ, ವಿ. ನಾರ್ಮನ್ ಬ್ರೌನ್, ಹೆರ್ಮನ್ ಗೋಎಟ್ಜ್, ರಿಚರ್ಡ್ ಎಟ್ಟಿಂಗ್ ಹೌಸೆನ್ ಮುಂತಾದವರಿದ್ದರು.

ಮ್ಯೂಸಿಯಂನ ಸಂರಕ್ಷಕ (ಕೀಪರ್, ಕ್ಯುರೇಟರ್), ವಿದ್ವಾಂಸ, ಕಲಾವಿಮರ್ಶಕ, ದಾರ್ಶನಿಕ, ಲೇಖಕ ಎಂದಷ್ಟೇ ಅವರ ಖ್ಯಾತಿಯಲ್ಲ. ಅವರು ರೇಖಾಚಿತ್ರಗಳನ್ನು ಸೊಗಸಾಗಿ ಬರೆಯುತ್ತಿದ್ದರು; ತಮ್ಮ ಲೇಖನಗಳಿಗೆ, ಪುಸ್ತಕಗಳಿಗೆ ಅಗತ್ಯವಾದ ರೇಖಾಚಿತ್ರಗಳನ್ನು ತಾವೇ ಸಿದ್ಧಪಡಿಸುವ ವಾಡಿಕೆಯೂ ಇದ್ದಿತು. '28 ಚಿತ್ರಗಳು' (*Twenty-eight Drawings*) ಎಂಬ ಪುಸ್ತಕವೂ ಅವರದ್ದೊಂದು ಪ್ರಕಟವಾಯಿತು. ಛಾಯಾಚಿತ್ರ (ಫೋಟಾಗ್ರಫಿ) ಅವರ ಪ್ರೀತಿಯ ಹವ್ಯಾಸಗಳಲ್ಲೊಂದು; ಅವರು ತೆಗೆದ ಚಿತ್ರಗಳು ಒಂದೊಂದೂ ಕಲಾತ್ಮಕವಾಗಿರುತ್ತಿದ್ದುವು. ಅಷ್ಟು ಮಾತ್ರವಲ್ಲ, ಅವರು ಇಂಗ್ಲಿಷಿನಲ್ಲಿ ಕವಿತೆಗಳನ್ನು ಬರೆಯುತ್ತಿದ್ದರು. ಅವರದ್ದೊಂದು ಕವನಸಂಗ್ರಹಕ್ಕೆ (ಮೂರು ಕವನಗಳು) (*Three Poems*) ಎರಿಕ್ ಗಿಲ್ ಎಂಬ ಪ್ರತಿಭಾನ್ವಿತ ಪ್ರಖ್ಯಾತ ಕಲಾವಿದ ಚಿತ್ರಗಳನ್ನು ಬರೆದಿದ್ದಾನೆ.

ಇಂಗ್ಲೆಂಡಿನಲ್ಲಿ ತಮ್ಮ ಗ್ರಂಥಗಳನ್ನು ಪ್ರಕಟಿಸಲು ತಮ್ಮದೇ ಒಂದು ಅಚ್ಚುಕೂಟವನ್ನೂ ಏರ್ಪಡಿಸಿಕೊಂಡಿದ್ದರು. ತೋಟಗಾರಿಕೆ ಎಂದರೆ ಅವರಿಗೆ ತುಂಬ ಆಸಕ್ತಿ. ಇವರ ಇನ್ನೊಂದು ಆಸಕ್ತಿಯೆಂದರೆ ಮೀನು ಹಿಡಿಯುವುದು. ಇದು ಅವರನ್ನು ಬಲ್ಲವರಿಗೆ ವಿಚಿತ್ರವೆನಿಸಿತು. ಸಸ್ಯಾಹಾರಿಯಾದರೂ, ಬೌದ್ಧಧರ್ಮದಲ್ಲಿ ಉತ್ಸುಕರಾದರೂ, ವೈದಿಕಸಂಪ್ರದಾಯದಲ್ಲಿ ಶ್ರದ್ಧೆಯುಳ್ಳವರಾದರೂ ಈ ಹವ್ಯಾಸವನ್ನೇಕೆ ಹಿಡಿದರು? ಅದರಿಂದ ಮನಸ್ಸಿಗೆ ಕೊಂಚ ಕಾಲವಾದರೂ ನೆಮ್ಮದಿ ದೊರೆಯುವುದೆಂದು ಅವರ ಎಣಿಕೆ! ನಾಯಿಗಳೆಂದರೆ ಅವರಿಗೆ ಎಳವೆಯಿಂದಲೂ ಪ್ರೀತಿ;

ಸದಾಶಿವ (ಮಧುಕೇಶ್ವರದೇವಾಲಯದ ಉತ್ಸವಮೂರ್ತಿ, ಬನವಾಸಿ)

ಬೋಸ್ಟನ್ನಿನಲ್ಲಿಯೂ ಅವರೊಂದಿಗೆ ನಾಯಿ ಇರುತ್ತಲೇ ಇದ್ದಿತು. ದಿನವೂ ಅವರು ಸಂಗ್ರಹಾಲಯಕ್ಕೆ ಬರುವಾಗ ನಾಯಿ ಅವರೊಂದಿಗೆ ಬರುವುದು. ಸಂಜೆ ಅವರು ಹಿಂದಿರುಗುವವರೆಗೂ ಅವರ ಕೋಣೆಯಲ್ಲೇ ಅವರೆದುರು ಕೂತಿರುವುದು, ಚಡಪಡಿಸುತ್ತಿರಲಿಲ್ಲ!

ಬಾಲಕೃಷ್ಣ (ಮೈಸೂರು ಅರಮನೆಯಲ್ಲಿ ದಂತದ ದ್ವಾರಶಿಲ್ಪ)

ಅವರ ಆಕೃತಿಯೂ ಭವ್ಯವಾದುದು. ನಸುಗೆಂಪು ಮೈಬಣ್ಣ, ಎತ್ತರದ ಆಳು, ತೆಳುವಾದ ಮೈ, ಬಾಗಿದ ಮೂಗು, ಚುರುಕಾದ ಕಣ್ಣುಗಳು, ನೀಳವಾದ ತಲೆಗೂದಲು, 1940 ರಲ್ಲಿ ಅವರಿಗೆ ವಾಯುಬೇನೆ ಬಡಿದ ಮೇಲೆ ಸಣ್ಣದಾದ ಗಡ್ಡವನ್ನು ಬೆಳೆಸಿದ್ದರು; ಅದು ಕುರುಚಲಾಗಿತ್ತೇ ವಿನಾ ಸುಂದರವಾಗಿರಲಿಲ್ಲ! ಇದೊಂದು ಬೇನೆಯನ್ನು ಬಿಟ್ಟರೆ, ಉಳಿದಂತೆ ಅವರು ದೃಢಕಾಯರಾಗಿಯೇ ಇದ್ದರು. ಯಾವ ರೋಗದಿಂದಲೂ ನರಳಲಿಲ್ಲ ; ಸಾಯುವ ಮೊದಲೂ ಹಾಸಿಗೆ ಹಿಡಿಯಲಿಲ್ಲ.

ಅವರಲ್ಲಿ ಆತ್ಮವಿಶ್ವಾಸ ಬಲವಾಗಿದ್ದಿತು. ಆದರೆ ತಮ್ಮ ಹಿರಿಮೆಯನ್ನು ತಾವು ಅರಿತಿರದಂತೆಯೇ ಇರುತ್ತಿದ್ದರು. ಯಾರ ಮನಸ್ಸನ್ನೂ ನೋಯಿಸುವ ಸ್ವಭಾವವಲ್ಲ ಅವರದ್ದು; ಜೀವಕಾರುಣ್ಯ ಅವರ ಗುಣಗಳಲ್ಲಿ ಎದ್ದುಕಾಣುತ್ತಿತ್ತು. ಅವರ ಸಂವೇದನೆ ಸೂಕ್ಷ್ಮವಾಗಿದ್ದು, ಬೇರೆಯವರ ಇಂಗಿತಗಳನ್ನು ಬೇಗನೆ ಅರಿತುಕೊಳ್ಳುತ್ತಿದ್ದರು. ಅವರ ಅಭಿಪ್ರಾಯಗಳೇನೋ ಖಚಿತವಾದುವೇ; ಸಾಕಷ್ಟು ಸಮರ್ಥನೆಯಿಲ್ಲದಿದ್ದರೆ ಬೇರೆಯವರ ವಾದಕ್ಕೆ ಮಣಿಯುತ್ತಿರಲಿಲ್ಲ. ನಿದರ್ಶನಕ್ಕೆ, ಆಗ ಪ್ರಸಿದ್ಧನಾಗಿದ್ದ ರಾಜಾ ರವಿವರ್ಮನ ಚಿತ್ರಗಳನ್ನು "ಹೇಯ" ('ವಲ್ಗರ್') ಎಂದು ಕರೆಯಲು ಅವರು ಹಿಂಜರಿಯಲಿಲ್ಲ. ಆ ಕಲಾವಿದನ ಸ್ಫೂರ್ತಿ ಪಾಶ್ಚಾತ್ಯಶೈಲಿಯೇ ಎಂದು ಅವನ ಕೃತಿಗಳನ್ನು 'ಅಭಾರತೀಯ'ವೆಂದು ಖಂಡಿಸಿದರು.

ಅವರು 1907ರ ಆಗಸ್ಟ್‌ನಲ್ಲಿ 'ಮಾಡರ್ನ್ ರೇವ್ಯೂ' ಪತ್ರಿಕೆಯಲ್ಲಿ ಬರೆದ ಲೇಖನವೊಂದರಲ್ಲಿ ರವಿವರ್ಮನ ವಿಚಾರವಾಗಿ ಬರೆಯುತ್ತ—

"He is the landmark of a great opportunity not wholly missed, but ill-availed of. Theatrical conceptions, want of imagination and lack of Indian feeling in the treatment of sacred and epic Indian subjects, are Ravi Varma's fatal faults. No offence can be greater than the treatment of serious or epic subjects without dignity; and Ravi Varma's Gods and heroes are men cast in a very common mould who find themselves in situations for which they have not a proper capacity. Unforgivable too is the lack of a spontaneous expression of individual or national idiosyncracy; for his pictures are such as any European student can paint after perusal of the necessary literature and a superficial study of Indian life".

(ಒದಗಿಬಂದ ದೊಡ್ಡದೊಂದು ಅವಕಾಶವನ್ನು ಪೂರಾ ಕಳೆದುಕೊಳ್ಳದಿದ್ದರೂ ಸರಿಯಾಗಿ ಉಪಯೋಗಿಸಿಕೊಳ್ಳಲಿಲ್ಲ ಎಂಬುದು ರವಿವರ್ಮನಲ್ಲಿ ಕಾಣುವ ಒಂದು ವಿವರ. ಇದಕ್ಕೆ ಕಾರಣ ಅವನ ಕಲ್ಪನೆಯ ಅಭಾವ, ಭಾರತೀಯ ಪವಿತ್ರ ಮತ್ತು ಪೌರಾಣಿಕವಸ್ತುಗಳ ನಿರೂಪಣೆಯಲ್ಲಿ ಅವನಿಗೆ ದಿಟವಾದ ಅಭಿಮಾನ ವಿಲ್ಲದಿದ್ದುದು. ಗಂಭೀರವಾದ ಅಥವಾ ಪುರಾಣಪ್ರಸಕ್ತಿಯ ವಿಚಾರಗಳನ್ನು ಗಂಭೀರವಲ್ಲದ ರೀತಿಯಲ್ಲಿ ಚಿತ್ರಿಸಿದರೆ ಅದಕ್ಕಿಂತ ದೊಡ್ಡ ಅಪಚಾರವುಂಟೆ? ರವಿವರ್ಮನ ಚಿತ್ರಗಳಲ್ಲಿ ದೇವತೆಗಳೂ ನಾಯಕರೂ ತಮ್ಮ ಸಾಮರ್ಥ್ಯದಿಂದ ನಿರ್ವಹಿಸಲಾರದ ಸಂದರ್ಭಗಳಲ್ಲಿ ಸಿಲುಕಿಕೊಂಡ ಸಾಮಾನ್ಯಮನುಷ್ಯರಂತೆ ಕಾಣುತ್ತಾರೆ, ವೈಯಕ್ತಿಕ ಅಥವಾ ರಾಷ್ಟ್ರೀಯ ವೈಶಿಷ್ಟ್ಯವನ್ನು ತಾನಾಗಿ ಅಭಿವ್ಯಕ್ತಿ ಗೊಳಿಸುವುದೂ ಆತನ ಕೃತಿಗಳಲ್ಲಿ ಕಾಣಬರದೆ ಇರುವುದೊಂದು ದೊಡ್ಡ ದೋಷ; ಅಕ್ಷಮ್ಯ ಅಪರಾಧವೆನ್ನಬಹುದು. ಅವನ ಚಿತ್ರಗಳನ್ನು ನೋಡಿದರೆ ಯಾವ ಐರೋಪ್ಯವಿದ್ಯಾರ್ಥಿಯಾಗಲಿ ಅಗತ್ಯವಾದ ಸಾಹಿತ್ಯಕಮಾಹಿತಿಯನ್ನು ಪಡೆದು ಕೊಂಡು ಭಾರತೀಯಬದುಕನ್ನು ಮೇಲೆಮೇಲಷ್ಟೆ ಅರಿತುಕೊಂಡು, ಇಂಥ ಚಿತ್ರಗಳನ್ನು ರಚಿಸಿಯಾನು ಎನಿಸುತ್ತದೆ.)

ನಟರಾಜನ ಕುಣಿತ ಕೊನೆಗೊಂಡಿತು

ಆನಂದ ಕುಮಾರಸ್ವಾಮಿಯವರ ಗ್ರಂಥಗಳಲ್ಲಿ ಜನಪ್ರಿಯವಾದುದು 1918 ರಲ್ಲಿ ಪ್ರಕಟವಾದ 'ಶಿವತಾಂಡವ' (*Dance of Shiva*) ಎಂಬ ಹದಿನಾಲ್ಕು ಪ್ರಬಂಧಗಳ ಸಂಕಲನ. ಅವರ ತಂದೆಯ ಕಡೆಯಿಂದ ಶಿವತಾಂಡವದ ಪ್ರತೀಕವಾದ ನಟರಾಜ ಮನೆದೇವರು; ಮೊದಲಿಗೆ ಇವರೆಲ್ಲ ಚಿದಂಬರದವರು; ಅಲ್ಲಿನ 'ಕನಕಸಭೆ'ಯ ಹೆಸರನ್ನೇ ಹಿಡಿದು 'ಪೊನ್ನಂಬಲಂ' ಎಂದು ಹೆಸರನ್ನು ತಳೆದವರು. ಆನಂದ ಕುಮಾರಸ್ವಾಮಿಯವರ ಮಗನ ಹೆಸರಿನಲ್ಲೂ 'ಪೊನ್ನಂಬಲಂ' ಬಂದಿತು. ಇರಲಿ, ಈ ಪುಸ್ತಕ ಹಲವು ಬಾರಿ ಪುನರ್ಮುದ್ರಣವನ್ನು ಕಂಡಿತು. ಅದರ ಕಡೆಯ ಮುದ್ರಣ ಆನಂದ ಕುಮಾರಸ್ವಾಮಿಯವರ ಬದುಕಿನ ಕಡೆಯ ಘಟ್ಟದಲ್ಲಿ ಎಂದರೆ, ಅವರು ಬದುಕಿದ್ದ ಕಡೆಯ ದಿನ ಸಿದ್ಧವಾಯಿತು. ಇದರ ಕರಡಚ್ಚನ್ನು ನೋಡಿ ಮುಗಿಸಿದಾಗ ಅವರು, "ಇನ್ನು ನನ್ನ ಶಿವಕುಣಿತ ಮುಗಿಯಿತು" ಎಂದು ಹೇಳಿದರಂತೆ. ಅವರ ಬದುಕೇ ಒಂದು ಶಿವತಾಂಡವ. ಅದು ಮುಗಿಯುತ್ತ ಬಂದಿತೆಂಬ ಅರಿವು ಅವರಿಗಿದ್ದಿತು.

ನಟರಾಜ

1939 ರಲ್ಲಿ ಅವರ ಆರೋಗ್ಯ ಕೊಂಚ ಕೆಟ್ಟಿತು. ಬೇಗನೆ ಚೇತರಿಸಿಕೊಂಡರೂ ಮನೋವೃತ್ತಿಯೇನೋ ಬದಲಾಯಿಸಿಬಿಟ್ಟಿತು. ಅಲ್ಲಿಂದ ಮುಂದೆ ಇದ್ದಕ್ಕಿದ್ದಂತೆ ತೀರ ಮುಪ್ಪಡರಿದವರಂತೆ ಕಾಣತೊಡಗಿದರು. "ಇಲ್ಲಿಯವರೆಗೆ ಬದುಕಿನ ಬಗ್ಗೆ, ಸಾವಿನ ಬಗ್ಗೆ, ಮುಕ್ತಿಯ ಬಗ್ಗೆ ಓದಿದ್ದೇನೆ, ಆಲೋಚಿಸಿದ್ದೇನೆ, ಬರೆದಿದ್ದೇನೆ. ಆದರೆ ಮನುಷ್ಯನ ಚರಮಪುರುಷಾರ್ಥವನ್ನು ನೇರವಾಗಿ ಸಾಕ್ಷಾತ್ಕರಿಸಿಕೊಳ್ಳುವುದಿನ್ನೂ ಆಗಿಲ್ಲ. ಅದಕ್ಕೆ ಸಾಧನೆ ಮಾಡಬೇಕು" ಎಂಬ ಹಂಬಲ ಅವರಲ್ಲಿ ಮೂಡಿತು. ಅವರು ತಮ್ಮ ಮಿತ್ರರಿಗೆ ಬರೆದ ಪತ್ರಗಳಲ್ಲಿ ಇದನ್ನು ಆಗಾಗ ಕಾಣಿಸುತ್ತಿದ್ದರು.

1945 ರಲ್ಲಿ ತಮ್ಮ ಮೊದಲ ಹೆಂಡತಿ ಎತೆಲ್ ಮೈರೆಗೆ ಬರೆದ ಪತ್ರವೊಂದರಲ್ಲಿ "ಇನ್ನೂ ಹಲವು ವರ್ಷಗಳು ಬದುಕಿರುವೆನೆಂಬ ವಿಶ್ವಾಸವಿದೆ: ಆದರೆ ನನಗೆ ಸಾಧ್ಯವಿದ್ದಷ್ಟೂ ಸಾವಿಗೆ ಸಿದ್ಧತೆ ಮಾಡಿಕೊಳ್ಳುತ್ತಿದ್ದೇನೆ. ಇನ್ನು ಕೆಲವು ವರ್ಷಗಳಲ್ಲಿ

ನನ್ನ ತೌರೂರಿಗೆ (ಎಂದರೆ ಭಾರತದೇಶಕ್ಕೆ) ಹೋಗಿ ನೆಲೆಸುತ್ತೇವೆ. ಅಲ್ಲಿ ಎಲ್ಲ ಹೊಣೆಯಿಂದ ನಿವೃತ್ತನಾಗಿ, ಸಾಧನೆಯಲ್ಲಿ ಉಳಿದ ಬದುಕನ್ನು ಕಳೆಯಬೇಕೆಂಬ ಯೋಜನೆಯಿದೆ. ನನಗೆ ಈಗ ಇರುವುದು ಬರಿಯ ವಿದ್ವತ್ತು ಅಷ್ಟೆ; ನೇರವಾದ ಅರಿವಿಲ್ಲ. ಅದನ್ನು ಈಗ ಪಡೆದುಕೊಳ್ಳಬೇಕಾಗಿದೆ" ಎಂದು ಒಕ್ಕಣೆಯಿದೆ.

"When I survey the life of India during the last 3000 years and bear in mind her literature, traditions and ideals, the searchings of her philosophers, and the work of her artists, the music of her sons and daughters, and the nobility of the religion they have evolved, and when from these elements I form in my mind a picture of an ideal India and an ideal earthly life, I confess it is difficult for me to imagine a more powerful source of inspiration, a deeper well of truth to dwell upon".

(ಕಳೆದ 3000 ವರ್ಷಗಳಲ್ಲಿ ಭಾರತ ಬದುಕಿರುವ ಬಗೆಯನ್ನು ನೋಡಿ, ಈ ನಾಡಿನ ಸಾಹಿತ್ಯ, ಪರಂಪರೆ, ಆದರ್ಶಗಳನ್ನು ಗಮನಿಸಿ, ಅಲ್ಲಿನ ದಾರ್ಶನಿಕರು ನಡೆಸಿರುವ ಅನ್ವೇಷಣೆ, ಕಲಾವಿದರು ಮಾಡಿರುವ ಕೆಲಸ, ಈ ನಾಡಿನ ಜನರ ಸಂಗೀತ ಮತ್ತು ಇಲ್ಲಿ ಬೆಳೆದುಬಂದಿರುವ ಧರ್ಮದ ಉದಾತ್ತತೆ ಇವನ್ನೆಲ್ಲ ದೃಷ್ಟಿಯಲ್ಲಿರಿಸಿಕೊಂಡು ನೋಡಿದಾಗ, ಈ ಎಲ್ಲ ವಿವರಗಳಿಂದ ನನ್ನ ಮನಸ್ಸಿನಲ್ಲಿ ಆದರ್ಶಭಾರತದ ಚಿತ್ರವೊಂದನ್ನು ಮೂಡಿಸಿಕೊಂಡಾಗ, ಇದಕ್ಕಿಂತ ಹೆಚ್ಚು ಶಕ್ತಿಯುತವಾದ ಪ್ರೇರಣೆಯ ಉಗಮ ಇರಲಾರದು, ಇದಕ್ಕಿಂತ ಹೆಚ್ಚು ಗಂಭೀರ ವಾದ ಸತ್ಯದ ಸೆಲೆ ಇರಲಾರದು ಎನಿಸುತ್ತದೆ.)

ತ್ರಿಪುರಾಂತಕ

ಹೀಗೆಂದು ಅವರು ತಮ್ಮ 'ದಿ ಡೀಪರ್ ಮೀನಿಂಗ್ ಆಫ್ ಸ್ಟ್ರಗಲ್' (ಪು. 8) ನಲ್ಲಿ ಬರೆದಿದ್ದುದು ಅವರ ಮನದಾಳದಲ್ಲಿ ತಾವು ಭಾರತಕ್ಕೆ ಮರಳಬೇಕೆಂದು ಬಯಸಿದ್ದುದನ್ನು ವಿವರಿಸುತ್ತದೆ.

ಸಿ. ಆರ್. ಆಷ್‌ಬಿ
(ಕುಮಾರಸ್ವಾಮಿಯವರ ಸಹವರ್ತಿ)

ಬೋಸ್ಟನ್ ವಸ್ತುಸಂಗ್ರಹಾಲಯದ 'ಫೆಲೋ' ಹುದ್ದೆಯಿಂದ ನಿವೃತ್ತರಾಗಿ, ಭಾರತದೇಶಕ್ಕೆ ಮರಳಿ, ಹಿಮಾಲಯದಲ್ಲಿ ನೆಲೆಸಿ, 'ವಾನಪ್ರಸ್ಥ' ಎಂಬ ಕಡೆಯ ಆಶ್ರಮವಿಧಿಯನ್ನು ಪೂರೈಸಬೇಕೆಂದು ಆಲೋಚಿಸಿದ್ದರು. ಅವರ ಕಡೆಯ ವರ್ಷಗಳಲ್ಲಿ ವೇದಾಂತಚಿಂತನೆಯೇ ಅವರ ಬದುಕಿನಲ್ಲಿ ಮುಖ್ಯವಾದ ವಿವರವಾಗಿದ್ದಿತು; ಸಾಧನೆಯಲ್ಲಿ ತೊಡಗಬೇಕೆಂದು ತವಕಪಡುತ್ತಿದ್ದರು. ಆದರೆ ಅಮೆರಿಕಕ್ಕೆ ಬಂದ ಯಾವ ವೇದಾಂತಿಯನ್ನೂ ಸ್ವಾಮಿಯನ್ನೂ ಗುರುವೆಂದು ಒಪ್ಪಲು ಸಿದ್ಧರಿರಲಿಲ್ಲ. ಡಾ॥ ಜಾನ್ ಲೆಯಾರ್ಡ್ ಎಂಬ ಮಿತ್ರನಿಗೆ ಅವರು ಬರೆದ ಪತ್ರವೊಂದರಲ್ಲಿ—"ಭಾರತದಿಂದ ಇಲ್ಲಿಗೆ ಬಂದು ವೇದಾಂತ ಹೇಳುವ ಸ್ವಾಮಿಗಳಲ್ಲಿ ನನಗೆ ವಿಶ್ವಾಸವಿಲ್ಲ ; ದಿಟವಾದ ವೇದಾಂತಕ್ಕೂ ಅವರಿಗೂ ತುಂಬ ದೂರ!.... ಸ್ವಾಮಿ ವಿವೇಕಾನಂದರನ್ನೂ ಕೂಡ ಒಪ್ಪಲಾರೆ. ಶ್ರೀರಾಮಕೃಷ್ಣಪರಮಹಂಸರು ಇಂದು ಇದ್ದಿದ್ದರೆ, ಅದು ಬೇರೆ ಮಾತು" ಎಂದು ತಮ್ಮ ಅಳಲನ್ನು ತೋಡಿಕೊಂಡರು. ರಮಣಮಹರ್ಷಿಗಳು ಒಬ್ಬರು ದಿಟವಾದ ವೇದಾಂತಿಗಳಿರಬಹುದೆಂದು ಅವರು ಹೇಳುತ್ತಿದ್ದರು.

ಶಿವ-ಲಿಂಗ
(ಮಾಮಲ್ಲಪುರದತ್ರಿಮೂರ್ತಿಗುಹೆ)

ಮನುಷ್ಯಮಾತ್ರದವರಾದ ಗುರುಗಳಿಗಿಂತ ಶಾಸ್ತ್ರಗ್ರಂಥಗಳನ್ನೇ ಅವಲಂಬಿಸುವುದು ಲೇಸೆಂದು ಅವರ ಅಭಿಪ್ರಾಯ. ಮನುಷ್ಯಸ್ವಭಾವದ ಗುರುಗಳು ಸಂಪ್ರದಾಯದಲ್ಲಿ ತಮಗೆ ಹಿಡಿಸಿದುದನ್ನು ಮಾತ್ರ ಆಯ್ದುಕೊಂಡು, ಅವನ್ನೇ ಎತ್ತಿ ಹಿಡಿದು ಬೋಧಿಸುತ್ತಾರೆ. ಇದು ಆನಂದ ಕುಮಾರಸ್ವಾಮಿಯವರಿಗೆ ಹಿಡಿಸಲಿಲ್ಲ. 1944 ರಲ್ಲಿ ಆಲ್ಡಯ್‌ಸ್ ಹಕ್ಸ್ಲಿ ವೇದಾಂತವನ್ನು ಕುರಿತು ಬರೆದಿದ್ದ ಗ್ರಂಥವೊಂದರ ವಿಚಾರವಾಗಿ ಅವನಿಗೆ ಬರೆದ ಪತ್ರವೊಂದರಲ್ಲಿ—"ಮಹಾಸಂಪ್ರದಾಯಗಳ ವಿಚಾರದಲ್ಲಿ ನನ್ನ ನಿಲುವು ನಿಮ್ಮ ನಿಲುವಿಗಿಂತ ಬೇರೆ. ಸಂಪ್ರದಾಯದಲ್ಲಿ ನಿಮಗೆ ಸರಿಯೆಂದು ತೋರಿದುದನ್ನು ಮಾತ್ರ ಆಯ್ದುಕೊಳ್ಳುತ್ತೀರಿ. ಹಾಗೆ ಮಾಡುವ ಮನಸ್ಸು ನನಗಿಲ್ಲ" ಎಂದು ತಿಳಿಸಿದರು.

ಶಿವ (ಕಾಂಸ್ಯಶಿಲ್ಪ)

1947ರ ಆಗಸ್ಟ್ 22ರಂದು ಸಂಜೆ ಅವರ ಎಪ್ಪತ್ತನೆಯ ವರ್ಷದ ಹುಟ್ಟುಹಬ್ಬವನ್ನು ಅವರ ಮಿತ್ರರೂ ಅಭಿಮಾನಿಗಳೂ ಬೋಸ್ಟನ್ನಿನ ಹಾರ್ವರ್ಡ್ ಕ್ಲಬ್ಬಿನಲ್ಲಿ ಸರಳವಾಗಿ ಆಚರಿಸಿದರು. ಆ ಸಂದರ್ಭದಲ್ಲಿ ಕೆ. ಭರತ ಅಯ್ಯರ್ ಎಂಬುವರು 'ಕಲೆ ಮತ್ತು ಚಿಂತನೆ' ('ಆರ್ಟ್ ಅಂಡ್ ಥಾಟ್') ಎಂಬ ಅಭಿನಂದನಾಗ್ರಂಥವನ್ನೂ, ಮಲಯದಲ್ಲಿದ್ದ ದುರೈರಾಜ ಸಿಂಗಂ ಎಂಬುವರು 'ಪುರಸ್ಕಾರ ಮಾಲೆ' ('ಎ ಗಾರ್ಲೆಂಡ್ ಆಫ್ ಟ್ರಿಬ್ಯೂಟ್ಸ್') ಎಂಬ ಇನ್ನೊಂದು ಪ್ರಶಸ್ತಿಗ್ರಂಥವನ್ನೂ ಅವರಿಗೆ ಸಮರ್ಪಿಸಿದರು. ಸಭೆಯು ಮುಗಿಯುವ ಮೊದಲು ಆನಂದ ಕುಮಾರಸ್ವಾಮಿಯವರ ಭಾಷಣವೂ ನಡೆಯಿತು. ಅವರು "ಮುಂದಿನ ವರ್ಷ ನಾನೂ ನನ್ನ ಹೆಂಡತಿಯೂ ಬೋಸ್ಟನ್ನಿನಿಂದ ಹೊರಟು ಭಾರತದೇಶಕ್ಕೆ ಹಿಂದಿರುಗುತ್ತೇವೆ. ಇದು ನನಗೆ ಅಸ್ತಂಗಮನ. ನಮ್ಮ ಉಳಿದ ಆಯುಸ್ಸನ್ನು ಅಲ್ಲಿಯೇ ಕಳೆಯಬೇಕೆಂದು ನಿಶ್ಚಯಿಸಿದ್ದೇವೆ. ನಮ್ಮ ಮಗ ರಾಮ ಆ ವೇಳೆಗೆ ಸಿಕ್ಕಿಂನಿಂದ ಭಾರತಕ್ಕೆ ಹಿಂದಿರುಗುತ್ತಾನೆ. ಕಾಂಗಡಿಯ ಗುರುಕುಲದಲ್ಲಿ ಸಂಸ್ಕೃತ ಓದುತ್ತಿರುವ ಅವನನ್ನು ಕೂಡಿಕೊಳ್ಳುತ್ತೇವೆ" ಎಂದು ಹೇಳಿ ನೆರೆದವರ ಬೀಳ್ಕೊಡುಗೆಯನ್ನು ಬೇಡಿದರು. ಈ ಭಾಷಣ ಮುಗಿಯುತ್ತಿದ್ದಂತೆ ಅವರ ಆರೋಗ್ಯ ಇದ್ದಕ್ಕಿದ್ದಂತೆ ಕೆಟ್ಟಿತು; ಒಡನೆಯೇ ಅವರ ಹೆಂಡತಿ ದೋನಾ ಅವರನ್ನು ಕಾರಿನಲ್ಲಿ ಮನೆಗೆ ಕರೆದೊಯ್ದರು.

ಕೆಲವು ವಾರಗಳ ಮೇಲೆ ಚೇತರಿಸಿಕೊಂಡರು. ಸೆಪ್ಟೆಂಬರ್ ಒಂಬತ್ತರಂದು ಬೆಳಗ್ಗೆ ಅವರ ಪ್ರಸಿದ್ಧ ಕೃತಿ 'ಶಿವತಾಂಡವ' *(The Dance of Shiva)* ಹೊಸ ಮುದ್ರಣಕ್ಕೆಂದು ಅವರ ಪರಿಷ್ಕರಣಕ್ಕಾಗಿ ಕಾದಿತ್ತು. ಅದನ್ನು ಮುಗಿಸಿದರು. ಮುಗಿಸಿ "ಇನ್ನು ನನ್ನ ಶಿವಕುಣಿತ ಮುಗಿಯಿತು" ಎಂದು ಹೇಳಿದುದು ಆಗಲೇ ಬಂದಿತಷ್ಟೆ. ಆ ವೇಳೆಗೆ ಮನೆಯ ಹೊರಗೆ ತೋಟದಲ್ಲಿ ಅವರ ಹೆಂಡತಿಯೂ, ವಿದ್ಯಾರ್ಥಿ

ರಾಬರ್ಟ್ ಬ್ರೂಸ್ ಎಂಬುವರೂ ಕೆಲಸ ಮಾಡುತ್ತಿದ್ದರು. ರಾಬರ್ಟ್ ಬ್ರೂಸ್ ಕಲಾವಿದನೂ ಆಗಿದ್ದು, ಕೆಲವು ವರ್ಣಚಿತ್ರಗಳನ್ನು ರಚಿಸಿ ಆನಂದ ಕುಮಾರಸ್ವಾಮಿಯವರಿಗೆ ತೋರಿಸಲು ತಂದಿದ್ದ. ಹೆಂಡತಿ ದೋನಾ ಮನೆಯೊಳಗಿದ್ದ ಆನಂದ ಕುಮಾರಸ್ವಾಮಿಯವರನ್ನು ಕರೆದಳು. ಒಡನೆಯೇ ಅವರು ಹೊರಗೆ ಬಂದು ತೋಟವನ್ನೆಲ್ಲ ನೋಡುತ್ತ ನಿಂತರು. ದೋನಾ ಮತ್ತು ಬ್ರೂಸ್ ವರ್ಣಚಿತ್ರಗಳನ್ನು ಕಾರಿನಿಂದ ಹೊರಗೆ ತರಲು ಹೋದರು. ಆನಂದ ಕುಮಾರಸ್ವಾಮಿಯವರೂ ಅವರನ್ನು ಹಿಂಬಾಲಿಸಿ ಹೊರಟರು. ಆದರೆ ಇದ್ದಕ್ಕಿದ್ದಂತೆ ಹೆಂಡತಿಯನ್ನು ಕೂಗಿ ತನ್ನ ತಲೆ ಸುತ್ತುವಂತಾಗುತ್ತಿದೆಯೆಂದರು. ಹೆಂಡತಿಯು ಹಿಂದಿರುಗಿ ಬಂದು, ಅವರನ್ನು ಕೂರಿಸಿಕೊಂಡರು. ಅವರ ಮೇಲೆ ಒರಗಿ ಒಂದೆರಡು ಕ್ಷಣಗಳಲ್ಲೇ ಪ್ರಾಣಬಿಟ್ಟರು.

ದೊಡ್ಡದೊಂದು ಚೇತನ ಹೀಗೆ ಮರೆಯಾಯಿತು. ತಾವು ಬದುಕಿನುದ್ದಕ್ಕೂ ಪ್ರೀತಿಸಿದ ಭಾರತದೇಶಕ್ಕೆ ಹಿಂದಿರುಗಿ, ಅದರ ಸಂಸ್ಕೃತಿಯ ಹಿರಿಮೆಯನ್ನು ತಮ್ಮ ಬಾಳಿನುದ್ದಕ್ಕೂ ಹಾಡಿ ಹೊಗಳಿದುದನ್ನು ಈಗ ಸಾಕ್ಷಾತ್ಕರಿಸಿಕೊಳ್ಳಬೇಕೆಂಬ ಅವರ ಕನಸು ಹಾಗೆಯೇ ಕರಗಿ ಹೋಯಿತು. ಅವರು ನೊಬೆಲ್ ಪಾರಿತೋಷಕವಿಜೇತ ವಿಜ್ಞಾನಿ ಡಾ॥ ಸುಬ್ರಹ್ಮಣ್ಯಂ ಚಂದ್ರಶೇಖರ್ ಅವರಿಗೆ ಬರೆದ ಪತ್ರವೊಂದರಲ್ಲಿ—"The longer I have lived in the United States the more Indian I have become and therefore I shall be happy when I settle down in India" (*ನಾನು ಅಮೆರಿಕಾದೇಶದಲ್ಲಿ ಇದ್ದ ಸುದೀರ್ಘ ಅವಧಿಯಲ್ಲಿ ಬರುಬರುತ್ತ ಹೆಚ್ಚು ಹೆಚ್ಚು ಭಾರತೀಯನೇ ಆಗಿಬಿಟ್ಟಿದ್ದೇನೆ. ಈಗ ಭಾರತದೇಶದಲ್ಲೇ ನೆಲೆಸುವುದು ನನಗೆ ಸಂತೋಷವನ್ನು ತರುತ್ತದೆ.*) ಎಂದು ಆಶಿಸಿದ್ದರು. ಮೆಸ್ಸಚುಸೆಟ್ಸ್‌ನ ನೀಡ್‌ಹ್ಯಾಂನ ತಮ್ಮ ಮನೆಯ ಕೈತೋಟವೇ ಅವರಿಗೆ 'ಅಸ್ತಂಗಮನ' ಸ್ಥಾನವಾಯಿತು; ಅವರು ತಂಗಬೇಕೆಂದು ಬಯಸಿದ್ದ ಹಿಮಾಲಯ ದೂರವಾಗಿಯೇ ಉಳಿಯಿತು. ಅವರ ಪಾರ್ಥಿವಶರೀರವನ್ನು ಅಮೆರಿಕದಲ್ಲಿಯೇ ಸುಡಬೇಕಾಯಿತು. ಆದರೆ ಕರಂಡವೊಂದರಲ್ಲಿ ಶೇಖರಿಸಿದ್ದ ಅವರ ಚಿತಾಭಸ್ಮವನ್ನು ಅವರ ಹೆಂಡತಿ 1965ರ ಸೆಪ್ಟೆಂಬರ್‌ನಲ್ಲಿ ಭಾರತದೇಶಕ್ಕೆ ತಂದು ತ್ರಿವೇಣಿಸಂಗಮದಲ್ಲಿ ಬಿಟ್ಟುಹೋದರು.

ವಿಪುಲವಾದ ಅವರ ಗ್ರಂಥಸಂಗ್ರಹವನ್ನೂ ಚಿತ್ರಗಳನ್ನೂ ಹಸ್ತಪ್ರತಿಗಳನ್ನೂ ಅವರ ಹೆಂಡತಿ ಬೋಲಿಂಗೆನ್ ಪ್ರತಿಷ್ಠಾನಕ್ಕೆ ಕೊಟ್ಟರು; ಆ ಪ್ರತಿಷ್ಠಾನವು ಅದನ್ನೆಲ್ಲ ಪ್ರಿನ್ಸ್‌ಟನ್ ವಿಶ್ವವಿದ್ಯಾನಿಲಯದ ಮುದ್ರಣಾಲಯಕ್ಕೆ ವರ್ಗಾಯಿಸಿತು. ಈಗ ಅವೆಲ್ಲವೂ ಪ್ರಿನ್ಸ್‌ಟನ್ ವಿಶ್ವವಿದ್ಯಾನಿಲಯದ ಫೈರ್‌ಸ್ಟನ್ ಗ್ರಂಥಾಲಯದಲ್ಲಿವೆ. ಅವರ ಹೆಂಡತಿ ದೋನಾ 1970 ರಲ್ಲಿ ತೀರಿಕೊಂಡರು.

ಆನಂದ ಕುಮಾರಸ್ವಾಮಿಯವರು ತಮ್ಮ ಎಪ್ಪತ್ತು ವರ್ಷಗಳ ಬದುಕಿನಲ್ಲಿ ಬಹುಮುಖವಾದ ಪ್ರತಿಭೆಯಿಂದ ಮೆರೆದರು. ಭಾರತದ ಕಲೆಗೆ ಜಗತ್ತಿನಲ್ಲಿ ಮನ್ನಣೆಯನ್ನು ಗಳಿಸಿಕೊಟ್ಟರು. ಭಾರತದಲ್ಲಿ ಕಲೆಯ ಸಂಪ್ರದಾಯವೊಂದು ಇದೆಯೆಂದೇ

ಅರಿಯದಿದ್ದ ಕಾಲದಲ್ಲಿ, ಭಾರತೀಯ ಕಲಾಕೃತಿಗಳನ್ನು ಕಂಡ ವಿದೇಶೀತಜ್ಞರು ಅನಾಗರಿಕವೆಂದು ಮೂದಲಿಸುತ್ತಿದ್ದ ಕಾಲದಲ್ಲಿ ಆನಂದ ಕುಮಾರಸ್ವಾಮಿಯವರು ಜಗತ್ತಿನ ಉಳಿದೆಲ್ಲ ಕಲಾಪ್ರಕಾರಗಳಿಗಿಂತ ಭಾರತೀಯಕಲೆ ಮಿಗಿಲಾದುದೆಂದು ತೋರಿಸಿಕೊಟ್ಟರು. ಅಷ್ಟಲ್ಲದೆ ಭಾರತೀಯದರ್ಶನ ಮಾನವಕೋಟಿಗೇ ಮಂಗಳ ದಾಯಕವಾಗಬಲ್ಲುದೆಂದು ಸೂಚಿಸಿದರು. ತಮ್ಮ ಇಡೀ ಬಾಳುವೆಯನ್ನು ಭಾರತೀಯ ಸಂಸ್ಕೃತಿಯ ಪ್ರತಿನಿಧಿಯಾಗಿ, ವಕ್ತಾರರಾಗಿ ಕಳೆದರು. ಹೀಗೆ ಮಾಡಿ ಕೃತಕೃತ್ಯರಾದರು, ಧನ್ಯರೆನಿಸಿದರು. ಅವರು ವಿಲಿಯಂ ರೊದೆನ್ ಸ್ವೈನ್‌ರಿಗೆ 1910ರ ಜೂನ್ 23ರಂದು ಬರೆದ ಒಂದು ಪತ್ರದಲ್ಲಿ "I want to serve not merely India but humanity and to be absolutely as universal as possible, like the *Avalokitesvara*" (*ನನ್ನ ಆಸೆ ಭಾರತದೇಶಕ್ಕಷ್ಟೆ ಸೇವೆ ಸಲ್ಲಿಸುವುದಲ್ಲ; ಇಡೀ ಮಾನವಸಮಾಜಕ್ಕೆ ನನ್ನ ಸೇವೆ ಸಲ್ಲಬೇಕು. ಅವಲೋಕಿತೇಶ್ವರನ ಆದರ್ಶವನ್ನು ಹಿಡಿದು ಸಾಧ್ಯವಾದಷ್ಟೂ ವಿಶ್ವಕುಟುಂಬಿಯಾಗುವುದು ನನ್ನ ಆಸೆ*) ಎಂದು ತಮ್ಮ ನಿಲುವನ್ನು ವ್ಯಕ್ತಪಡಿಸಿದ್ದರು.

ನಟರಾಜ

ಅಭಿಜ್ಞಾನದ ಪ್ರಕಟಣೆಗಳು

೧.	ಸಾಮಾನ್ಯಧರ್ಮ	ಶತಾವಧಾನಿ ಡಾ॥ ಆರ್. ಗಣೇಶ್	೧೫.೦೦
೨.	ನೀಲಕಂಠದೀಕ್ಷಿತನ ಶತಕತ್ರಯ	ಶತಾವಧಾನಿ ಡಾ॥ ಆರ್. ಗಣೇಶ್	೪೦.೦೦
೩.	ವಂಶೀಸಂದೇಶಂ	ಶತಾವಧಾನಿ ಡಾ॥ ಆರ್. ಗಣೇಶ್	೨೫.೦೦
೪.	ಶ್ರೀಸೂಕ್ತ	ಪ್ರೊ॥ ಸಾ. ಕೃ. ರಾಮಚಂದ್ರರಾವ್	೫೦.೦೦

ಮುಂದಿನ ಪ್ರಕಟಣೆಗಳು

೧.	ತಿರುಪತಿ ತಿಮ್ಮಪ್ಪ	ಪ್ರೊ॥ ಸಾ. ಕೃ. ರಾಮಚಂದ್ರರಾವ್
೨.	ಬುದ್ಧನ ಬೆಳಕು	ಪ್ರೊ॥ ಸಾ. ಕೃ. ರಾಮಚಂದ್ರರಾವ್
೩.	ಈಶಾವಾಸ್ಯೋಪನಿಷತ್ತು	ಪ್ರೊ॥ ಸಾ. ಕೃ. ರಾಮಚಂದ್ರರಾವ್
೪.	ನಿತ್ಯನೀತಿ	ಶತಾವಧಾನಿ ಡಾ॥ ಆರ್. ಗಣೇಶ್
೫.	ಸಂಧ್ಯಾದರ್ಶನ	ಶತಾವಧಾನಿ ಡಾ॥ ಆರ್. ಗಣೇಶ್
೬.	ಕವಿತೆಗೊಂದು ಕಥೆ	ಶತಾವಧಾನಿ ಡಾ॥ ಆರ್. ಗಣೇಶ್
೭.	ಯಜ್ಞ-ದಾನ-ತಪಸ್ಸು	ಶತಾವಧಾನಿ ಡಾ॥ ಆರ್. ಗಣೇಶ್
೮.	ಪ್ರಥಮ ಸೋಪಾನ	ಸ್ವಾಮಿ ಪರಮಾನಂದ ಭಾರತೀ
೯.	ಮೆಲುಗಾಳಿಯ ಮಾತುಗಳು	ಡಾ॥ ಟಿ. ವಿ. ವೆಂಕಟಾಚಲಶಾಸ್ತ್ರೀ
೧೦.	ವಿದ್ವಾನ್ ಎನ್. ರಂಗನಾಥಶರ್ಮರ ಸಮಗ್ರ ಲೇಖನಗಳು	ಸಂ: ಶತಾವಧಾನಿ ಡಾ॥ ಆರ್. ಗಣೇಶ್
೧೧.	ಸೂಕ್ತಿಸಂಪುಟ	ಶತಾವಧಾನಿ ಡಾ॥ ಆರ್. ಗಣೇಶ್
೧೨.	ಗಣಿತಕೋವಿದ ಆರ್ಯಭಟ	ಡಾ॥ ಎಸ್. ಬಾಲಚಂದ್ರರಾವ್